TIGHT BINDING BOOK

UNIVERSAL LIBRARY
OU_198223
UNIVERSAL LIBRARY

OSMANIA UNIVERSITY LIBRARY

Call No. K921/B38Y Accession No. K1833

Author ಯಲ್ಲೋ ಗುಡ್ಡೋ ಕುಲಕರ್ಣಿ

Title ಶ್ರೀ ಬನಶಂಕರೀ ಮಹಾತ್ಮ್ಯ

This book should be returned on or before the date last marked below.

# ಶ್ರೀ ಬನಶಂಕರೀ ಮಾಹಾತ್ಮ್ಯ

(ಶ್ರೀ ಶಾಕಂಭರೀ ಮಾಹಾತ್ಮ್ಯ.)

ಲೇಖಕ—

ಯಲ್ಲೋ ಗುಡ್ಡೋ ಕುಲಕರ್ಣಿ,

ಎಡಿಟರ, ಸ. ಚ., ಆನಂದವನ.

ಪ್ರಕಾಶಕ—

ಭಿಕಾಜಿ ಪರಶುರಾಮಪಂತ ಕಾಳೆ,

ಮ್ಯಾನೇಜರ, ಶ್ರೀ ಶೇಷಾಚಲ ಪ್ರಿಂಟಿಂಗ ಪ್ರೆಸ್ಸ,

ಆನಂದವನ.

[ದ್ವಿತೀಯ ಮುದ್ರಣ.]

ಆನಂದವನ-ಅಗಡಿಯ ಶ್ರೀ ಶೇಷಾಚಲ ಪ್ರಿಂಟಿಂಗ ಪ್ರೆಸ್ಸಿನಲ್ಲಿ

ಭಿ. ಪ. ಕಾಳೆ ಇವರಿಂದ ಮುದ್ರಿಸಲ್ಪಟ್ಟಿತು.

ಈ ಪುಸ್ತಕದ ಎಲ್ಲ ಹಕ್ಕುಗಳು ಪ್ರಕಾಶಕರಿಂದ ಕಾದಿಡಲ್ಪಟ್ಟಿವೆ.

1922.

ಬೆಲೆ ೮ ಆಣೆ.

# ಪ್ರಸ್ತಾವನೆ

ಶ್ರೀ ದೇವಿಯ ಅನಂತ ಅವತಾರಗಳಲ್ಲಿ ಶ್ರೀ ಶಾಕಂಭರಿ ಅಥವಾ ಬನಶಂಕರಿಯ ಅವತಾರವು ಒಂದಾಗಿರುತ್ತದೆ. ಈ ದೇವಿಯ ಪುಣ್ಯಸ್ಥಳವು ವಿಜಾಪೂರ ಜಿಲ್ಲೆಗೆ ಸೇರಿದ ಬಾದಾಮಿ ತಾಲೂಕಿನಲ್ಲಿ ಮಲಾಪಹಾರೀತೀರದಲ್ಲಿ ನಮ್ಮ ಕರ್ನಾಟಕಕ್ಕೆ ಅಲಂಕಾರಪ್ರಾಯವಾಗಿ ಒಪ್ಪುತ್ತಿರುವದು. ಭರತಭೂಮಿಯ ಬೇರೆ ಬೇರೆ ಭಾಗಗಳಲ್ಲಿ, ವಿಶೇಷವಾಗಿ ನಮ್ಮ ಕರ್ನಾಟಕದಲ್ಲಿ ಶ್ರೀ ಶಾಕಂಭರಿಯ ಭಕ್ತರು ಬಹಳ; ಆ ಮಹಾದೇವಿಯು ಹಲವು ಕುಟುಂಬಗಳಲ್ಲಿ ಕುಲಸ್ವಾಮಿನಿಯಾ ಳು; ತಮ್ಮ ಕುಲದೇವತೆಯ ಮಹಿಮೆಯು ತಮಗೆ ತಿಳಿಯಬೇಕೆಂದು ಪ್ರತಿ ರೂ ಬಯಸುವದು ಸ್ವಾಭಾವಿಕವಾಗಿರುವದು!

ಶ್ರೀ ಬನಶಂಕರೀ ಮಾಹಾತ್ಮ್ಯವು ಸ್ಕಂದಪುರಾಣದಲ್ಲಿ ವರ್ಣಿಸಲ್ಪಟ್ಟಿರು ಅದು ಸಂಸ್ಕೃತಭಾಷೆಯಲ್ಲಿದ್ದುದರಿಂದ ನಮ್ಮ ಶಾಕಂಭರಿಯ ಕನ್ನಡ ಭಕ್ತರ ಸಲುವಾಗಿ ಪರಿಶ್ರಮಬಟ್ಟು ಸಂಸ್ಕೃತ ಶಾಕಂಭರೀ ಮಾಹಾತ್ಮ್ಯವನ್ನು ಕನ್ನಡದಲ್ಲಿ ಸುರಸವಾಗಿ ಭಾಷಾಂತರಿಸಲಾಗಿದೆ. ಇದರಲ್ಲಿ ಶ್ರೀ ದೇವಿಯ ಸ್ಥಾನವಾದ ತಿಲಕವನದ ಮಹಿಮೆ, ರಾಜನೀತಿ, ಪತಿವ್ರತಾಧರ್ಮ, ನಿಜವಾದ ತೀರ್ಥಸ್ನಾನಾದಿಗಳ ರಹಸ್ಯ, ಶ್ರೀ ದೇವಿಯ ಭಕ್ತವಾತ್ಸಲ್ಯ ಇವೇ ಮೊದಲಾದ ವಿಷಯಗಳು ಬಹು ಹೃದಯಂಗಮವಾಗಿ ವಿವರಿಸಲ್ಪಟ್ಟಿರುವವು. ಇದರಲ್ಲಿಯ ಸುರಸ ಪ್ರಸಂಗಗಳನ್ನೂ ಭಕ್ತಿವರ್ಧಕ ತೀರ್ಥಮಹಿಮೆಗಳನ್ನೂ ಭಾಷಾಂತರಿಸುವಾಗ ನಮ್ಮ ಹೃದಯವು ಉಕ್ಕಿಬರುತ್ತಿತ್ತು! ಯಾಕಂದರೆ, ಇದರಲ್ಲಿಯ ಸದ್ಬೋಧಗಳೇ ಅಷ್ಟು ಮಹತ್ವದವಾಗಿರುವವು.

ಈ ಮಾಹಾತ್ಮ್ಯೆಯ ಪ್ರಥಮ ಮುದ್ರಣದ ಎಲ್ಲ ಪ್ರತಿಗಳು ತೀರಿಹೋ ದ್ದರಿಂದ ಇದು ಶ್ರೀ ದೇವಿಯ ಭಕ್ತರಿಗೆ ಎಷ್ಟು ಪ್ರಿಯವಾಗಿದೆಯೆಂಬದು ವಾಗುತ್ತದೆ. ಶ್ರೀ ಬನಶಂಕರಿಯ ಒಕ್ಕಲಾದವರು ಈ ದ್ವಿತೀಯ ಮುದ್ರ ಪುಸ್ತಕವನ್ನು ಕೊಂಡುಕೊಂಡು ತಮ್ಮ ಕುಲಸ್ವಾಮಿನಿಯ ಚರಿತ್ರಗ್ರಹಣ ಮಾ ಬೇಕೆಂದು ಪ್ರಾರ್ಥಿಸುವೆವು.

ಆನಂದವನ, ತಾ|| ೨೦-೧೧-೨೨ } ವಿಧೇಯ, ವಾಯ್. ಜಿ. ಕುಲಕರ್ಣಿ.

# ಶ್ರೀ ಬನಶಂಕರೀ ಮಹಾತ್ಮ್ಯೆ.

## ೧ ನೆಯ ಅಧ್ಯಾಯ.

### ತಿಲಕ ವನದ ಶ್ರೇಷ್ಠತೆ.

ಪ್ರಾಚೀನ ಕಾಲದಲ್ಲಿ ಋಷಿಗಳು ಸೂತರನ್ನು ಕುರಿತು,—''ಹೇ ಮಹಾನು ಭಾವನೇ, ನೀನು ಸರ್ವಾರ್ಥಗಳ ತತ್ವಗಳನ್ನೂ ಸರ್ವ ಶಾಸ್ತ್ರ ಗಳನ್ನೂ ತಿಳಿದಿರುತ್ತೀ; ಆದ್ದರಿಂದ ಈ ಲೋಕದಲ್ಲಿ ಶ್ರೇಷ್ಠವಾದ ತೀರ್ಥ, ಶ್ರೇಷ್ಠ ವಾದ ದೈವತ, ಶ್ರೇಷ್ಠವಾದ ಕ್ಷೇತ್ರ ಈ ಮೂರೂ ಏಕತ್ರವಾಗಿ ಯಾವ ಸ್ಥಳದಲ್ಲಿ ಇರುವವು? ಎಂಬದನ್ನು ನಮಗೆ ಹೇಳು'' ಎಂದು ಕೇಳಿದರು. ಆಗ ಸೂತರು— ''ಎಲೈ ಪಾಪರಹಿತರಾದ ಋಷಿಗಳೇ, ನಿಮ್ಮ ಪ್ರಶ್ನೆಗೆ ಉತ್ತರವನ್ನು ಹೇಳುತ್ತೇನೆ ಕೇಳಿರಿ:—

ಜಂಬೂ ದ್ವೀಪದಲ್ಲಿ ಮಹಾಕೂಟವೆಂಬ ಮಹತ್ವದ ಕ್ಷೇತ್ರವಿರುವದು. ಅದು ಎಲ್ಲ ಕ್ಷೇತ್ರಗಳಲ್ಲಿ ಅತ್ಯುತ್ಕೃಷ್ಟವಾದದ್ದು; ಆದರ ಮಹಿಮೆಯನ್ನು ಹೇಳುವ ಮೊದಲು ನಿಮಗೆ ಆ ದೊಡ್ಡ ಕ್ಷೇತ್ರದ ಪಕ್ಕದಲ್ಲಿರುವ ಶ್ರೀ ಶಂಕರೀ ಸ್ಥಾನದ ಮಾಹಾತ್ಮ್ಯೆಯನ್ನು ವಿವರಿಸುತ್ತೇನೆ, ಕೇಳಿರಿ. ಈ ಮಾಹಾತ್ಮ್ಯೆಯನ್ನು ಜಗನ್ಮಾತೆಯ ಸುತನಾದ ಸ್ಕಂದನು ಋಷಿಗಳನ್ನು ಕುರಿತು ಹೇಳಿರುತ್ತಾನೆ. ಆ ಪವಿತ್ರಕರವಾದ ಇತಿಹಾಸವನ್ನು ಸಾವಧರಾಗಿ ಕೇಳಿರಿ.

ಒಂದಾನೊಂದು ಕಾಲದಲ್ಲಿ ಕಲಶೋದ್ಭವನಾದ ಆಗಸ್ತ್ಯನು ಈ ಭೂ ಮಂಡಲದಲ್ಲಿಯ ತೀರ್ಥಗಳನ್ನೆಲ್ಲ ನೋಡಬೇಕೆಂಬ ಪ್ರೀತಿಯಿಂದ ತನ್ನ ಶಿಷ್ಯ ಸಮು ದಾಯದೊಡನೆ ಎಲ್ಲ ತೀರ್ಥಗಳಿಗೆ ಹೋಗಿ ಅಲ್ಲಲ್ಲಿ ಸ್ನಾನ ಮಾಡುತ್ತ ಕುಲಾಚಲ ಪರ್ವತಕ್ಕೆ ಬಂದನು. ಆ ಪರ್ವತವು ಪಾಟಲ, ಅಶೋಕ, ಲಿಂಬ, ಹಲಸು, ಮಾವು ಮೊದಲಾದ ವೃಕ್ಷಗಳಿಂದ ವಿಭೂಷಿತವಾಗಿತ್ತು. ಗಿಳಿ, ಪಾರಿವಾಳ ಮೊದಲಾದ ಪಕ್ಷಿಗಳೂ, ನಾನಾ ಜಾತಿಯ ಮೃಗಗಳೂ ಅಲ್ಲಿ ಮನೆ ಮಾಡಿಕೊ

ದಿದ್ದವು; ಮಧುಮತ್ತವಾದ ಭ್ರಮರಗಳ ಧ್ವನಿಯಿಂದ ಅದು ಪೂರ್ಣ ನಿನಾದ ಮಯವಾಗಿತ್ತು. ಆ ಪರ್ವತದಲ್ಲಿರುವ ಒಂದು ಚಿಕ್ಕ ಸರೋವರದ ನೀರು ಗಾಳಿ ಯಿಂದ ಬಾಗುವ ಕಮಲಗಳ ಧೂಳಿಯಿಂದ ಕಲಕಾಗಿದ್ದವು. ಹಂಸಕಾರಂಡವ ಪಕ್ಷಿಗಳಿಂದ ಆ ಸರೋವರವು ತುಂಬಿ ಹೋಗಿತ್ತು; ಚಕ್ರವಾಕ ಹಂಸ ಮೊದಲಾದ ಜಲದಲ್ಲಿ ವಾಸಿಸುವ ಪಕ್ಷಿಗಳಿಂದಲೂ, ನೆಲದಮೇಲೆ ವಾಸಮಾಡಿಕೊಂಡಿರುವ ಪಕ್ಷಿಸಮೂಹದಿಂದಲೂ ಆ ಪರ್ವತವು ಸುಶೋಭಿತವಾಗಿತ್ತು. ಇಂಥ ರಮ್ಯ ವಾದ ಆ ಕುಲಾಚಲಪರ್ವತದಲ್ಲಿ ಸುದ್ಯುಮ್ನನೆಂಬ ರಾಜಶ್ರೇಷ್ಠನು ಪದ್ಮಾಸನ ವನ್ನು ಹಾಕಿಕೊಂಡು, ಕಣ್ಣುಗಳನ್ನು ಮುಚ್ಚಿಕೊಂಡು ಹರಿಧ್ಯಾನಪರನಾಗಿ ಕುಳಿ ತಿದ್ದನು. ಅಗಸ್ತ್ಯಮುನಿಯು ಶಾಂತನೂ, ದಂಭಭೇದರಹಿತನೂ ಆದ ಆ ರಾಜ ನನ್ನು ದೈವ ಯೋಗದಿಂದ ನೋಡಿದನು. ಆ ರಾಜನನ್ನು ನೋಡಿದ ಕೂಡಲೆ ಅಗಸ್ತ್ಯಮುನಿಗಳ ಅಹಂಕಾರವು ನಾಶವಾಯಿತು. ಆಗ ಮುನಿಯು ತನ್ನ ಶಿಷ್ಯ ರನ್ನು ಕುರಿತು, "ಎಲೈ ಶಿಷ್ಯರೆ, ಇದೇನಾಶ್ಚರ್ಯವು? ನಾವು ಈ ದುಷ್ಟನ ಆಶ್ರಮಕ್ಕೆ ಬಂದೆವಲ್ಲ? ಇವನು ಕಣ್ಣು ತೆರೆದರೂ ಹರಿಧ್ಯಾನ ನಿಮಿತ್ಯದಿಂದ ನಮ್ಮ ಸಂಗಡ ಮಾತಾಡದೆ ಸುಮ್ಮನೇ ಇರುವನು; ಇವನು ನಮಗೆ ಸನ್ಮಾನ ವನ್ನು ಮಾಡಲಿಲ್ಲ; ಮಂದಭಾಗ್ಯನಾದ ಇವನು ಪಶು ಸಮಾನನಿರುವನು; ತನ್ನ ಆಶ್ರಮಕ್ಕೆ ಬಂದಂಥ ನಮಗೆ ಆದರಸತ್ಕಾರವನ್ನು ಮಾಡಲಿಲ್ಲ. ಮಹಾರತ್ನಗಳ ಮೂಲಸ್ಥಾನವಾದ ಸಾಗರವನ್ನು ಕುಡಿದಂಥ ನನ್ನ ಪ್ರಭಾವವು ಈ ದುರ್ಮತಿಗೆ ಗೊತ್ತಿಲ್ಲವೆಂದು ಕಾಣುತ್ತದೆ. ಇವನು ನಮ್ಮನ್ನು ತಿರಸ್ಕಾರ ಮಾಡಿರುವನೆಂದು ತಿಳಿಯಿರಿ. ಇವನು ಬಹು ಕಾಲದಿಂದ ಆಚರಿಸುತ್ತಿದ್ದ ತನ್ನ ತಪಸ್ಸನ್ನು ತಾನೇ ನಾಶ ಮಾಡಿಕೊಂಡಂತಾಯಿತು. ಪೂಜ್ಯರಿಗೆ ಸನ್ಮಾನವನ್ನು ಕೊಡದೆ ಇರುವದ ರಿಂದ ಶ್ರೇಯಸ್ಸಿಗೆ ಪ್ರತಿಬಂಧವಾಗುತ್ತದೆ. ಯಾವನ ಧ್ಯಾನದಲ್ಲಿ ಈ ರಾಜನು ನಿರತನಾಗಿರುವನೋ, ಅಂಥ ಆ ಪ್ರಭುವು ಕೂಡ ಬ್ರಾಹ್ಮಣರಿಗೆ ತಲೆಬಾಗಿ ನಡೆಯು ತ್ತಾನೆ. ಬ್ರಾಹ್ಮಣರೇ ದೇವರೆಂದು ಭಾವಿಸುವ ಶ್ರೀ ಹರಿಯ ಧ್ಯಾನ ಮಾಡುವ ದಕ್ಕೆ ಇವನು ಯೋಗ್ಯನಲ್ಲ. ಹರಿಪಾದಾಂಬುಜವನ್ನು ಸಾತ್ವಿಕ ಭಕ್ತರೇ ಭಜಿಸತ ಕ್ಕದ್ದು. ತಮೋಗುಣ ಯುಕ್ತನೂ, ದುಷ್ಟ ಹೃದಯವುಳ್ಳವನೂ ಆದ ಇವನಿಗೆ ಹರಿಧ್ಯಾನ ಮಾಡಲಿಕ್ಕೆ ಅಧಿಕಾರವಿಲ್ಲ. ಆದ್ದರಿಂದ ಇವನನ್ನು ದಂಡಿಸುವದು ಯೋಗ್ಯವು" ಎಂದು ಮಾತಾಡಿ, ಆ ಮುನಿಯು—'ನೀನು ಮದೋನ್ಮತ್ತವಾದ ಆನೆಯಾಗು' ಎಂದು ಆ ರಾಜನಿಗೆ ಶಾಪವನ್ನು ಕೊಟ್ಟನು. ಮುನಿಗೆ ಪ್ರತಿಶಾಪ

ವನ್ನು ಕೊಡಲಿಕ್ಕೆ ಸಾಮರ್ಥ್ಯವಿದ್ದರೂ ಶ್ರೀ ಹರಿಯ ಉಪಾಸಕನಾದ ಅವನು ಪ್ರತಿ ಶಾಪವನ್ನು ಕೊಡಲಿಲ್ಲ. ಆದರೆ ಆ ರಾಜನು ಶ್ರೀ ಹರಿಯ ಸ್ತೋತ್ರವನ್ನು ಮಾತ್ರ ಮಾಡಹತ್ತಿದನು. "ಭಕ್ತವತ್ಸಲನಾದ ಹರಿಯೇ, ಕೃಪಾ ನಿಧಿಯೇ, ನೀನು ಭವಪಾಶ ವಿಮೋಚಕನು. ನಾನು ಯಾವ ಪಾಪ ಮಾಡಿದ್ದರಿಂದ ನನಗೆ ಇಂಥ ದುಷ್ಟ ಶಿಕ್ಷೆಯು ವಿಧಿಸಲ್ಪಟ್ಟಿತೋ ನೀನೇ ತಿಳಿಯಬಲ್ಲೆ! ಜಗತ್ಪತಿಯಾದ ಹರಿಯೇ, ನಾನು ದುಷ್ಟ ಯೋನಿಯಲ್ಲಿ ಜನ್ಮವೆತ್ತುವದಕ್ಕೆ ಅಂಜುವದಿಲ್ಲ. ಆದರೆ ನಾನು ಗಜಶ್ರೇಷ್ಠನಾಗಿ ಜನ್ಮಿಸಿದರೆ ನಿನ್ನ ಚರಣಕಮಲದ ಧ್ಯಾನಹಾನಿಯು ಸಂಭವಿಸುವದೆಂಬ ಹೆದರಿಕೆಯು ಮಾತ್ರ ನನಗೆ ಅದೆ. ಹೇ ಜಗನ್ನಾಥನೇ, ನೀನು ಭಕ್ತವತ್ಸಲನಾಗಿದ್ದರೆ, ಹಾಗು ನನಗೆ ಅಹಿತವನ್ನು ಮಾಡಬಾರದೆಂದು ನೀನು ಇಚ್ಛಿಸುತ್ತಿದ್ದರೆ ದುಷ್ಟಯೋನಿಯಲ್ಲಿ ನಾನು ಸಂಭವಿಸಿದಾಗ್ಯೂ ನಿನ್ನ ಚರಣಕಮಲಗಳ ಚಿಂತವವನ್ನು ಕೊಡು" ಎಂದು ಆ ರಾಜನು ಸ್ತೋತ್ರಮಾಡಿದನು. ಈ ಪ್ರಕಾರ ಅವನು ಮಾಡಿದ ಸ್ತುತಿಯನ್ನು ಕೇಳಿ ಭಕ್ತವತ್ಸಲನಾದ ಶ್ರೀ ಹರಿಯು, "ರಾಜನೇ, ಹೆದರಬೇಡ" ಎಂದು ಅವನಿಗೆ ಅಭಯವನ್ನಿತ್ತನು. ಬಳಿಕ ಗರುಡಧ್ವಜನೂ ಪೀತಾಂಬರಧಾರಿಯೂ, ಘನಶ್ಯಾಮನೂ, ಶಂಖ ಚಕ್ರ ಗದಾಧರನೂ ಆದ ಶ್ರೀಹರಿಯು ತನ್ನ ಮುಂದೆ ಸುಮ್ಮನೆ ನಿಂತ ರಾಜನನ್ನು ಕುರಿತು—"ಹೇ ರಾಜನೇ, ಕರ್ಮಶೇಷದಿಂದ ನೀನು ಗಜಯೋನಿಯಲ್ಲಿ ಉತ್ಪನ್ನನಾಗು. ಮುಂದೆ ಅಂತ್ಯಕಾಲದಲ್ಲಿ ನಿನಗೆ ನನ್ನ ಸ್ಮರಣವಾಗುವದು. ನಾನು ನನ್ನ ಪಾರ್ಷದ ಗಣಗಳಲ್ಲಿ ನಿನ್ನನ್ನು ಸೇರಿಸಿಕೊಳ್ಳುವೆನು. ಪಾರ್ಷದತ್ವವು ಅನೇಕ ಯಜ್ಞ ಯಾಗಾದಿಗಳನ್ನು ಮಾಡಿದವರಿಗೂ ದೊರೆಯುವದಿಲ್ಲ. ಎಲೈ ರಾಜನೇ, ನೀನು ಯಾರಿಂದ ಶಪಿಸಲ್ಪಟ್ಟಿರುವೆಯೋ ಆ ಮುನಿಯು ಅನೇಕ ಅನರ್ಥಗಳಿಗೆ ಒಳಗಾಗುವನು. ಎರಡನೆಯವರಿಗೆ ದುಃಖಕೊಡುವವನು ತಾನೇ ದುಃಖಕ್ಕೆ ಭಾಗಿಯಾಗಬೇಕಾಗುವದು" ಎಂದು ಮಾತಾಡಿದನು. ಹೀಗೆ ರಾಜನಿಗೆ ಹೇಳಿ ವಿಷ್ಣುವು ತನ್ನ ಪಾರ್ಷದಗಣಗಳೊಡನೆ ವೈಕುಂಠಪುರಕ್ಕೆ ಹೋದನು.

ಮುಂದೆ ಕೆಲಕಾಲದ ಮೇಲೆ ದಿವ್ಯಶರೀರಿಯಾದ ನಾರದನು ಲೋಕಸಂಚಾರ ಮಾಡುತ್ತ ವೈಕುಂಠಕ್ಕೆ ಬಂದನು. ಆಗ ಸುಖಾಸನದ ಮೇಲೆ ಕುಳಿತಂಥ ಶ್ರೀ ಹರಿಯು ನಾರದನನ್ನು ಕುರಿತು 'ಹೇ ಮುನಿಶ್ರೇಷ್ಠನೇ, ದುರಾತ್ಮನಾದ ಅಗಸ್ತ್ಯನ ದುಷ್ಟ ಬುದ್ಧಿಯನ್ನು ನೋಡು. ನಿರ್ಮಮತೆಯುಳ್ಳವನೂ ನಿರಹಂಕಾರಿಯೂ ಆದ ಸದ್ಯುಮ್ನ ರಾಜನಿಗೆ ಇವನು ನಿಷ್ಕಾರಣವಾಗಿ ಶಾಪವನ್ನು ಕೊಟ್ಟಿರುವನು;

ಆದ್ದರಿಂದ ನೀನು ಬೇಗನೆ ಅವನಿಗೆ ವಿಘ್ನವನ್ನುಂಟುಮಾಡು. ಉತ್ತರ ದಕ್ಷಿಣ ಕಾಶಿಗಳಲ್ಲಿ ಆ ಮಹಾ ಮುನಿಯಾದ ಅಗಸ್ತ್ಯನ ವಾಸಸ್ಥಾನಗಳಿರುವವು; ನೀನು ಅವನ ಭುಕ್ತಿಮುಕ್ತಿಗಳ ವಿನಾಶವನ್ನು ಮಾಡುವಂಥ ವಿಘ್ನವನ್ನು ಉಂಟುಮಾಡ ತಕ್ಕದ್ದು. ನಾನು ಪೂರ್ವದಲ್ಲಿ ಎರಡು ಕಾಶೀ ಪಟ್ಟಣಗಳನ್ನು ನಿರ್ಮಾಣ ಮಾಡಿದೆನು. ಉತ್ತರದೇಶದಲ್ಲಿ ಕಾಶಿಯು ವಿಖ್ಯಾತವಾಯಿತು, ದಕ್ಷಿಣದೇಶದಲ್ಲಿ ಕರವೀರವು ಹೆಸರು ಪಡೆಯಿತು. ಕಾಶಿಯಲ್ಲಿ ನಾನು ಸದಾಕಾಲ ವಿಶ್ವೇಶ್ವರ ರೂಪದಿಂದ ಇರುವೆನು. ಅಲ್ಲಿ ವಾಸಮಾಡಿಕೊಂಡಿರುವ ಸರ್ವರಿಗೂ ನಾನು ಮೋಕ್ಷವನ್ನು ಕೊಡುವೆನು. ನಾನು ಸಕಲ ಮನುಜರಿಗೆ ತಾರಕ ಮಂತ್ರೋಪದೇಶಮಾಡಿ ಅವರಿಗೆ ಹಿತವನ್ನೇ ಮಾಡುವೆನು! ದಕ್ಷಿಣಕಾಶಿಯಾದ ಕರವೀರ(ಕೊಲ್ಲಾಪುರ)ದಲ್ಲಿ ಶಕ್ತಿರೂಪದಿಂದ ಇದ್ದು ಭೋಗ ಮೋಕ್ಷಗಳನ್ನು ಕೊಡುವದಕ್ಕೋಸ್ಕರ ನಾನು ಶಕ್ತಿಯ ರೂಪವನ್ನು ಧಾರಣ ಮಾಡಿದೆನು. ಸಾಕ್ಷಾತ್ ವಿಷ್ಣುಸ್ವರೂಪದಿಂದ ನಾನು ಮುಕ್ತಿಯನ್ನು ಕೊಡುವವನೇ ಹೊರತು, ಭೋಗಗಳನ್ನು ಕೊಡುವವನಲ್ಲ; ಅಯೋಧ್ಯೆ, ಮಧುರೆ, ಮಾಯಾ, ಕಾಶೀ, ಅವಂತಿಕಾ, ಪುರೀ, ದ್ವಾರಾವತಿ ಇವು ಏಳು ಪುರಿಗಳು ಮನುಷ್ಯರಿಗೆ ಮೋಕ್ಷವನ್ನು ಮಾತ್ರ ಕೊಡುವವು. ಕರ-ವೀರ, ವಿರೂಪಾಕ್ಷ (ಹಂಪಿ), ಶ್ರೀಶೈಲ, ಪಾಂಡುರಂಗ, (ಪಂಢರಪುರ) ತಿಲಕ, ಸೇತುಬಂಧ ಇವು ಆರು ಮನುಜನಿಗೆ ಭುಕ್ತಿ ಮುಕ್ತಿ ಪ್ರದಾಯಕಗಳಾಗಿರುವವು. ಮೇಲೆ ಹೇಳಿದ ಏಳು ಪುರಿಗಳಲ್ಲಿ ಕಾಶೀ ಕ್ಷೇತ್ರವು ಮಹತ್ತರವಾದ ಸುಕ್ಷೇತ್ರವಾಗಿರುವದು. ಭುಕ್ತಿ ಮುಕ್ತಿಗಳನ್ನು ಕೊಡುವ ಈ ಆರು ಕ್ಷೇತ್ರಗಳಲ್ಲಿ ವಿಂಧ್ಯಾದ್ರಿಯ ದಕ್ಷಿಣ ಪ್ರದೇಶದಲ್ಲಿರುವ ಶಂಕರೀಕ್ಷೇತ್ರವು ಉತ್ತಮವಾದದ್ದು; ನಾನು ಶಿವ ಹಾಗು ಶಕ್ತಿ ಇವರ ಕ್ಷೇತ್ರಗಳನ್ನು ಸಮಸಮಾನ ಫಲಪ್ರದಗಳಾಗುವಂತೆ ನಿರ್ಮಿಸಿದ್ದಾಗ್ಯೂ, ಶಕ್ತೀ ಕ್ಷೇತ್ರಗಳು ಅಧಿಕವಾಗಿರುತ್ತವೆ. ಅದರೊಳಗೂ ತಿಲಕವನವು ಅಂದರೆ ಶಂಕರೀಬನವು ಶ್ರೇಷ್ಠವಾದದ್ದು. ಪೂರ್ವದಲ್ಲಿ ಶಿವ ಶಕ್ತಿ ಇವರ ನಡುವೆ ವಾದವುಂಟಾದಾಗ ಶಿವನು ''ನನ್ನ ಕ್ಷೇತ್ರವು ಶ್ರೇಷ್ಠವೆಂದು'' ಅಂದನು. ಶಕ್ತಿಯು ನನ್ನ ಕ್ಷೇತ್ರವೇ ಶ್ರೇಷ್ಠವೆಂದು ಅನ್ನಹತ್ತಿದಳು. ಅವರ ವಿವಾದವನ್ನು ನಿಲ್ಲಿಸುವದಕ್ಕೋಸ್ಕರ ನಾನು ತಕ್ಕಡಿಯನ್ನು ತೆಕ್ಕೊಂಡು ಅವುಗಳ (ಕ್ಷೇತ್ರಗಳ) ಶ್ರೇಷ್ಠತ್ವವನ್ನು ತೂಗಿ ನೋಡಿದೆನು. ಶಿವಕ್ಷೇತ್ರವು ಮುಕ್ತಿಪ್ರದವಾಗಿರುವದು ನಿಜ. ಆದರೆ ಶಿವಕ್ಷೇತ್ರಕ್ಕಿಂತ ಭುಕ್ತಿ ಮುಕ್ತಿ ಪ್ರದವಾದ ತಿಲಕ ವನವು ಅಧಿಕ ಶ್ರೇಷ್ಠವಾದದ್ದೆಂದು ಗೊತ್ತಾಯಿತು. ಆ ಶಕ್ತೀ ಕ್ಷೇತ್ರದ ವಾಸವು ಪುಣ್ಯವಂತ

ರಿಗೆ ಮಾತ್ರ ಸಿಗುವದು. ನನ್ನ ಭಕ್ತರನ್ನು ದ್ವೇಷಿಸುವವರು ಮುನಿಶ್ರೇಷ್ಠರಾದರೂ ಅವರು ದಕ್ಷಿಣ, ಉತ್ತರ ಕಾಶಿಗಳಲ್ಲಿ ಇರಲಿಕ್ಕೆ ಸಮರ್ಥರಾಗುವದಿಲ್ಲ. ಆದ್ದರಿಂದ ಈ ಕಾಶೀವಾಸಪರಾಯಣನಾದ ಅಗಸ್ತ್ಯ ಮುನಿಯನ್ನು ಈ ಎರಡೂ ಕ್ಷೇತ್ರಗಳಿಂದ ಹೊರಗೆ ಹಾಕತಕ್ಕದ್ದು. ಅಹಂಕಾರದಿಯನ್ನು ಹಿಡಿದ ಆ ಮುನಿಗೆ ಇದೇ ಶಿಕ್ಷೆಯು ಯೋಗ್ಯವಾದದ್ದು. ನನ್ನ ಆಜ್ಞೆಯಿಂದ ನೀನು ಅಲ್ಲಿಗೆ ಹೋಗಿ ದುರ್ಬುದ್ಧಿಯಾದ ಆ ಅಗಸ್ತ್ಯನನ್ನು ಆ ಕ್ಷೇತ್ರಗಳಿಂದ ಹೊರಹೊರಡಿಸಬೇಕು.'' ಎಂದು ಹೇಳಿದನು.

---

## ೨ ನೆಯ ಅಧ್ಯಾಯ

### ವಿಂಧ್ಯಾದ್ರಿಯ ಅಭಿವೃದ್ಧಿಯೂ, ದೇವತೆಗಳಿಗೆ ಬ್ರಹ್ಮದೇವರ ಅಭಯವಚನವೂ

ಶ್ರೀ ಸ್ಕಂದನು:—''ಈ ಮೇರೆಗೆ ಭಗವಂತನ ಅಪ್ಪಣೆಯಾದ ಬಳಿಕ ನಾರದರು ಪುನಃ ಪುನಃ ಮನಸ್ಸಿನಲ್ಲಿ ವಿಚಾರಮಾಡುತ್ತ ಹೊರಟರು. ಆ ಮಹಾಮುನಿಯು, ನಾನು ಮುಂದೆ ಹ್ಯಾಗೆ ಮಾಡಬೇಕು? ಅಗಸ್ತ್ಯ ಮುನಿಯ ಸಂಗಡ ದ್ವೇಷವನ್ನು ಕಟ್ಟಿಕೊಳ್ಳದೆ, ಅವನು ಕಾಶಿಯನ್ನು ಬಿಟ್ಟು ಸುಮ್ಮನೆ ಶಾಂತರೀತಿಯಿಂದ ಹೊರಗೆ ಹೋಗುವ ಉಪಾಯವನ್ನು ನಾನು ತೆಗೆದರೆ ನೆಟ್ಟಗೆ'' ಎಂದು ಆಲೋಚಿಸುತ್ತ ವಿಂಧ್ಯಪರ್ವತಕ್ಕೆ ಹೋದನು. ಆ ಪರ್ವತವು ಸಂಸಾರ ತಾಪವನ್ನು ಸಂಹರಿಸುವ ಗಂಗೆಯ ಪವಿತ್ರ ಜಲಗಳಿಂದ ಅಲಂಕೃತವಾಗಿದ್ದು, ರಸವತ್ತಾದ ಮಾವು, ಅಶೋಕ ಮೊದಲಾದ ವೃಕ್ಷಗಳಿಂದ ಮನುಷ್ಯರ ತಾಪವನ್ನು (ಶೋಕ) ಹರಣ ಮಾಡುವಂತೆ ಕಾಣುತ್ತಿತ್ತು. ತಾಲ, ತಮಾಲ, ಶ್ರೀತಾಲ, ತಾಲ ಗಿಡಗಳಿಂದ ಅದಕ್ಕೆ ವಿಶೇಷ ಶೋಭೆಯು ಬಂದಿತ್ತು; ಟೆಂಗಿನ ಗಿಡಗಳು, ಉತ್ತತ್ತಿಯ ಗಿಡಗಳು ಆ ಪರ್ವತಕ್ಕೆ ಬಂದ ಜನರಮೇಲೆ ಛತ್ರವನ್ನು ಹಿಡಿದಿರುವಂತೆ ಶೋಭಿಸುತ್ತಿದ್ದವು. ನವಿಲುಗಳ ಧ್ವನಿಯಿಂದ ಆ ಪರ್ವತವು ಅತಿಥಿಗಳಿಗೆ ಸ್ವಾಗತವನ್ನು

ಮಾಡುತ್ತಿರುವದೋ ಎಂಬಂತೆ ತೋರುತ್ತಿತ್ತು. ಹೀಗೆ ಆ ವಿಂಧ್ಯಪರ್ವತವು ಚರಾಚರ ರೂಪಗಳನ್ನು ಧರಿಸಿ ಜನರನ್ನು ಸಂತೋಷಗೊಳಿಸುತ್ತಿರುವಂತೆ ಒಪ್ಪುತ್ತಿತ್ತು.

ಇಂತೊಪ್ಪುವ ವಿಂಧ್ಯಪರ್ವತರಾಜನು ನೂರು ಸೂರ್ಯರ ಪ್ರಕಾಶದಿಂದ ಹೊಳೆಯುವ ಹಾಗು ಪೀತಾಂಬರವನ್ನು ಪರಿಧಾನಮಾಡಿ ಆಕಾಶದಲ್ಲಿ ಸಂಚರಿಸುತ್ತಿರುವ ಮಹಾಮುನಿಯಾದ ನಾರದರನ್ನು ದೂರಿನಿಂದಲೇ ನೋಡಿ ಎದುರ್ಗೊಂಡನು. ಅವನು ಭಕ್ತಿಯಿಂದ ಸ್ವಾಗತವನ್ನು ಮಾಡಿದ್ದನ್ನೂ ಅವನ ಮೃದುಪರವಾದ ಸ್ವಭಾವವನ್ನೂ ನೋಡಿ ನಾರದರಿಗೆ ಸಂತೋಷವಾಯಿತು. ಆಗ ಪರಸ್ಪರ ದರ್ಶನೋತ್ಸವವು ನಡೆಯಿತು. ಗುರುಗಳಾದ ನಾರದರು ತನ್ನ ಮನೆಗೆ ಬಂದದ್ದನ್ನು ನೋಡಿ ಗುರುವತ್ಸಲನಾದ ವಿಂಧ್ಯಪರ್ವತರಾಜನಿಗೆ ಬಹಳ ಆನಂದವಾಯಿತು; ಯಾವಾತನು ಗುರುಗಳಿಗೆ ನಮ್ರಭಾವದಿಂದ ನಡೆಯುವನೋ ಅವನೇ ದೊಡ್ಡವನು. ಆದರೆ ಗುರುಗಳಿಗಿಂತ ದೊಡ್ಡವನಾಗಿ ಅವರ ಮುಂದೆ ತನ್ನ ದೊಡ್ಡಿಸ್ತನವನ್ನು ತೋರಿಸುವವನು ದೊಡ್ಡವನಲ್ಲ. ವಿಂಧ್ಯನು ಸ್ವಾಭಾವಿಕವಾಗಿ ಉನ್ನತನಾಗಿದ್ದರೂ ಅವನು ತನ್ನ ಕುತ್ತಿಗೆಯನ್ನು ಬೊಗ್ಗಿಸಿ, ಮಸ್ತಕವನ್ನು ಭೂಮಿಗೆ ಹಚ್ಚಿ, ಬಹಳ ಆದರದಿಂದ ನಾರದರಿಗೆ ನಮಸ್ಕರಿಸಿದನು. ಬಳಿಕ ನಾರದರು ಅವನನ್ನು ತಮ್ಮ ಕೈಗಳಿಂದ ಮೇಲಕ್ಕೆ ಎಬ್ಬಿಸಿ ಆಶೀರ್ವಚನಗಳಿಂದ ಅಭಿನಂದಿಸಿದರು. ಆಗ ಆತನು ಅವರಿಗೆ ಆಸನವನ್ನು ಕೊಟ್ಟು ಆದರಮೇಲೆ ಅವರನ್ನು ಕೂಡ್ರಿಸಿದನು. ಬಳಿಕ ವಿಂಧ್ಯನು ಮೊಸರು, ಹಾಲು, ಜೇನತುಪ್ಪ, ತುಪ್ಪ, ಷಡ್ರಸಾನ್ನ, ಭಕ್ಷ್ಯ, ಹಸಿ ಅಕ್ಷತೆಗಳು, ತಿಲ, ಪುಷ್ಪ, ಅರ್ಘ್ಯ ಮೊದಲಾದವುಗಳಿಂದ ಪೂಜಿಸಿದನು. ಅನಂತರ ದಣಿದಂಥ ಆ ಮುನಿಗಳ ಪಾದಸಂವಾಹನ (ಕಾಲುಹಿಚುಕಿ) ಮಾಡಿದನು. ಅದರಿಂದ ಆ ಮುನಿಗಳ ಶ್ರಮಪರಿಹಾರವಾದ ಕೂಡಲೆ ವಿಂಧ್ಯನು ನಮ್ರತೆಯಿಂದ ನಾರದರನ್ನು ಕುರಿತು—"ಹೇ ಮಹಾಮುನಿಯೇ, ನಿನ್ನ ಪಾದಕಮಲಗಳ ಧೂಲಿಯಿಂದ ನನ್ನ ದೋಷವೆಲ್ಲ ಈಗಲೇ ಪರಿಹಾರವಾಯಿತು. ನನ್ನ ಅರ್ಥಗಳೆಲ್ಲವೂ ಸಫಲವಾದವು. ಈ ದಿನವು ಸುದಿನವೆಂದು ನಾನು ತಿಳಿಯುತ್ತೇನೆ. ನಾನು ಹಿಂದಿನ ಜನ್ಮದಲ್ಲಿ ಸಂಪಾದಿಸಿಟ್ಟ ಸುಕೃತಗಳಿಗೆ ಇಂದಿನದಿನ ಒಳ್ಳೇ ಫಲಗಳು ಸಿಕ್ಕಂತಾದವು. ಪರ್ವತಕುಲದಲ್ಲಿ ಹುಟ್ಟಿದ ನಾನೂ ನನ್ನ ಪೂರ್ವಜರೂ ಧನ್ಯರಾದೆವು. ನಮ್ಮ ಪರ್ವತಕುಲದಲ್ಲಿ ಮೇರುಮೊದಲಾದ ವೃದ್ಧಪುರುಷರು ಸಹ ನನ್ನನ್ನು ಸರಿಗಟ್ಟಲಾರರು. ಮೇರುಪರ್ವತವು ಬಂಗಾರವರ್ಣವುಳ್ಳದ್ದೂ, ರತ್ನಮಯಶಿಖರವುಳ್ಳದ್ದೂ ಇದ್ದಾಗ್ಯೂ ಅದರ ಮಹತ್ವವನ್ನು ವರ್ಣಿಸಬೇಡಿರಿ. ನನ್ನಮೇಲೆ ದೇವಾಗಗಳು

ವಾಸಮಾಡಿಕೊಂಡು ಇದ್ದದರಿಂದ ನಾನು ಪೂಜ್ಯನಾದಷ್ಟು ಎರಡನೆಯು ಯಾವ ಪರ್ವತವು ಲೋಕಮಾನ್ಯವಾಗುವದು? ಹೇಮಕೂಟ ತ್ರಿಕೂಟ ಮೊದಲಾದ ಪರ್ವತ ಗಳ ಉತ್ತರಪದವು ಕೂಟ(ಶಿಖರ)ವೆಂದು ಇದ್ದಮಾತ್ರದಿಂದ ಅವು ದೊಡ್ಡವಲ್ಲ. ಕಿಷ್ಕಿಂಧ, ಕ್ರೌಂಚ, ಸಿಂಹ ಮೊದಲಾದ ಪರ್ವತಗಳು ಭೂಮಿಯಭಾರವನ್ನು ಸಹ ಸಹಿಸಲಾರವು. ಯಾವದಾದರೊಂದು ವಸ್ತುವಿಗೆ ಅಗಣಿತಗರ್ವ ಸಂಸರ್ಗದಿಂದ ಮಹತ್ವವು ಬರಲಾರದು. ಶ್ರೀಶೈಲಾದಿಗಳು ತಮ್ಮ ನಿರ್ಮಲವಾದ ಕಾಂತಿಯಿಂದ ನಗುವಂತೆ ತೋರುತ್ತವೆ; ಆದರೆ ಅವೂದೊಡ್ಡವಲ್ಲ; ಅವುಗಳ ಶಿಖರಗಳ ದರ್ಶನ ದಿಂದ ಸಜ್ಜನರು ಮುಕ್ತಿಯನ್ನು ಹೊಂದುವರು.'' ಎಂದು ಮಾತಾಡಿದನು. ಅದಕ್ಕೆ ನಾರದರು ''ವಿಂಧ್ಯನೇ, ಗಿರಿಗಳ ಶೀಲವನ್ನು ಸ್ಪಷ್ಟೀಕರಣಮಾಡುವ ನೀನು ಹೀಗೆಮಾಡಿದ್ದು ವಿಹಿತವೇ ಸರಿ. ಆದರೆ ಪರ್ವತಶ್ರೇಷ್ಠವಾದ ಮೇರುಪ ರ್ವತವು ಮಾತ್ರ ನಿನ್ನನ್ನು ತಿರಸ್ಕಾರಮಾಡುತ್ತಿರುವದು. ನಾನು ಮನಗಂಡಿದ್ದ ನ್ನೆಲ್ಲ ನಿನಗೆ ಹೇಳಿಬಿಟ್ಟಿರುವೆನು. ಹರಿಸೇವಕರಾದ ನಮಗೆ ಈ ಚಿಂತೆಯಾದರೂ ಯಾಕೆಬೇಕು? ನಿನಗೆ ಕಲ್ಯಾಣವಾಗಲಿ" ಎಂದು ಮಾತಾಡಿ ನಾರದರು ಆಕಾಶ ಮಾರ್ಗದಿಂದ ಹೊರಟುಹೋದರು. ಅವರು ಅತ್ತ ಹೋದಕೂಡಲೆ ನಾರದರ ಮಾತುಗಳನ್ನು ಕೇಳಿ ಉದ್ವಿಗ್ನಚಿತ್ತನಾದ ವಿಂಧ್ಯನು ತನ್ನನ್ನು ತಾನೇ ನಿಂದಿಸಿಕೊ ಳ್ಳಹತ್ತಿದನು. ವಿಂಧ್ಯನು, ''ಶಾಸ್ತ್ರಗುಣಗಳನ್ನು ತ್ಯಾಗಮಾಡಿದವನ ಹಾಗು ಧರ್ಮವಿವರ್ಜಿತನ ಜೀವಿತಕ್ಕೆ ಧಿಕ್ಕಾರವಿರಲಿ. ಅದರಂತೆಯೇ ವ್ಯರ್ಥಮನೋರ ಥನೂ, ಜಾತಿಯಿಂದ ಚ್ಯುತನೂ ಆದವನ ಜೀವಿತಕ್ಕೆ ಧಿಕ್ಕಾರವಿರಲಿ; ಶತ್ರುಗಳಿಂದ ತಿರಸ್ಕಾರವನ್ನು ಹೊಂದಿದವನು ಹ್ಯಾಗೆ ಉಣ್ಣುವನು? ರಾತ್ರಿಯಲ್ಲಿ ಸುಖವಾಗಿ ಹ್ಯಾಗೆ ಮಲಗುವನು? ಅವನಿಗೆ ಏಕಾಂತದಲ್ಲಿಯಾದರೂ ಸುಖವು ಹ್ಯಾಗೆ ಸಿಕ್ಕೀತು? ನಾನು ಏನುಮಾಡಲಿ; ಎಲ್ಲಿ ಹೋಗಲಿ; ನಾನು ಮೇರು ಪರ್ವತದ ಹತ್ತರ ಹ್ಯಾಗೆ ಹೋಗಲಿ? ದೊಡ್ಡವನೂ, ಉನ್ನತನೂ ಆದ ಮೇರುವು ನನ್ನ ಸಂಗಡ ಎಷ್ಟು ಮತ್ಸ ರವನ್ನು ಮಾಡುವನೋ, ನಾನು ಮೇರುಪರ್ವತಕ್ಕೆ ಸಮಾನನಾಗುವ ಬಗೆ ಹ್ಯಾಗೆ? ನಾರದರ ವಚನವು ಸಂಭವನೀಯವೋ ಅಥವಾ ಅಸತ್ಯವೋ ತಿಳಿಯದು. ಬ್ರಹ್ಮ ಚಾರಿಯೂ, ದಕ್ಷನೂ, ಸತ್ಯ ಲೋಕದಲ್ಲಿ ನಿವಾಸ ಮಾಡುವವನೂ ಆದ ಆ ಮುನಿ ಯ ಮಾತು ಯುಕ್ತವೋ ಅಯುಕ್ತವೋ ಎಂಬದನ್ನು ನನ್ನಂಥವನು ವಿಚಾರ ಮಾಡುವದು ಯೋಗ್ಯವಲ್ಲ. ಪರಾಕ್ರಮದಲ್ಲಿ ಆಸಕ್ತಿಯಿಲ್ಲದೆ ಇರುವವರ ಮನಸ್ಸು ಯಾವಾಗಲೂ ವಿಚಾರ ಮಾಡುವದರಲ್ಲಿ ಮಗ್ನವಾಗಿರುತ್ತದೆ. ಕ್ಷಣಹೊತ್ತು ಮನ

ದಲ್ಲಿ ಚಿಂತಿಸಿ ನನ್ನಂತೆ ಅವರು ಉದ್ವಿಗ್ನರಾಗುವರು. ''ನಿತ್ಯದಲ್ಲಿ ಸೂರ್ಯನು ತನಗೆ ಪ್ರದಕ್ಷಿಣೆಯನ್ನು ಹಾಕುವನು. ಗ್ರಹ ನಕ್ಷತ್ರಗಣವೂ ಸಹ ತನ್ನ ಸುತ್ತು ತಿರುಗುವದು. ಆದ್ದರಿಂದ ತನ್ನ ಬಲವು ಅಧಿಕವಾಗಿರುವದೆಂದು ಅವನು(ಮೇರು)ತಿಳಿದಿರುವನು.'' ಎಂದು ನಿಶ್ಚಯ ಮಾಡಿಕೊಂಡು ವಿಂಧ್ಯ ಪರ್ವತವು ಸಿಟ್ಟಿನಿಂದ ಬೆಳೆಯ ಹತ್ತಿತು. ಅವನ ಶಿಖರಗಳು ಗಗನಕ್ಕೆ ಮುಟ್ಟುತ್ತವೆಯೋ ಏನೋ ಎಂಬಂತೆ ತೋರಿದವು. ಯಾವನೂ ಯಾವಾಗಲೂ ಯಾರ ಸಂಗಡವೂ ವಿರೋಧವನ್ನು ಬೆಳೆಸಬಾರದು. ವಿರೋಧ ಮಾಡುವ ಪ್ರಸಂಗ ಬಂದರೂ ಸಹ ಜನರು ತನ್ನನ್ನು ಉಪಹಾಸ ಮಾಡದ ಹಾಗೆ ವೈರಭಾವವನ್ನು ಮಾಡಬೇಕು. ವಿಂಧ್ಯನು ಇದಕ್ಕೆ ಅಪವಾದವಾಗಿ ನಡೆದನು. ಬ್ರಹ್ಮನ ಮಾರ್ಗವನ್ನು ಪ್ರತಿಬಂಧಿಸಿ ತಾನು ಕೃತಕೃತ್ಯನಾದೆನೆಂದು ಆ ಪರ್ವತರಾಜನು ತಿಳಿದನು. ಯಾವಮೇರುಪರ್ವತಕ್ಕೆ ಸೂರ್ಯಾದಿ ಗ್ರಹಗಳು ಪ್ರದಕ್ಷಿಣೆಯನ್ನು ಹಾಕುತ್ತಿರುವವೋ, ಆ ಪರ್ವತ ರಾಜನು ಕುಲೀನನೂ, ಶ್ರೀಮಂತನೂ, ದೊಡ್ಡವನೂ, ಮಾನ್ಯನೂ, ನಿರ್ಮಲನೂ ಇರುವನು. ವಿಂಧ್ಯನ ಮಾರ್ಗ ನಿರೋಧನದಿಂದ ಸೂರ್ಯನು ಕಾಣದಿರಲು, ಬ್ರಾಹ್ಮಣರು ಸೂರ್ಯೋದಯವನ್ನು ಅಪೇಕ್ಷೆ ಮಾಡುತ್ತ ಕುಳಿತರು. ಜಗತ್ತಿನಲ್ಲಿ ವ್ಯಾಪಿಸಿರುವ ತಮಸ್ಸಿಗೆ ಸೂರ್ಯನೇ ವೈರಿಯಾಗಿದ್ದು ಅವನೇ ಪರಮಾತ್ಮನಿರುವನು; ಸೂರ್ಯನು ದೇವತೆಗಳ ಹವ್ಯ-ಕವ್ಯ ಭೂತಬಲಿ ಮೊದಲಾದ ಕರ್ಮಗಳನ್ನು ಸಾಗಿಸುವನು. ಪೂರ್ವಾಹ್ಣ ಪರಾಹ್ಣ ಮಧ್ಯಾಹ್ನ ಕಾಲಗಳಲ್ಲಿ ಮಾಡುವ ಕ್ರಿಯೆಗಳನ್ನು ಪ್ರಕಟ ಮಾಡುವನು, ಅವನು ಉದಯಗಿರಿಯಲ್ಲಿ ಹುಟ್ಟಿ ಉಷಃಕಾಲದಲ್ಲಿ ತನ್ನ ಕಿರಣಗಳಿಂದ ಕತ್ತಲೆಯೆಂಬ ರಾಕ್ಷಸಿಯ ದೇಹವನ್ನು ತುಂಡರಿಸಿ ಸಜ್ಜನರ ಧರ್ಮಗಳನ್ನು ರಕ್ಷಣಮಾಡುವನು. ರಾತ್ರಿಯಲ್ಲಿ ಬಾಡಿದ ಮುಖವುಳ್ಳ ಕಮಲಿನಿಯನ್ನು ಅರಳಿಸುವನು; ದುಷ್ಟರ ಹೃದಯದಲ್ಲಿ ಹಾಗು ಮುಖಗಳಲ್ಲಿರುವ ತಮೋಗುಣವನ್ನು (ಅಂಧಃಕಾರವನ್ನು) ದೂರಮಾಡುವನು; ರಾತ್ರಿಯಲ್ಲಿ ನಿರ್ಜೀವವಾಗಿದ್ದ ಜಗತ್ತಿಗೆ ಪುನಃ ಚೈತನ್ಯವನ್ನು ಕೊಟ್ಟು ಎಬ್ಬಿಸುವನು; ಆದ್ದರಿಂದ ದಕ್ಷಿಣದಿಕ್ಕಿಗೆ ಹೋದಂಥಸೂರ್ಯನು ಇನ್ನೂ ವರೆಗೆ ತಿರುಗಿ ಯಾಕೆ ಬಂದಿರಲಿಕ್ಕಿಲ್ಲ? ಅವನು ಉದಯವಾದರೇ ಶುಭದಿವಸವು; ಪರೋಪಕಾರವೇ ನಿಂತು ಹೋಗುವದು. ಇಂಥ ಸೂರ್ಯನು ಈಗ ಅಸ್ತಂಗತನಾಗಿರುವನು. ಅವನು ಉದಯವಾಗದಿದ್ದರೆ, ಜಗತ್ತು ಬದುಕುವದು ಹ್ಯಾಗೆ? ಅವನ ಮುಂದೆ ಹೋಗಲು ಶಕ್ತನಾಗಿರುವವನು ಯಾವನು.'' ಎಂದು ತಿಳಿದು ಎಲ್ಲರೂ ಅರುಣನಿಗೆ ವಿಜ್ಞಾಪನೆ ಮಾಡಿಕೊಂಡರೇನಂ

ದರೆ, "ವಿಂಧ್ಯಪರ್ವತರಾಜನು ತಾನೇ ಎಲ್ಲಕ್ಕೂ ಉನ್ನತವಾಗಬೇಕೆಂದು ಆಲೋಚಿಸಿ, ಬೆಳೆದು ಆಕಾಶಮಾರ್ಗವನ್ನೆಲ್ಲ ಅಡ್ಡಗಟ್ಟಿ ನಿಂತಿರುವನು. ಸೂರ್ಯಾದಿಗಳೆಲ್ಲ ತನ್ನ ಸುತ್ತಲು ತಿರುಗಬೇಕೆಂಬ ಇಚ್ಛೆಯಿಂದ ಅವನು ಮೇರು ಪರ್ವತದ ಸಂಗಡ ಮತ್ಸರಮಾಡಿ ಹೀಗೆ ಉನ್ನತವಾಗಿ ಬೆಳೆಯುತ್ತಿದ್ದಾನೆ'' ಅರುಣನು ಈ ಮಾತುಗಳನ್ನು ಕೇಳಿ, "ಅಹೋ! ಗಮನ ಮಾರ್ಗವು ಸಹ ನಿರೋಧಿಸಲ್ಪಟ್ಟಿದೆ.'' ಎಂದು ಆಶ್ಚರ್ಯಗೊಂಡನು. ನಿಮಿಷಾರ್ಧದಲ್ಲಿ ೧೦ ಕೋಟಿ ಹರದಾರಿಗಳನ್ನು ಕ್ರಮಿಸುವ ಸೂರ್ಯನು ಬಹಳ ಹೊತ್ತಿನ ವರೆಗೆ ನಿಂತಲ್ಲಿಯೇ ನಿಂತಿರುವನು. ಅವನು ನಿಂತು ಬಹಳ ದಿನಗಳಾಗಿರುವದರಿಂದ ಪೂರ್ವ ಹಾಗು ಪಶ್ಚಿಮ ದಿಕ್ಕುಗಳಲ್ಲಿಯ ಜನರಿಗೆ ಅತಿಶಯವಾದ ಪೀಡೆಯಾಗಿರುವದು, ಪೂರ್ವದಿಕ್ಕಿನಲ್ಲಿರುವ ಜನರು ಚಂಡರಶ್ಮಿ (ಸೂರ್ಯ) ಯ ಉಗ್ರವಾದ ಕಿರಣಗಳಿಂದ ತಪ್ತರಾಗಿರುವರು, ಪಶ್ಚಿಮ ಹಾಗು ದಕ್ಷಿಣ ದಿಕ್ಕುಗಳ ಜನರು ಕಣ್ಣು ಮುಚ್ಚಿಕೊಂಡು ನಿದ್ರೆಯನ್ನು ಮಾಡುವವರಂತೆ ಕಾಣುವರು. ನಕ್ಷತ್ರಗಳು, ಗ್ರಹಗಳು, ಇವುಗಳಿಂದ ಯುಕ್ತವಾದ ಆಕಾಶವು ವಿಸ್ಖಲಿತವಾದಹಾಗೆ ಕಾಣುವದು. ಸೂರ್ಯನೇ ಇಲ್ಲದ್ದರಿಂದ ಹಗಲು ಇಲ್ಲ, ಚಂದ್ರನು ಇಲ್ಲದ್ದರಿಂದ ರಾತ್ರಿಯೂ ಇಲ್ಲ. ಗ್ರಹ ನಕ್ಷತ್ರಗಳು ಅಸ್ತಂಗತವಾದ ಬಳಿಕ ಕಾಲವನ್ನು ಕಳೆಯುವದು ಹ್ಯಾಗೆ? ಬ್ರಹ್ಮಾಂಡವೇ ಒಮ್ಮಿಂದೊಮ್ಮೆಲೆ ಲಯ ಹೊಂದುವದೋ ಹ್ಯಾಗೆಂಬದು ತಿಳಿಯದು. ಜಗತ್ತಿನಲ್ಲಿ ಹವ್ಯ ಕವ್ಯಗಳೂ ಯಜ್ಞಯಾಗಾದಿಗಳೂ ನಡೆಯಲಿಕ್ಕೆ ಮಾರ್ಗವಿಲ್ಲದಂತಾಗಿದೆ. ಪಂಚಯಜ್ಞ ಕ್ರಿಯೆಗಳು ಲೋಪವಾದವು. ಮೂರು ಲೋಕಗಳು ನಡುಗುತ್ತಲಿವೆ. ಸೂರ್ಯೋದಯದಿಂದ ಯಜ್ಞಾದಿ ಸರ್ವ ಕ್ರಿಯೆಗಳೂ ನಡೆಯಲಾರಂಭಿಸುವವು; ಯಜ್ಞಾದಿಗಳಿಂದ ದೇವತೆಗಳು ಸಂತುಷ್ಟರಾಗುವರು. ಇದಕ್ಕೆಲ್ಲ ಸೂರ್ಯನೇ ಕಾರಣನು. ಚಿತ್ರಗುಪ್ತ ಮೊದಲಾದವರಿಗೆಲ್ಲ ಸೂರ್ಯನಿಂದಲೇ ಕಾಲವು ತಿಳಿಯುತ್ತದೆ. ಸೃಷ್ಟಿಯ ಉತ್ಪತ್ತಿ-ಸ್ಥಿತಿ-ಲಯಗಳಿಗೆ ಸೂರ್ಯನೇ ಕಾರಣನು. ಆದರೆ ಸೂರ್ಯನ ಗತಿಯು ಕುಂಠಿತವಾದದ್ದರಿಂದ ಮೂರು ಲೋಕಗಳು ನಿಶ್ಚೇಷ್ಟಿತವಾಗಿವೆ. ಯಾವ ಯಾವ ಪದಾರ್ಥಗಳು ಎಲ್ಲೆಲ್ಲಿ ಇರುವವೋ ಅವು ಅಲ್ಲಲ್ಲಿಯೇ ಚಿತ್ರದಲ್ಲಿರುವ ವಸ್ತುಗಳಂತೆ ಇರುತ್ತವೆ. ಜಗತ್ತಿನಲ್ಲಿಯ ಕೆಲವು ಭಾಗವು ಕತ್ತಲೆಯಲ್ಲಿ ಮುಳುಗಿದೆ. ಮತ್ತೊಂದು ಭಾಗದಲ್ಲಿ ಹಗಲು ಇದ್ದು ಅಲ್ಲಿಯ ಜನರು ಸೂರ್ಯನಿಂದ ಸಂತಪ್ತರಾಗಿರುವರು. ಸಾರಾಂಶ ಪ್ರಲಯವೇ ಸಂಭವಿಸಿರುವದು. ಜಗತ್ತೆಲ್ಲ ಭಯಗ್ರಸ್ತವಾಗಿದೆ'' ಎಂದು ಅವನು ಚಿಂತಿಸಿದನು. ದೇವತೆಗಳು,

ದಾನವರು, ಮನುಜರು, ನಾಗರು ಮೊದಲಾದವರೂ ಈ ಪ್ರಕಾರ ವ್ಯಾಕುಲಿತ ರಾಗಿರಲು, ಅಕಸ್ಮಾತ್ತಾಗಿ ಒದಗಿದ ಈ ಸಂಕಟದಿಂದ ಜಗತ್ತಿನಲ್ಲೆಲ್ಲ ಒಮ್ಮಿಂ ದೊಮ್ಮೆ ಹಾಹಾಕಾರವೆದ್ದಂತಾಯಿತು. ಬಳಿಕ ಎಲ್ಲರೂ ಆಲೋಚನೆ ಮಾಡಿ ಬ್ರಹ್ಮದೇವನಿಗೆ ಶರಣು ಹೋದರು. ಅವರು ವಿವಿಧವಾದ ಸ್ತೋತ್ರಗಳಿಂದ ಬ್ರಹ್ಮ ನನ್ನು ಸ್ತೋತ್ರ ಮಾಡಹತ್ತಿದರು; ದೇವತೆಗಳು—''ಬ್ರಹ್ಮರೂಪಿಯಾದ ದೇವನೇ, ಹಿರಣ್ಯ ಗರ್ಭನೇ, ನಿನಗೆ ನಮಸ್ಕಾರವು. ಕೈವಲ್ಯನೇ, ನಿನ್ನ ಸ್ವರೂಪವು ಮಾನವ ರಿಂದ ತಿಳಿಯಲಸಾಧ್ಯವಾಗಿರುವದು. ನಿನ್ನ ಚಿತ್‌ಸ್ವರೂಪವು ವೇದಗಳಿಗೂ, ವಾಣಿಗೂ, ಮನಸ್ಸಿಗೂ ಅಗೋಚರವಾಗಿರುವದು. ಹೇ ಚಿದಾತ್ಮನೇ, ನಿನಗೆ ನಾವು ಅನಂತ ನಮಸ್ಕಾರಗಳನ್ನು ಮಾಡುವೆವು. ಪ್ರಾಣಾಯಾಮ ಯಮನಿ ಯಮ ಸಮಾಧಿಗಳಿಂದ ನಿಶ್ಚಲ ಹೃದಯವುಳ್ಳವರಾದ ಯೋಗಿಗಳು ಜ್ಯೋತಿರೂಪ ದಿಂದ ನಿನ್ನ ಸ್ವರೂಪವನ್ನು ತಮ್ಮ ಹೃದಯಾಕಾಶದಲ್ಲಿ ನೋಡುವರು. ಹೇ ಬ್ರಹ್ಮ ದೇವನೇ, ನೀನೇ ಸರ್ವಜಗತ್ತನ್ನು ಹೊಗುಳುವವನು. ಸ್ತುತಿ, ಸ್ತುತ್ಯ ಇವೆಲ್ಲ ನೀನೇ ಇರುವಿ. ನಿನ್ನಲ್ಲಿಯೇ, ಎಲ್ಲ ಲೋಕಗಳಿರುವವು. ಹೇ ಈಶ್ವರನೇ ನೀನೇ ಈ ಇಡೀ ಜಗತ್ತಿನಲ್ಲಿರುವ ಸರ್ವ ವಸ್ತುಗಳಲ್ಲಿ ವಾಸ ಮಾಡಲು ಯೋಗ್ಯನಿರುತ್ತೀ. ನಾವು ನಿನಗೆ ಪುನಃಪುನಃ ನಮಸ್ಕಾರಗಳನ್ನು ಮಾಡುತ್ತೇವೆ.'' ಎಂದು ಸ್ತೋತ್ರ ಮಾಡಿ ಭೂಮಿಯ ಮೇಲೆ ದಂಡವತ್ ಬಿದ್ದು ಸಾಷ್ಟಾಂಗ ನಮಸ್ಕಾರವನ್ನು ಮಾಡಿ ದರು. ಬಳಿಕ ಪರಿತುಷ್ಟನಾದ ಬ್ರಹ್ಮನು ದೇವತೆಗಳನ್ನು ಕುರಿತು ''ದೇವತೆಗಳೇ, ಏಳಿರಿ, ನಾನು ಪ್ರಸನ್ನನಾಗಿರುವೆನು. ನಿಮಗೆ ಬೇಕಾದ ಉತ್ತಮ ವರವನ್ನು ಬೇಡಿಕೊಳ್ಳಿರಿ. ನೀವು ಮಾಡಿದಂಥ ಈ ಸ್ತುತಿಯಿಂದ ಯಾವ ಮನುಜನು ಶ್ರದ್ಧಾ ಪೂರ್ವಕವಾಗಿಯೂ ನಿರ್ಮಲ ಮನಸ್ಸಿನಿಂದಲೂ ನನ್ನನ್ನಾಗಲಿ, ಶಿವನನ್ನಾಗಲಿ, ವಿಷ್ಣುವನ್ನಾಗಲಿ, ಸಂತೋಷ ಪಡಿಸುವನೋ ಅವನಿಗೆ ನಾವು ಮೂವರು ಪ್ರಸನ್ನ ರಾಗಿ ಅವನ ಸಕಲ ಕಾಮನೆಗಳನ್ನು ಪೂರ್ಣಪಡಿಸುವೆವಲ್ಲದೆ ಅವನಿಗೆ ಪುತ್ರ ಪೌತ್ರ ಪಶು, ಸಂಪತ್ತು, ಸೌಭಾಗ್ಯ, ಆಯುಷ್ಯ, ನಿರ್ಭಯತ್ವ, ರಣದಲ್ಲಿ ವಿಜಯ, ಇವ ನ್ನೆಲ್ಲ ಕೊಡುವೆವು;ನಿಮ್ಮ ಈ ಸ್ತೋತ್ರವು ಎಲ್ಲರಿಗೂಅಭೀಷ್ಟಗಳನ್ನೂಸಿದ್ಧಿಗಳನ್ನೂ ಕೊಡುವದು'' ಎಂದು ಹೇಳಿದನು. ಬಳಿಕ ಸ್ವಲ್ಪಹೊತ್ತು ಸುಮ್ಮನೆ ಇದ್ದು ಪುನಃ ಬ್ರಹ್ಮದೇವನು ತನ್ನನ್ನು ನಮಸ್ಕರಿಸಿನಿಂತಿದ್ದ ಆ ದೇವತೆಗಳನ್ನುಕುರಿತು,''ಅಮರರೇ ನೀವು ಸ್ವಸ್ಥಚಿತ್ತರಾಗಿರಬೇಕು. ನೀವು ಇಷ್ಟು ವ್ಯಾಕುಲರಾಗಿ ಇಲ್ಲಿಗೆ ಯಾಕೆಬಂದಿ ರುವಿರಿ?ಓಹೋ! ತಿಳಿಯಿತು.ಗಗನಮಾರ್ಗವನ್ನು ನಿರೋಧಿಸಿಬೆಳೆದಂಥ ವಿಂಧ್ಯಪರ್ವ

ತವು ಮೇರುವಿನ ಸಮಾನವಾಗಲು ಮಾತ್ಸರ್ಯದಿಂದ ಹವಣಿಸುತ್ತದೆ. ಇದಕ್ಕೋಸ್ಕರ ನೀವು ನನ್ನೆಡೆಗೆ ಬಂದಿರುವಿರಿ. ಅದಕ್ಕೆ ನಿಮಗೆ ಒಂದು ಉಪಾಯವನ್ನು ಹೇಳುವೆನು. ಕಾಶಿಯಲ್ಲಿ ಅಗಸ್ತ್ಯಮಹಾಮುನಿಯು ತನ್ನ ಚಿತ್ತದಲ್ಲಿ ವಿಶ್ವೇಶ್ವರನನ್ನು ಅಖಂಡವಾಗಿ ಧ್ಯಾನಿಸುತ್ತ ಉಗ್ರವಾದ ತಪಸ್ಸನ್ನು ಮಾಡುತ್ತಿರುವನು; ಆ ಮಹಾಕ್ಷೇತ್ರದಲ್ಲಿ ವಿಶ್ವೇಶ್ವರನು ಸರ್ವರಿಗೂ ಮುಕ್ತಿಯನ್ನು ಕೊಡುವದಕ್ಕೋಸ್ಕರವಾಗಿಯೂ, ತಾರಕೋಪದೇಶವನ್ನು ಮಾಡುವದಕ್ಕಾಗಿಯೂ ವಾಸಮಾಡಿರುವನು. ನೀವು ಅಲ್ಲಿರುವ ಅಗಸ್ತ್ಯಮುನಿಯ ಬಳಿಗೆ ಹೋಗಿ ನಿಮಗೆ ಬೇಕಾದದ್ದನ್ನು ಬೇಡಿಕೊಳ್ಳಿರಿ. ಮುಂದೆ ಅವನಿಂದ ನಿಮ್ಮ ಎಲ್ಲ ಕಾರ್ಯಗಳು ನೆರವೇರುವವು; ಹಿಂದಕ್ಕೆ ಆ ಮಹಾಮುನಿಯು ವಾತಾಪಿ ಇಲ್ವಲ ಎಂಬ ರಾಕ್ಷಸರನ್ನು ಭಕ್ಷಿಸಿ, ಇಡೀ ಲೋಕವನ್ನು ರಕ್ಷಿಸಿರುವನು. ಈ ಲೋಕದಲ್ಲಿ ಅಗಸ್ತ್ಯಮುನಿಯನ್ನು ಕಂಡು ಹೆದರದೆ ಇರುವವರು ಯಾರು?'' ಎಂದು ಮಾತಾಡಿ ಅಂತರ್ಧಾನವನ್ನು ಹೊಂದಿದನು. ಇತ್ತ ದೇವತೆಗಳು ಹರ್ಷನಿರ್ಭರರಾಗಿ ತಮ್ಮ ತಮ್ಮೊಳಗೆ "ನಾವು ಧನ್ಯರು, ಈ ಪ್ರಸಂಗವಶದಿಂದ ನಾವು ಕಾಶಿಯನ್ನೂ, ಕಾಶೀಪತಿಯಾದ ವಿಶ್ವೇಶ್ವರನನ್ನೂ ನೋಡುವೆವು. ನಮ್ಮ ಮನೋರಥಗಳು ಬಹಳ ದಿನಗಳ ಮೇಲೆ ಫಲಿತವಾಗಿರುವವು. ಕಾಶಿಗೆ ಹೋಗುವ ನಮ್ಮ ಚರಣಗಳೇ ಧನ್ಯವು. ಅವೇ ಸಚ್ಚರಣಗಳೆಂದು ಕರೆಯತಕ್ಕದ್ದು. ನಾವು ಒಂದು ಕೆಲಸವನ್ನು ಸಾಧಿಸ ಹೊರಟಿರಲು, ನಮ್ಮ ಪುಣ್ಯಗೌರವದಿಂದ ಎರಡು ಕಾರ್ಯಗಳು ಸಾಧಿಸಿದವು'' ಎಂದು ಮಾತಾಡುತ್ತ ಕಾಶೀಪಟ್ಟಣವನ್ನು ಕುರಿತು ತೆರಳಿದರು.

---

## ೩ನೆಯ ಅಧ್ಯಾಯ.

### ದೇವತೆಗಳಿಗೆ ಅಗಸ್ತ್ಯರ ದರ್ಶನವೂ ವಿಂಧ್ಯಾದ್ರಿಯ ಗರ್ವ ಹರಣವೂ.

ಋಷಿಗಳು ಸ್ಕಂದನನ್ನು ಕುರಿತು,—"ಅಗ್ನಿಪುತ್ರನೇ, ದೇವತೆಗಳು ಕಾಶಿಗೆ ಹೋಗಿ ಮುಂದೆ ಏನು ಮಾಡಿದರು? ಈ ಪುಣ್ಯಕರವಾದ ಕಥೆಯನ್ನು ಎಷ್ಟು

ಕೇಳಿದರೂ ನಮಗೆ ತೃಪ್ತಿಯಾಗಲೊಲ್ಲದು'' ಎಂದು ಪ್ರಶ್ನೆ ಮಾಡಿದರು. ಆಗ ಸ್ಕಂದನು—''ಅನಂತರ ದೇವೇಂದ್ರಾದಿ ಸಮಸ್ತ ದೇವತೆಗಳು ವಾರಣಾಸೀ (ಕಾಶಿ) ಪಟ್ಟಣಕ್ಕೆ ಹೋಗಿ ಶೀಘ್ರವಾಗಿ ಮಣೀಕರ್ಣಿಕೆಯಲ್ಲಿ ವಿಧಾನಪೂರ್ವಕವಾಗಿ ಮೊದಲು ಸ್ನಾನಮಾಡಿ ಸಂಧ್ಯಾದಿಕರ್ಮಗಳನ್ನು ತೀರಿಸಿಕೊಂಡು, ಪಿತೃಗಳಿಗೆ ಕುಶತಿಲೋದಕಗಳಿಂದ ತರ್ಪಣವನ್ನು ಕೊಟ್ಟು, ತೀರ್ಥವಾಸಾರ್ಥಿಗಳಿಗೂ ಬೇರೆಬೇರೆಯಾಗಿ ತರ್ಪಣಕೊಟ್ಟರು. ಬಳಿಕ ಅವರು ವಿಧ್ಯುಕ್ತವಾಗಿ ವಿಶ್ವೇಶ್ವರನನ್ನೂ, ಜಗದಂಬೆಯಾದ ಪಾರ್ವತಿಯನ್ನೂ ಪೂಜಿಸಿ, ದೇವೇಂದ್ರನಸಮೇತರಾಗಿ ಅಗಸ್ತ್ಯಮುನಿಯ ಆಶ್ರಮಕ್ಕೆ ಹೋದರು. ಹೋಗುವಾಗ ಅವರು—''ಸರ್ವಾರ್ಥಗಳನ್ನೂ ನಾನಾ ಮಂತ್ರಗಳನ್ನೂ ಕೊಡುವ ಭವಾನೀದೇವಿಯು ಜನರ ಎಲ್ಲ ಕಾಮನೆಗಳನ್ನು ಪೂರೈಸುವಳೆಂತಲೂ ಅಂತ್ಯಕಾಲದಲ್ಲಿ ವಿಶ್ವೇಶ್ವರನು ಕರ್ಣದಲ್ಲಿ ತಾರಕಮಂತ್ರವನ್ನುಪದೇಶಿಸಿ, ಎಲ್ಲ ಪ್ರಾಣಿಗಳಿಗೆ ಮುಕ್ತಿಯನ್ನೀಯುವನೆಂತಲೂ ಬಹುಕಾಲದಿಂದ ಪ್ರಸಿದ್ಧಿಯಿರುತ್ತದೆ'' ಎಂದು ತಮ್ಮ ತಮ್ಮೊಳಗೆ ಮಾತಾಡುತ್ತಿದ್ದರು. ಹೋಮಗಂಧ-ಸುಗಂಧಗಳಿಂದ ಪೂರ್ಣವೂ, ವೇದಘೋಷಗಳಿಂದ ಶಬ್ದಿತವೂ ಆದ ಅಗಸ್ತ್ಯಮುನಿಯ ಆಶ್ರಮವು ದೂರಿನಿಂದಲೇ ಅವರಿಗೆ ಕಾಣಿಸಿತು. ಅಲ್ಲಿ ಆ ಮುನಿಯ ಪತ್ನಿಯೂ, ಪತಿವ್ರತಾಶಿರೋಮಣಿಯೂ ಆದ ಲೋಪಾಮುದ್ರೆಯು ಆ ಆಶ್ರಮದಲ್ಲಿ ಸಂಚರಿಸುತ್ತಿದ್ದದರಿಂದ ಆಕೆಯ ಪಾದಕಮಲಗಳ ಚಿಹ್ನಗಳಿಂದ ಅದು ವಿಶೇಷಪವಿತ್ರವೂ, ಶೋಭಾಯಮಾನವೂ ಆಗಿತ್ತು. ದೇವತೆಗಳು ಆ ಋಷಿಯ ಆಶ್ರಮಕ್ಕೆ ಹೋಗಿ ಅಲ್ಲಿಯ ಒಂದು ಪರ್ಣಶಾಲೆಯ ಅಂಗಣದಲ್ಲಿ ಕುಳಿತರು. ಸ್ವಲ್ಪ ಹೊತ್ತಿನ ಮೇಲೆ ಅಗಸ್ತ್ಯರು ಧ್ಯಾನಸಮಾಧಿಯನ್ನು ಇಳಿಸಿದರು. ರುದ್ರಾಕ್ಷಮಾಲೆಯನ್ನು ಹಿಡಕೊಂಡುಸುಖಾಸನದ ಮೇಲೆ ಪ್ರತಿಬ್ರಹ್ಮನಂತೆ ವಿರಾಜಿಸುತ್ತಿರುವ ಅಗಸ್ತ್ಯರನ್ನು ನೋಡಿ, ದೇವತೆಗಳೂ, ಇಂದ್ರನೂ ಸಂತುಷ್ಟರಾಗಿ, 'ಜಯವಾಗಲಿ' ಎಂದು ಜಯಜಯಕಾರ ಶಬ್ದವನ್ನುಚ್ಚರಿಸಿದರು. ಆ ಮಹಾಮುನಿಯಾದರೂ ತಾನೂ ಎದ್ದು ನಿಂತು ಎಲ್ಲರನ್ನೂ ಯೋಗ್ಯವಾದ ಆಸನಗಳ ಮೇಲೆ ಕುಳ್ಳಿರಿಸಿ, ಆಶೀರ್ವಚನಗಳಿಂದ ಅಭಿನಂದಿಸಿ, ಅವರು ಬಂದ ಕಾರಣವನ್ನು ಕೇಳಿದನು. ಆಗ ಇಂದ್ರನು 'ಮಹಾಭಾಗ್ಯನೇ, ದೇವತೆಗಳು ನಿನ್ನ ಬಳಿಗೆ ಬಂದ ಕಾರಣವನ್ನು ಕೇಳು. ನೀನು ಧನ್ಯನೂ, ಕೃತಕೃತ್ಯನೂ ಮಹಾತ್ಮರಿಗೆ ಮಾನ್ಯನೂ ಆಗಿರುತ್ತೀ; ನಿನ್ನ ಸಹಧರ್ಮಚಾರಿಣಿಯಾದ ಲೋಪಾಮುದ್ರೆಯು ಸದ್ಗುಣಮಂಡಿತಳೂ, ಪತಿವ್ರತಾಶಿರೋಮಣಿಯೂ, ಮಂಗಳಕರಳೂ ಆಗಿರುವಳು.

ಇಂಥ ಸದ್ಗುಣಮಂಡಿತಳಾದ ಹೆಂಡತಿಯಿಂದ ಮನುಷ್ಯನಿಗೆ ಇಹಲೋಕವೇ ಸ್ವರ್ಗ ತುಲ್ಯವಾಗಿ ಕಾಣುವದು. ದೇವ-ಪಿತೃ, ಅತಿಥಿ, ಯಜ್ಞ, ಪೂಜನಾದಿ ಕಾರ್ಯ ಗಳನ್ನು ಹೆಂಡತಿಯ ಸಹಾಯದಿಂದಲೇ ನೆರವೇರಿಸಲಿಕ್ಕೆ ಮನುಷ್ಯನಿಗೆ ಸಾಧ್ಯ ವಿರುವದು. ಯಾವಾತನ ಮನೆಯಲ್ಲಿ ಪತಿವ್ರತೆಯಾದ ಪತ್ನಿಯಿರುವಳೋ ಅವನೇ ನಿಜವಾದ ಗೃಹಸ್ಥಾಶ್ರಮಿಯೆಂದು ತಿಳಿಯಬೇಕು. ಗಂಗಾಸ್ನಾನದಿಂದ ದೇಹವು ಪವಿತ್ರವಾಗುವಂತೆ, ಪತಿವ್ರತೆಯ ದರ್ಶನದಿಂದ ಮನುಷ್ಯನು ಪರಿಶುದ್ಧನಾಗುವನ ಲ್ಲದೆ ವೈಭವ ಸಂಪನ್ನನೂ ಆಗುವನು. ಇಂದಿನ ದಿನ ನಮಗಾದ ನಿನ್ನ ದರ್ಶನವು ಗಂಗಾಸ್ನಾನಕ್ಕೆ ಸಮಾನವಾಗಿರುವದು'' ಎಂದು ಸ್ತೋತ್ರಮಾಡಿದನು. ದೇವತೆ ಗಳು ಪತಿವ್ರತೆಯಾದ ಆ ಮುನಿಪತ್ನಿಯನ್ನು ವಂದಿಸಿದ ಬಳಿಕ ಸರ್ವಾರ್ಥಗಳನ್ನು ಕೊಡುವದರಲ್ಲಿ ಸಿದ್ಧನಾದ ಓರ್ವ ದೇವಪುರುಷನು ಮುನಿಯನ್ನು ಕುರಿತು,— ಮಹಾಮುನಿಯೇ ನೀನೇ ಪ್ರಣವ(ಓಂಕಾರ)ನು,ನೀನೇ ಶ್ರುತಿಯು, ಶಾಂತಿಯೂ ತಪಸ್ಸೂ ನೀನೇ. ಸತ್ಕ್ರಿಯೆಯೂ ಅದರ ಫಲವೂ ನೀನೇ; ನೀನೇ ಧನ್ಯನು. ನಿನ್ನ ಹೆಂಡತಿಯ ಪಾತಿವ್ರತ್ಯದ ತೇಜಸ್ಸೂ ನಿನ್ನ ಶ್ರೇಷ್ಠವಾದ ಬ್ರಹ್ಮತೇಜಸ್ಸೂ, ಈ ನಿನ್ನ ತಪಸ್ಸಿನ ತೇಜಸ್ಸೂ ಇವೆಲ್ಲ ನಿನ್ನಲ್ಲಿ ಕೂಡಿರುವದರಿಂದ ನಿನಗೆ ಯಾವದು ಅಸಾಧ್ಯವಾಗಿರುವದು? ನಿನಗೆ ಗೊತ್ತಿಲ್ಲದೆ ಇರುವದು ಈ ಜಗತ್ತಿನಲ್ಲಿ ಯಾವದೂ ಇರುವದಿಲ್ಲ. ಆದರೂ ದೇವತೆಗಳು ನಿನ್ನ ಬಳಿಗೆ ಬಂದ ಕಾರಣ ವನ್ನು ಹೇಳುವೆನು, ಕೇಳು'' ಎಂದು ಇಂದ್ರನ ಕಡೆಗೆ ನೋಡಿ,— ''ಇವನು ಸಾಕ್ಷಾತ್ ಇಂದ್ರನು; ಇವನು ವಜ್ರಾಯುಧಧಾರಿಯು, ಆದರಿಂದ ಇವನು ವೃತ್ರಾಸುರನನ್ನು ಕೊಂದಿವನು; ಅಷ್ಟಸಿದ್ಧಿಗಳು ಇವನ ಬಾಗಿಲಲ್ಲಿ ನಿಂತು, ಅವನ ಪ್ರಸನ್ನದೃಷ್ಟಿಯ ಕಡೆಗೇ ಲಕ್ಷ್ಯಗೊಡುತ್ತ ಅವನ ಆಜ್ಞೆಯನ್ನೇ ನಿರೀಕ್ಷಿ ಸುತ್ತಿರುವವು; ಅವನ ರಾಜಧಾನಿಯ ಸೀಮೆಯಲ್ಲಿ ಕಾಮಧೇನುಗಳ ಗುಂಪು ಸಂಚರಿಸುತ್ತಿರುವದು; ಅವನ ಪುರನಿವಾಸಿಗಳು ಕಲ್ಪವೃಕ್ಷಗಳ ನೆರಳಿನಲ್ಲಿ ನಿತ್ಯ ದಲ್ಲಿಯೂ ಮಲಗಿಕೊಳ್ಳುವರು; ಅವನ ರಾಜಧಾನಿಯ ಬೀದಿಗಳಲ್ಲಿ ಚಿಂತಾ ಮಣಿಗಳು ಹಂಚು-ಹರಳುಗಳಂತೆ ಬಿದ್ದಿರುವವು'' ಎಂದು ಹೇಳಿ, ''ಇವನು ಅಗ್ನಿಯು, ಇವನು ಜಗಜ್ಜ್ಯೋತಿಯು, ಇವನು ಧರ್ಮರಾಜನು; ಇವನು ವರು ಣನು, ಇವನು ನಿರುತಿಯು, ಇವನು ವಾಯುವು; ಇವನು ವಿಷ್ಣುವು, ಈತನು ರುದ್ರನು ಇವರೆಲ್ಲ ದೇವತೆಗಳು ಪುಣ್ಯವಂತರಾದ ಸಜ್ಜನರಿಂದ ಸರ್ವ ತಪಸ್ಸು ಗಳ ಸಿದ್ಧ್ಯರ್ಥವಾಗಿ ಪೂಜಿಸಲ್ಪಡುವರು; ಆದರೆ ಇಂದಿನ ದಿನ ಇವರು ಜಗ

ತ್ತಿನ ಉಪಕಾರಾರ್ಥವಾಗಿ ಮುನಿಯಾದ ನಿನ್ನನ್ನು ಪೂಜಿಸಿರುವರು. ನೀನು ಮಾಡತಕ್ಕ ವಿಶ್ವೋಪಕಾರಕವಾದ ಕೆಲಸವನ್ನು ನಾವು ಕೇವಲ ವಚನದಿಂದ ಅಡಿತೋರಿಸುವದು ಅವಶ್ಯವದೆ. ವಿಂಧ್ಯವೆಂಬ ಒಂದು ಪರ್ವತವು ಸೂರ್ಯನ ಮಾರ್ಗವನ್ನು ಅವರೋಧವಮಾಡಿ ಮೇರು ಪರ್ವತಕ್ಕೆ ಸಮಾನವಾಗಿ ಆಗ ಬೇಕೆಂಬ ಸ್ಪರ್ಧೆಯಿಂದ ಬೆಳೆಯಹತ್ತಿರುವದು. ಆದ್ದರಿಂದ ನೀನು ಅದರ ಬೆಳವಣಿಗೆಯನ್ನು ಪ್ರತಿಬಂಧಿಸಿ, ಅವನು ಪೂರ್ವವತ್ ಆಗುವಂತೆ ಮಾಡ ಬೇಕಾಗಿರುವದು. ಕಪಟಿಗಳೂ ಮಾರ್ಗವನ್ನು ಪ್ರತಿಬಂಧಿಸುವವರೂ ಇವರೆಲ್ಲರ ವೃದ್ಧಿಯು ಜ್ಞಾನಿಗಳಿಂದ ನಿಂದಿಸಲ್ಪಡುವದು'' ಎಂದು ಹೇಳಿದರು.

ದೇವತೆಗಳ ಮಾತನ್ನು ಕೇಳಿ, ಮಹಾಮುನಿಯಾದ ಅಗಸ್ತ್ಯನು ಸ್ವಲ್ಪ ಹೊತ್ತು ಮನಸ್ಸನ್ನು ಏಕಾಗ್ರಮಾಡಿ, ದೇವತೆಗಳೇ, ನಾನು ನಿಮ್ಮ ಕಾರ್ಯ ವನ್ನು ಸಾಧಿಸಿಕೊಡುವೆನು ಎಂದು ಹೇಳಿ, ಆ ಎಲ್ಲ ದೇವತೆಗಳನ್ನು ಕಳಿಸಿದನು. ಬಳಿಕ ಮುನಿಯು ಚಿಂತಾಪರನಾಗಿ ಧ್ಯಾನಸ್ಥನಾದನು. ವಿಶ್ವೇಶ್ವರನನ್ನು ಧ್ಯಾನ ಮಾಡಿ, ಆ ಮುನಿಯು ತನ್ನ ಪತ್ನಿಯಾದ ಲೋಪಾಮುದ್ರೆಯನ್ನು ಕುರಿತು— "ಪ್ರಿಯಳೇ, ನೋಡು, ಈವೊತ್ತು ಇದೇನು ಸಂಭವಿಸಿತು? ಆ ಮಹತ್ಕಾರ್ಯ ವೆಲ್ಲಿ? ಮುನಿಮಾರ್ಗಾನುಸಾರಿಗಳಾದ ನಾವೆಲ್ಲಿ? ಯಾವ ಇಂದ್ರನು ಲೀಲೆ ಯಿಂದ ಪರ್ವತಗಳ ಪಕ್ಕಗಳನ್ನು ಕಡಿದನೋ ಆ ಇಂದ್ರನ ಸಾಮರ್ಥ್ಯವು ಒಂದು ಯಃಕಶ್ಚಿತ್ ಪರ್ವತದ ವಿಷಯದಲ್ಲಿ ಕುಂಠಿತವಾಗಿರಬಹುದೇನು? ಯಾವ ಇಂದ್ರನ ಗಣದಲ್ಲಿ ಕಲ್ಪವೃಕ್ಷವಿರುವದೋ, ಯಾವಾತನ ಆಯುಧವು ವಜ್ರವಿರುವದೋ, ಯಾವ ಇಂದ್ರನ ಮನೆಯ ಬಾಗಿಲವನ್ನು ಅಷ್ಟಸಿದ್ಧಿಗಳು ಕಾಯುತ್ತಿರುವವೋ ಅಂಥ ದೇವೇಂದ್ರನು ನನ್ನಂಥ ಬ್ರಾಹ್ಮಣನನ್ನು ತನ್ನ ಕಾರ್ಯಸಿದ್ಧಿಗಾಗಿ ಪ್ರಾರ್ಥಿಸುತ್ತಿರುವನು. ಪರ್ವತಗಳು ಎಷ್ಟು ದೊಡ್ಡವಿ ದ್ದಾಗ್ಯೂ ಅವು ಕಾಡುಬೇಗೆಯಿಂದ ಒಂದು ಗಳಿಗೆಯಲ್ಲಿ ವ್ಯಾಕುಲವಾಗುತ್ತವೆ. ಲೋಕಶಿಕ್ಷೆಯನ್ನು ಮಾಡುವವನ ಶಕ್ತಿಯು ಆ ಪರ್ವತದ ವೃದ್ಧಿಯನ್ನು ನಿರೋಧವಮಾಡಲಿಕ್ಕೆ ಸಾಲದೋ? ಯಾವನು ದಂಡಧಾರಿಯಾಗಿ ಸರ್ವ ಲೋಕಗಳನ್ನು ನಿಗ್ರಹಮಾಡುವನೋ ಅಂಥವನು ಆ ಪರ್ವತಕ್ಕೆ ಶಾಸನ ಮಾಡಲಾರನೇ? ಯಾವ ಆದಿತ್ಯ, ವಸು, ರುದ್ರ, ದೇವಗಣ, ಅಶ್ವಿನಿಕುಮಾರರು ಇವರೇಮೊದಲಾದ ದೇವತೆಗಳ ದೃಷ್ಟಿಪಾತಲವಾತ್ರ ದಿಂದ ಲೋಕಗಳೆಲ್ಲ ನಾಶವಾಗುವವೋ ಆ ದೇವತೆಗಳು ಸಹ ಆ ವಿಂಧ್ಯಾದ್ರಿಯ

ವೃದ್ಧಿಯನ್ನು ನಾಶಮಾಡುವದಕ್ಕೆ ಶಕ್ತರಾಗಲಿಲ್ಲವೇ? ಕಾಶಿಯ ಉದ್ದಿಶ್ಯ ನಾನು ಇಷ್ಟು ಚಡಪಡಿಸುತ್ತೇನೆ. ತತ್ವಜ್ಞಾನಿಗಳೂ, ದೇವತೆಗಳೂ, ಮುಮುಕ್ಷುಗಳೂ ಕಾಶಿಯನ್ನು ಬಿಟ್ಟು ಹೋಗತಕ್ಕದ್ದಲ್ಲ; ಆದರೂ ಕಾಶಿಯಲ್ಲಿ ಇರುವಂಥ ಸಜ್ಜನರಿಗೂ ಸಹ ವಿಘ್ನಗಳು ಬರುತ್ತವಲ್ಲ. ಶುಭಾಂಗಿಯೇ, ನಮಗೆ ಇದೊಂದು ದೊಡ್ಡ ವಿಘ್ನವು ಬಂದು ಕುಳಿತದೆ. ವಿಶ್ವೇಶ್ವರನು ನನಗೆ ಅಂತರಿಸುವನೆಂಬ ಭಯದಿಂದ ನಾನು ದೇವತೆಗಳ ವಿಜ್ಞಾಪನೆಯನ್ನು ಉಲ್ಲಂಘಿಸಲಿಕ್ಕೆ ಬರುವದಿಲ್ಲ; ಜನ್ಮಾಂತರದಲ್ಲಿ ಸಂಪಾದಿಸಿಟ್ಟ ಪುಣ್ಯದರಾಶಿಯಿಂದ ದೊರಕುವ ಕಾಶೀ ಪಟ್ಟಣದ ವಾಸವನ್ನು ಬಿಟ್ಟು ಬ್ರಾಹ್ಮಣರು ಹೋಗಬಾರದು. ಹಾಗೆ ಮಾಡಿದರೆ ಮೂಢರಾಗುವರು. ಕೈಯಲ್ಲಿದ್ದ ಅನ್ನವನ್ನು ಬಿಟ್ಟು ಹಂಚನ್ನು (ಮಣ್ಣಿನ ಪಾತ್ರೆಯನ್ನು) ನೆಕ್ಕಿದ ಹಾಗೆ ಆಗುವದು. ವಿಶ್ವಕ್ಕೆ ಪ್ರಕಾಶಕವಾದ ಕಾಶಿಯನ್ನು ಬಿಟ್ಟು ಅನ್ಯತ್ರವಾಸಿಸುವದು ತುಚ್ಛವಾದದ್ದು; ಕಾಶಿಯಲ್ಲಿಯೇ ಬೆಳೆದು ಪುಷ್ಟನಾದವನು ಎರಡನೆಯ ಕಡೆಗೆ ಹೋಗಬಹುದೇ? ಇಡೀ ಕುಂಬಳಕಾಯಿಯು ಆಡಿನ ಮುಖದಲ್ಲಿ ಪ್ರವೇಶಿಸುವದು ಶಕ್ಯವೋ? ಚಂದ್ರನಂತೆ ವಿರಾಜಿಸುವ ಎಲೈ ಕುಬೇರಸಖನೇ ಹೇ ದಂಡಪಾಣಿಯೇ, ತಪೋಭಂಗದಿಂದ ಹುಟ್ಟಬಹುದಾದ ದುಃಖವು ನಿನಗೆ ಚನ್ನಾಗಿ ಗೊತ್ತಿರುವದು. ಅಂದೆಬಳಿಕ ಕಾಶೀವಾಸಿಯಾದ ನನ್ನನ್ನು ಕಾಶಿಯನ್ನು ಬಿಟ್ಟು ಹೊರಗೆ ಯಾಕೆ ಒಯ್ಯುವಿ? ನಾನು ಪರಾಪಕಾರದ ದೋಷವನ್ನಾಚರಿಸಿಲ್ಲ. ನಾನು ಪರಾಪಕಾರವನ್ನೂ ಮಾಡಿರುವದಿಲ್ಲ; ಪರದ್ರವ್ಯಹರಣಕ್ಕೂ ಪರರ ಭಾರ್ಯಾಗಮನಕ್ಕೂ ನಾನು ಮನಸ್ಸು ಹಾಕಿಲ್ಲ. ಹೀಗಿದ್ದು ಕಾಶಿಯಿಂದ ನನ್ನನ್ನು ಹೊರಗೆ ಒಯ್ಯುವದು ನನ್ನ ಯಾವ ಫಲಗಳ ಕರ್ಮವಿರಬಹುದು ? ನಾನು ಲೋಕೋಪಕಾರ ಮಾಡಬೇಕೆಂದು ದೇವತೆಗಳು ಯಾಕೆ ನನಗೆ ಪ್ರಾರ್ಥನೆ ಮಾಡಿಕೊಂಡರು.'' ಎಂದು ಮಾತಾಡಿದನು.

ಬಳಿಕ ಅಗಸ್ತ್ಯಮುನಿಯು ಮೊದಲು ತೇಜಸ್ವಿಗಳೂ, ಬಾಲರೂ, ವೃದ್ಧರೂ ಆದ ಮುನಿಗಳ ನಿರೂಪವನ್ನು ತೆಗೆದುಕೊಂಡನು. ಕೃಹಾಗ್ನಿ ವೃಕ್ಷಲತೆಗಳನ್ನು ನಮಸ್ಕರಿಸಿ, ಕಾಶೀಪಟ್ಟಣಕ್ಕೆ ಪ್ರದಕ್ಷಿಣೆ ಹಾಕಿ ಪುನಃಪುನಃ ಗಂಗಾನದಿಯ ಜಲವನ್ನು ಸ್ಪರ್ಶ ಮಾಡಿ ಪ್ರಾಸಾದಗಳ ಸುತ್ತುಮುತ್ತು ನೋಡುತ್ತ ನಡೆದನು. ಸೀಮೆಯನ್ನು ದಾಟಿದ ಕೂಡಲೆ ಅವನು ಅಲ್ಲಿ ಸಂಚರಿಸುವ ಭೂತಗಣಗಳನ್ನು ಕುರಿತು ''ಭೂತಗಣಗಳೇ, ಸುಕೃತಗಳ ರಾಶಿಯಾದ ಕಾಶಿಯನ್ನು ಬಿಟ್ಟು ಹೋಗುವೆನು'' ಎಂದು ನುಡಿಯುತ್ತ ನಡೆದನು. ''ಹಾ ಕಾಶಿ, ಹಾಕಾಶಿಯೇ, ಪುನರ್ದರ್ಶ

ನವಿತ್ತು ನನ್ನನ್ನು ಪೋಷಿಸು, ಎಂದು ಬಡಬಡಿಸುತ್ತ ವಿರಹಿಪುರುಷನಂತೆ ಮೂರ್ಛೆಯನ್ನು ಹೊಂದಿದನು. ಮತ್ತು ಶಿವಶಿವ ಎಂದು ನುಡಿದು ಕ್ಷಣಹೊತ್ತು ನಿಂತನು. "ದೇವತೆಗಳ ಮನಸ್ಸು ಕಠೋರವಾದದ್ದು. ಎಂದು ಅನ್ನುತ್ತ ಆ ಮುನಿಯು ತಪೋ ಬಲದಿಂದ ಒಂದು ಅರ್ಧ ನಿಮಿಷದಲ್ಲಿ ವಿಂಧ್ಯಪರ್ವತವಿದ್ದೆಡೆಗೆ ಬಂದು, ಗಗನಮಾರ್ಗವನ್ನು ನಿರೋಧಮಾಡಿ ಉನ್ನತವಾಗಿ ಬೆಳೆದ ವಿಂಧ್ಯಪರ್ವತವನ್ನು ನೋಡಿದನು. ವಾತಾಪಿ ಇಲ್ವಲ ರಾಕ್ಷಸರ ವೈರಿಯೂ, ಸಪತ್ನೀಕನೂ, ಆದ ಅಗಸ್ತ್ಯಮುನಿಯು ತನ್ನ ಎದುರಿಗೆ ಬಂದು ನಿಂತದ್ದನ್ನು ವಿಂಧ್ಯಾದ್ರಿಯು ನೋಡಿ ನಡುಗಿದನು. ಆಗ ತಪಸ್ಸು, ಕ್ರೋಧ, ಕಾಶೀವಿಯೋಗ ಇವುಗಳಿಂದ ಹುಟ್ಟಿದ ಮೂರು ಬಗೆಯ ಅಗ್ನಿಗಳಿಂದ (ಪ್ರಲಯಾಗ್ನಿಯ ಜ್ವಾಲೆಗಳಂತೆ) ಉರಿಯುವಂತೆ ಆತನು ತೋರುತ್ತಿದ್ದನು. ಇದನ್ನು ಕಂಡು ವಿಂಧ್ಯಪರ್ವತವು ಬಹಳ ಗಿಡ್ಡನಾಗಿಯೂ, ನಮ್ರನಾಗಿಯೂ ಮುನಿಗಳ ಪಾದಕಮಲಗಳನ್ನು ಹಿಡಿದು ನಮಸ್ಕರಿಸಿ, "ಮುನಿಗಳೇ ನಾನು ಏನು ಮಾಡಬೇಕೆಂಬ ವಿಷಯದಲ್ಲಿ ದಯವಿಟ್ಟು ನನಗೆ ಆಜ್ಞೆಯನ್ನು ಮಾಡಬೇಕೆಂದು ಕೇಳಿದನು. ಅದಕ್ಕೆ ಅಗಸ್ತ್ಯನು, "ಹೇ ವಿಂಧ್ಯನೇ, ನೀನು ಸಜ್ಜನನು. ಹೇ ಬುದ್ಧಿವಂತನೇ ನೀನು ನನ್ನನ್ನು ನಿಜವಾಗಿ ತಿಳಿದಿರುವಿಯಾ? ನಾನು ದಕ್ಷಿಣ ದೇಶಕ್ಕೆ ಹೋಗಿ ತಿರುಗಿ ಬರುವಷ್ಟರೊಳಗೆ ನೀನು ಇದಕ್ಕೂ ಸಣ್ಣವನಾಗು'' ಎಂದು ನುಡಿದು ಲೋಕೋಪಕಾರ ಮಾಡುವದಕ್ಕಾಗಿ ಬದ್ಧನಾದ ಆ ಮುನಿಯು ದಕ್ಷಿಣದಿಕ್ಕಿಗೆ ಹೊರಟನು. ಮುನಿಯು ಅತ್ತ ಹೋದ ಕೂಡಲೆ ವಿಂಧ್ಯಪರ್ವತವು ನಡುಗುತ್ತ, "ನಾನು ಪುನಃ ಹುಟ್ಟಿದ ಹಾಗೆ ಆಯಿತು. ಯಾಕಂದರೆ ಅಗಸ್ತ್ಯನು ನನಗೆ ಶಾಪವನ್ನು ಕೊಡದೆ ಹಾಗೆಯೇ ಹೋದನು. ನನ್ನಷ್ಟು ಧನ್ಯನು ಈ ಲೋಕದಲ್ಲಿ ಯಾರೂ ಇಲ್ಲ'' ಎಂದು ತಿಳಿದನು. ವಿಂಧ್ಯಪರ್ವತವು ಬಾಗಿದ ಕೂಡಲೆ ಸೂರ್ಯನು ಮೊದಲಿನಂತೆ ಕಾಲವನ್ನು ನಡೆಯಿಸಹತ್ತಿದನು. ಸೂರ್ಯನ ಸಂಚಾರ ಕ್ರಿಯೆಯು ಸುರಕ್ಷಿತವಾಗಿ ನಡೆಯಲು ಜಗತ್ತು ಸುಖವನ್ನು ಹೊಂದಿತು. ಮುನಿಯು ಇಂದು ಬರುವನು; ನಾಳೆ ಬರುವನು ಎಂದು ಚಿಂತಾಭಾರದಿಂದ ಪೀಡಿತನಾದ ಆ ವಿಂಧ್ಯಾದ್ರಿಯು ತನ್ನ ತಲೆಯನ್ನು ಬಾಗಿಸಿ ಗಿಡ್ಡನಂತೆ ನಿಂತನು. ಇವೊತ್ತಿನ ವರೆಗೂ ಮುನಿಯು ಬರಲಿಲ್ಲ. ಗಿರಿಯು ಬೆಳೆಯಲಿಲ್ಲ. ಅನ್ಯರ ಸಾಮರ್ಥ್ಯವನ್ನು ತಿಳಿಯದೆ ನಿಜಶಕ್ತಿಯನ್ನು ತೋರಿಸುತ್ತ ನಡೆಯುವವನು ಈ ವಿಂಧ್ಯಾಚಲನಂತೆ ಲೋಕದ ಉಪಹಾಸ್ಯಕ್ಕೆ ಮಾತ್ರ ಪಾತ್ರನಾಗುವನು.

# ೪ ನೆಯ ಅಧ್ಯಾಯ.

## ಅಗಸ್ತ್ಯಮುನಿಗಳಿಗೆ ಶಂಕರಿಯ ದರ್ಶನ.

ಸ್ಕಂದನು—''ಬಳಿಕ ಅಗಸ್ತ್ಯಮುನಿಯು ರಮ್ಯವಾದ ಗೋದಾವರೀತೀರಕ್ಕೆ ಬಂದು ಅಲ್ಲಿ ತಿರುಗಾಡುತ್ತಿದ್ದಾಗ್ಯೂ ಅವನನ್ನು ಕಾಶೀ ವಿರಹದ ತಾಪವು ಬಿಡಲಿಲ್ಲ. ಅವನು ಪ್ರಾಣತ್ಯಾಗವನ್ನಾದರೂ ಮಾಡಬೇಕೆಂದು ಯೋಚಿಸ ಹತ್ತಿ ಮಹಾ ಚಿಂತೆಯಲ್ಲಿ ಮಗ್ನನಾದನು. ಅವನು, ''ನಾನು ಎಲ್ಲಿ ಹೋಗಲಿ, ಎಲ್ಲಿ ನಿಲ್ಲಲಿ, ಎಲ್ಲಿ ವಾಸಮಾಡಲಿ, ಈ ಭೂಮಂಡಲದಲ್ಲಿ ಕಾಶಿಯಂಥ ತಪೋಭೂಮಿಯು ನನಗೆ ಎಲ್ಲಿ ಸಿಗುವದು? ಹೇ ವಿಶ್ವೇಶನೇ, ನೀನು ಸರ್ವೇಶನೂ, ಭಕ್ತರ ದುಃಖಗಳನ್ನು ಹರಣ ಮಾಡುವವನೂ ಇರುವಿ. ನನ್ನನ್ನು ಸಂರಕ್ಷಿಸು. ನಿನ್ನ ವಿಯೋಗದಿಂದ ನನ್ನ ಬುದ್ಧಿಯು ಭ್ರಂಶವನ್ನು ಹೊಂದಿದ ಹಾಗಾಗಿದೆ. ನೀನು ಅಂತರ್ಯಾಮಿಯಾಗಿ ಇಡಿ ಬ್ರಹ್ಮಾಂಡವನ್ನು ವ್ಯಾಪಿಸಿರುವೆ. ಯಾವ ತೀರ್ಥದಲ್ಲಿ ನಿನ್ನ ದರ್ಶನವಾಗಿ ನನ್ನ ಮನೋರಥಗಳು ಪೂರ್ಣವಾಗುವವೋ, ಅಂಥ ಒಂದು ಶ್ರೇಷ್ಠವಾದ ತೀರ್ಥವನ್ನು ನನ್ನ ಹೃದಯದಲ್ಲಿ ಪ್ರಕಾಶಿಸು. ಇಲ್ಲದಿದ್ದರೆ ನಾನು ನಿನ್ನ ವಿಯೋಗ ದುಃಖದಿಂದ ಪೀಡಿತವಾದ ಈ ನನ್ನ ದೇಹವನ್ನು ತ್ಯಜಿಸುವೆನು'' ಎಂದು ವ್ಯಾಕುಲ ಚಿತ್ತನಾಗಿ ಭೂಮಿಯ ಮೇಲೆ ಬೀಳುವಷ್ಟರೊಳಗೆ ವಿಶ್ವೇಶ್ವರನು ಆ ಮುನಿಯ ಹೃದಯದಲ್ಲಿ ಹೊಕ್ಕು ಶುದ್ಧಮತಿಯನ್ನು ಕೊಟ್ಟನು. ಆಗ ''ಕರವೀರ (ಕೊಲ್ಹಾಪುರ) ವೆಂಬ ಶ್ರೇಷ್ಠವಾದ ಹಾಗು ಪುಣ್ಯಕರವಾದ ದೊಡ್ಡ ಕ್ಷೇತ್ರವಿರುವದೆಂಬ ಮಾತು ಆ ಮಹಾತ್ಮನ ಸ್ಮರಣದಲ್ಲಿ ಬಂದಿತು. ಕೂಡಲೆ ಅವನು ಎದ್ದು ತನ್ನ ಹೆಂಡತಿಯನ್ನು ಕುರಿತು—''ಪ್ರಿಯೇ ಹೋಗೋಣ ನಡೆ'' ಎಂದು ಹೇಳಿದನು. ಅದಕ್ಕೆ ಪತಿವ್ರತೆಯಾದ ಆ ಸ್ತ್ರೀಯಳು (ಲೋಪಾಮುದ್ರೆಯು) ಮುಗುಳುನಗೆಯಿಂದ ನಗುವಂಥ ತನ್ನ ಗಂಡನಾದ ಅಗಸ್ತ್ಯಮುನಿಶ್ರೇಷ್ಠನನ್ನು ನೋಡಿ ತಾನೂ ನಕ್ಕಳು. ಮತ್ತು ತನ್ನ ಪತಿಯ ವಚನಗಳನ್ನು ಕೇಳಿ, ಲೋಪಾಮುದ್ರೆಯು ತನ್ನ ಮನೋರಥಗಳನ್ನು ಅವನಿಗೆ ತಿಳಿಸಿದಳು. ಲೋಪಾಮುದ್ರೆಯು—''ಜ್ಞಾನಶ್ರೇಷ್ಠನೇ, ನಿನಗೆ ಯಾತರ ಸ್ಮರಣ

ವಾಗಿ ಇಷ್ಟು ಆನಂದವಾಗಿರುವದು? ಆ ಆನಂದದ ಕಾರಣವನ್ನು ನಾನು ಈಗ ಕೇಳುತ್ತೇನೆ. ಯಾಕಂದರೆ, ಕಾಶೀವಿರಹದುಃಖಿತನಾದ ನೀನು ಚಟವಟಿಕೆಯಿಂದ ಓಡಾಡುವದು ಸಹ ಶಕ್ಯವಿದ್ದಿಲ್ಲ. ಆದ್ದರಿಂದ ನಿನ್ನ ಆನಂದದ ಕಾರಣವನ್ನು ಕೇಳಲಿಕ್ಕೆ ನಾನು ಕವಕಿಸುತ್ತೇನೆ. ಹೇಳಲಿಕ್ಕೆ ತೊಂದರೆಯಿಲ್ಲದಿದ್ದರೆ, ನೀನು ನಿನ್ನ ಆ ಆನಂದವೆಂಬ ಮಹಾಸಮುದ್ರದ ಮೂಲವನ್ನೆಲ್ಲ ಹೇಳು ಎಂದು ಕೇಳಿದಳು. ತನ್ನ ಪತ್ನಿಯು ಈ ಪ್ರಕಾರ ಪ್ರಶ್ನೆಮಾಡಿದ್ದನ್ನು ಕೇಳಿ, ಆ ಮಹಾ ಮುನಿಯು ದಕ್ಷಿಣವಾರಣಾಸೀಕ್ಷೇತ್ರ ಮಹಾತ್ಮ್ಯವನ್ನು ಹೃದಯದಲ್ಲಿ ಸ್ಮರಿಸಿ, "ಹೇ ಕಲ್ಯಾಣೀ, ನನಗೆ ಉಂಟಾದ ಮಹದಾನಂದದ ಕಾರಣವನ್ನು ಕೇಳು. ಶ್ರೀ ವಿಶ್ವೇಶ್ವರನ ಕೃಪೆಯಿಂದ ನನಗೆ ಕರವೀರಪುರ (ಕೊಲ್ಹಾಪುರ) ದ ಸ್ಮರಣ ವಾಯಿತು. ಜಂಬೂದ್ವೀಪವು, ಶುಭಕರವೂ, ಭುಕ್ತಿಮುಕ್ತಿಪ್ರದವೂ ಆದ ಅನೇಕ ಸುಕ್ಷೇತ್ರಗಳನ್ನು ಒಳಕೊಂಡದ್ದಾಗಿರುವದು. ಅದರ ಸ್ಮರಣವೆಂಬ ಚಂದ್ರನು ಕಾಶಿಯ ವಿಯೋಗದಿಂದ ಹುಟ್ಟಿದ ಅಗ್ನಿಯ ತಾಪವನ್ನು ಶಾಂತಮಾಡಿ ದನು; ಜಂಬೂದ್ವೀಪದೊಳಗಿನ ಆ ಕರವೀರಕ್ಷೇತ್ರದ ವರ್ಣನೆಯನ್ನು ಯಾರು ಮಾಡಲು ಸಮರ್ಥರಿರುವರು? ಕರವೀರದ ದರ್ಶನಮಾತ್ರದಿಂದಲೇ ಪಾಪಪರಿಹಾ ರವಾಗುವದು. ಅಲ್ಲಿಂದ ಪಂಚಕ್ರೋಶದ ಅಂತರದಲ್ಲಿ ತ್ರಿಸ್ಥಲಿಯು ಇರುವದು. ಸುಂದರೀ ನಡೆ. ಈ ಪುಣ್ಯಕರವಾದ ಕ್ಷೇತ್ರಕ್ಕೆ ಹೋಗಿ ಸುಖದಿಂದ ವಾಸ ಮಾಡೋಣ" ಎಂದು ಹೇಳಿದನು. ಆ ಮುನಿಶ್ರೇಷ್ಠನು ತನ್ನ ತಪೋಬಲ ಪ್ರಭಾವ ದಿಂದ ಕರವೀರಪುರಕ್ಕೆ ಹೋಗಿ ಆ ಕ್ಷೇತ್ರದ ಶ್ರೇಷ್ಠವಾದ ಮಾಹಾತ್ಮ್ಯವನ್ನು ತಿಳಿದು, ಲೋಪಾಮುದ್ರೆಯನ್ನು ಕರಕೊಂಡು ಪಂಚಗಂಗಾಸ್ನಾನ ಮಾಡಿದನು. ಬಳಿಕ ಆ ಕ್ಷೇತ್ರದಲ್ಲಿ ತೀರ್ಥಶ್ರಾದ್ಧವನ್ನು ಮಾಡಿ, ಗೋ, ಭೂ, ತಿಲ, ಹಿರಣ್ಯ, ಅನ್ನ ಮೊದಲಾದವುಗಳನ್ನು ಯಥಾಶಕ್ತಿಯಾಗಿ ಬ್ರಾಹ್ಮಣರಿಗೆ ದಾನವಾಗಿ ಕೊಟ್ಟನು. ಅನಂತರ ಆ ಮುನಿಯು ಪಿತೃತರ್ಪಣೆಮಾಡಿ, ವಿಧ್ಯುಕ್ತವಾಗಿ ಶ್ರೀ ವಿಷ್ಣುವಿನ ದರ್ಶನವನ್ನು ಪಡಕೊಂಡು, ಮಣಿಕರ್ಣಿಕೆಯಲ್ಲಿ ಸ್ನಾನಮಾಡಿ, ಮಣಿಕರ್ಣಿಕೇಶ್ವರ-ಕುಕ್ಕುಟೇಶ್ವರರಿಗೆ ನಮಸ್ಕಾರಮಾಡಿ, ಅನ್ಯದೇವತೆಗಳಿಗೂ ಕ್ರಮಶಃ ನಮಸ್ಕಾರಮಾಡುತ್ತ ನಡೆದನು. ಬಳಿಕ ದತ್ತಾತ್ರೇಯರನ್ನೂ ಅವನ ಪಾದುಕೆಗಳನ್ನೂ ವಂದಿಸಿ, ಆ ಮುನೀಶ್ವರನು ದೇವಿಯ (ಲಕ್ಷ್ಮಿಯ) ಮುಕ್ತಿ ಮಂಟಪವನ್ನು ಪ್ರವೇಶಿಸಿದನು. ಬಳಿಕ ವಿನಾಯಕ-ರುದ್ರರನ್ನು ವಿಧಿಪೂರ್ವಕ ವಾಗಿ ಪೂಜಿಸಿ, ಗರ್ಭಗುಡಿಯಲ್ಲಿ ಹೋಗಿ ಮಹಾಲಕ್ಷ್ಮಿಗೆ ಪ್ರಣಾಮ ಮಾಡಿ,

ಗಂಧ, ಪುಷ್ಪ, ಸುವಸ್ತ್ರವೊದಲಾದವುಗಳಿಂದ ಪೂಜೆಮಾಡಿ, ಮಹಾದೇವಿಗೆ ಆ ಮುನಿಯು ಪುಷ್ಪಾಂಜಲಿಯನ್ನು ಅರ್ಪಿಸಿದನು. ಬಳಿಕ ಅವನು "ವಿಶ್ವದ ಸ್ಥಿತಿ-ಲಯಗಳಿಗೆ ಕಾರಣಳಾದ ದೇವಿಯೇ ನಿನಗೆ ನಾನು ನಮಸ್ಕರಿಸುವೆನೆಂದು ದಂಡವತ್ ನಮಸ್ಕಾರ ಮಾಡಿದನು. ಅನಂತರ ಆ ಮುನಿಯು ಬದ್ಧಾಂಜಲಿಯಾಗಿ ಆ ಮಹಾ ದೇವಿಯ ಸ್ತೋತ್ರವನ್ನು ಮಾಡಲಾರಂಭಿಸಿದನು.—"ಪವಿತ್ರಳೂ, ದೇವತೆಗಳಲ್ಲಿ ಶ್ರೇಷ್ಠಳೂ, ಜಗತ್ತಿನ ಜನ್ಮ-ಸ್ಥಿತಿ-ಲಯಗಳಿಗೆ ಆದಿಕಾರಣಳೂ ಆದ ಮಹಾಲಕ್ಷ್ಮಿ ಯೇ, ನಾನು ನಿನಗೆ ನಮಸ್ಕಾರಮಾಡುತ್ತೇನೆ. ನೀನು ಯಾವಾಗಲೂ, ಯಜ್ಞ ಕುಲಕ್ಕೆ ಮುಕ್ತಿಪ್ರದಳೂ, ಪ್ರಾಜ್ಞಕುಲಕ್ಕೆ ಭುಕ್ತಿಪ್ರದಳೂ ಇರುತ್ತೀ. ಮಹಾ ಲಕ್ಷ್ಮಿಯೇ, ನಾನು, ನಿನ್ನ ಪಾದಕಮಲಗಳ ದರ್ಶನದಿಂದ ಧನ್ಯನೂ, ಕೃತಕೃತ್ಯನೂ ಆಗಿರುವೆನು. ಹೇ ದೇವಿ, ಸಂಸಾರಭಯದಿಂದ ನಾನು ಅಂಜಿ ಕೊಂಡಿದ್ದೇನೆ. ಸರ್ವಸುಖವನ್ನು ಕೊಡುವ ತಾಯಿಯೇ ನೀನು ನನ್ನನ್ನು ರಕ್ಷಿಸು. ಇಂದಿನ ದಿನವು ಸುದಿನವು; ನಾನು ನರಜನ್ಮಕ್ಕೆ ಬಂದಿದ್ದರ ಫಲವು ನನಗೆ ಈ ದಿವಸ ದೊರಕಿದಂತಾಯಿತು. ಹೇ ತಾಯಿಯೇ, ಕೇವಲ ನಿನ್ನ ದರ್ಶನದಿಂದ ನನ್ನ ಮನೋರಥಗಳು ಪೂರ್ಣವಾಗಿರುವವು. ಪೂರ್ಣಚಂದ್ರನಂತೆ ಮನೋಹರ ಮುಖವುಳ್ಳವಳೇ, ನಾನು ನಿನ್ನ ಹತ್ತರ ಅನ್ಯವರವನ್ನು ಬೇಡುವದಿಲ್ಲ. ಕಾಮನೆ ಯನ್ನು ಪರಿಪೂರ್ಣಮಾಡುವ ಹೇ ದೇವಿಯೇ, ನನಗೆ ನಿನ್ನ ಕ್ಷೇತ್ರವಾಸದ ಯೋಗವನ್ನು ಒದಗಿಸಿಕೊಡು."

ಈ ಪ್ರಕಾರ ಮುನಿಯಿಂದ ಸ್ತುತಿಸಲ್ಪಟ್ಟವಳೂ, ಅಭೀಷ್ಟಪ್ರದಾಯಿನಿಯೂ ಪ್ರಸನ್ನ ಮುಖಿಯೂ ಆದ ಮಹಾಲಕ್ಷ್ಮಿಯು ಅಗಸ್ತ್ಯ ಮಹಾಮುನಿಯನ್ನು ಕುರಿತು ಶ್ರೇಷ್ಠನೇ, ನನ್ನ ಕ್ಷೇತ್ರವಾಸವು ಮಾತ್ರ ನಿನಗೆ ಸಿಗಲಾರದು. ಯಾಕಂ ದರೆ ವಿಂಧ್ಯಾದ್ರಿಯು ಪುನಃ ಬೆಳೆಯುವನೆಂದು ನಮಗೆ ಸಂದೇಹವಿದೆ. ಮೂರು ಲೋಕಗಳಿಗೆ ನೀನು ಉಪಕಾರವನ್ನು ಮಾಡಿರುತ್ತೀ. ವಿದ್ವಾಂಸನೇ, ವಿಂಧ್ಯಪರ್ವ ತದ ನಿಗ್ರಹವನ್ನು ಮಾಡುವದು ದೇವತೆಗಳಿಗೆ ಸಹ ಅಸಾಧ್ಯವಾಗಿತ್ತು. ನೀನು ಆ ಮಹಾ ಕಾರ್ಯವನ್ನು ನೆರವೇರಿಸಿದ್ದರಿಂದ ಈ ಲೋಕದಲ್ಲಿ ಎಲ್ಲ ಕರ್ಮಗಳು ಸುರಕ್ಷಿತವಾಗಿ ಸಾಗಹತ್ತಿವೆ. ಪರೋಪಕಾರಾರ್ಥವಾಗಿ ಜೀವಿಸುವವನ ಜೀವಿ ತವು ಜೀವವುಳ್ಳದ್ದೆಂದು ತಿಳಿಯಬೇಕು. ಆದರೆ ಯಾವನು ಕೇವಲ ಸ್ವಾರ್ಥಪರಾ ಯಣನಾಗಿ ಜೀವಿಸುವನೋ ಅವನು ಜೀವನ್ ಮೃತನೆಂದು ತಿಳಿಯಬೇಕು. ಯಾವನ ಹೃದಯದಲ್ಲಿ ಪರೋಪಕಾರ ಕಾರ್ಯವು ಜಾಗ್ರತವಾಗಿರುವದೋ

ಅವನು ಕಾಲಿಟ್ಟಲ್ಲಿ ದಕ್ಷಿಣ ಹಾಗು ಉತ್ತರಕಾಶಿಗಳಂಥ ಕ್ಷೇತ್ರಗಳು ಪ್ರಕಟವಾಗುವವು. ಧರ್ಮವು ಪರೋಪಕಾರದಿಂದ ಹುಟ್ಟುತ್ತದೆ. ಧರ್ಮವು ದಾನದಿಂದಲೂ ಸಂಭವಿಸುವದು. ಆದರೆ ಬ್ರಹ್ಮದೇವನು ಇವೆರಡು ಕಾರಣಗಳಿಂದ ಹುಟ್ಟಿದ ಎರಡು ಧರ್ಮಗಳನ್ನು ತುಲನೆಮಾಡಿ ನೋಡಲು ಮೊದಲನೆಯದು (ಪರೋಪಕಾರದಿಂದ ಉದ್ಭವಿಸಿದ್ದು) ಜಡವೂ, ಅಧಿಕವೂ ಆಯಿತು. ಪರೋಪಕಾರದಿಂದಾದಷ್ಟು ಮನಶ್ಶುದ್ಧಿಯು ತೀರ್ಥಸ್ನಾನದಿಂದಲೂ ಆಗುವದಿಲ್ಲ. ಪರೋಪಕಾರದ ಫಲವು ಬಹು ದಾನಗಳ ಫಲಕ್ಕಿಂತಲೂ ಹೆಚ್ಚಾದದ್ದು. ಪರೋಪಕಾರದಂಥ ಪುಣ್ಯವಿಲ್ಲ. ಪರಪೀಡೆಯಂಥ ಪಾಪವಿಲ್ಲ; ಎಂದು ಪೂರ್ವಜರು ಹೇಳಿದ್ದನ್ನು ಕೇಳು. ಅವರ ಈ ವಚನವು ಸುಭಾಷಿತವೇ ಆಗಿರುವದು. ಯಾರ ಹೃದಯದಲ್ಲಿ ಪರೋಪಕಾರ ಧರ್ಮವು ಇರುವದೋ ಅವರ ವಿಪತ್ತುಗಳು ನಾಶವಾಗುವವು. ಹೆಜ್ಜೆ ಹೆಜ್ಜೆಗೆ ಅವರಿಗೆ ಸಂಪತ್ತಿಯು ಸಿಗುವದು, ಮನುಷ್ಯನ ಜೀವಿತವು ಆನೆಯ, ಹೊಯ್ದಾಡುವ ಕಿವಿಯ ತುದಿಯಂತೆ ಚಂಚಲವಾಗಿರುವದು. ಆದ್ದರಿಂದ ಪಂಡಿತನಾದವನು ಪರೋಪಕಾರವನ್ನು ಮಾಡತಕ್ಕದ್ದು. ಪ್ರಾಣಿಗಳಿಗೆ ಉಪಕಾರ ಮಾಡಿದರೆ ಸದ್ಯದಲ್ಲಿಯೇ ಫಲವು ಸಿಗುವದು. ಈ ದಿನ ನಿನಗೆ ನನ್ನ ಕ್ಷೇತ್ರದರ್ಶನವಾದದ್ದು ನೀನು ಮಾಡಿದ ಉಪಕಾರದ ಫಲವೇಸರಿ; ಇಲ್ಲಿಂದ ನೀನು ಹೊರಟು ಉತ್ತಮವಾದ ಶಂಕರೀ ಕ್ಷೇತ್ರಕ್ಕೆ ಹೋಗಿ, ಆ ಮಹಾಕ್ಷೇತ್ರದ ದರ್ಶನವನ್ನು ತೆಗೆದುಕೋ, ವಾತಾಪಿ ಇಲ್ವಲರಾಕ್ಷಸರ ಸಂಹಾರವಾದರೂ ಪರಮ ಪರೋಪಕಾರದ ಕಾರ್ಯವು. ತದನಂತರ ನೀನು ಸ್ಕಂದಪರ್ವತ, ಶ್ರೀ ಶೈಲ, ಪಾತಾಲ ಗಂಗಾ ಕ್ಷೇತ್ರಗಳಿಗೆ ಹೋಗು. ದೇವತೆಗಳ ತಾಯಿಯಾದ ಶಂಕರೀ ದೇವಿಯು ನೂರು ವರ್ಷಗಳ ವರೆಗೆ ಅನಾವೃಷ್ಟಿಯಿಂದುಂಟಾದ ಸಂಕಟವನ್ನು ನಾಶಮಾಡಿ ಶಾಕಾನ್ನ (ಪಲ್ಲೆ ಕಾಯಿಗಳ ಆಹಾರ)ದಿಂದ ಪ್ರಜೆಗಳನ್ನು ರಕ್ಷಿಸಿದಳಾದ್ದರಿಂದ ಆಕೆಯು 'ಶಾಕಂಭರೀ' ಎಂದು ಲೋಕವಿಖ್ಯಾತಳಾಗಿರುವಳು. ಹೇ ಮಹಾ ಮುನಿಯೇ, ನೀನು ಅಲ್ಲಿಗೆ ಹೋಗಿ ತಪಸ್ಸನ್ನು ಆಚರಿಸಿದರೆ ಕಾಶೀವಾಸದ ಫಲವು ನಿನಗೆ ದೊರೆಯುವದು.'' ಎಂದು ಉಪದೇಶಿಸಿದಳು.

ಮಹಾ ದೇವಿಯ ಈ ವಚನವನ್ನು ಕೇಳಿ ಆತ್ಮ ನಿಷ್ಠನಾದ ಆ ಅಗಸ್ತ್ಯ ಮುನಿಯು ಮೂರ್ಛಿತನಾಗಿ ಗಾಳಿಯಿಂದ ಉರುಳಿದ ವೃಕ್ಷದಂತೆ ಬಿದ್ದನು. ಮಹಾ ಶೋಕದಿಂದ ದುಃಖಿತನಾಗಿ ನೆಲಕ್ಕೆ ಬಿದ್ದ ಮುನಿಯನ್ನು ತನ್ನ ಕೈಗಳಿಂದ ಎಬ್ಬಿಸಿ' ಲಕ್ಷ್ಮೀದೇವಿಯು ಅವನ ಕಣ್ಣುಗಳನ್ನು ಮೆಲ್ಲನೆ ಒರಿಸಹತ್ತಿದಳು. ಮತ್ತು

ಕಾಲನ ಭಯವನ್ನು ಸಹ ನಿವಾರಣ ಮಾಡುವ ತನ್ನ ವರದಕೈಯನ್ನು ಆ ಮುನಿಯ
ತಲೆಯಮೇಲೆ ಇಟ್ಟು—"ಮಹಾ ಮುನಿಯೇ, ನನ್ನ ಕ್ಷೇತ್ರ ದರ್ಶನವು ನಿನಗೆ
ಆಗಿದ್ದರಿಂದ ನೀನು ಧನ್ಯನೂ, ಕೃತಕೃತ್ಯನೂ ಆಗಿರುವಿ. ನೀನು ಏಕಾಗ್ರಚಿತ್ತ
ದಿಂದ ಶೀಘ್ರವಾಗಿ ಸಕಲ ತೀರ್ಥವಿಧಿಗಳನ್ನು ತೀರಿಸು. ತೀರ್ಥವಿಧಿಗಳು
ಮುಗಿಯುವ ವರೆಗೆ ಮಾತ್ರ ನೀನು ಇಲ್ಲಿ ವಾಸಮಾಡು. ನನ್ನ ಕ್ಷೇತ್ರದಲ್ಲಿ
ಹೆಜ್ಜೆಹೆಜ್ಜೆಗೆ ಒಂದೊಂದು ತೀರ್ಥವಿರುವವು. ಒಂದು ಎಳ್ಳು ಕಾಳಷ್ಟು ಸ್ಥಳವೂ
ಲಿಂಗವಿಲ್ಲದೆ ಇರುವದಿಲ್ಲ; ಎಲ್ಲಿ ನೋಡಿದಲ್ಲಿ ಲಿಂಗಗಳಿರುವವು. ಆಯಾ ತೀರ್ಥ
ಗಳನ್ನೂ ಲಿಂಗಗಳನ್ನೂ ಅವಲೋಕಿಸು. ಆ ಬಳಿಕ ವಿಷ್ಣುಚಕ್ರದಲ್ಲಿ ನಿನಗೆ
ಮೃತ್ಯುವು ಬರುವದು. ಮನುಷ್ಯನ ಆಯುಷ್ಯದ ಅವಧಿಯಲ್ಲಿ ಅವೆಲ್ಲ ತೀರ್ಥಗ
ಳನ್ನು ನೋಡುವದು ಆಗುವದಿಲ್ಲ. ಇಲ್ಲಿಯ ತೀರ್ಥವಿಧಿಗಳನ್ನು ಮಾಡಲಿಕ್ಕೆ
ಆರು ತಿಂಗಳು ಬೇಕು. ವಿಪ್ರೇಂದ್ರನೇ, ಇನ್ನೊಂದು ಮಾತನ್ನು ಕೇಳು. ಮುಂದೆ
ಬರುವ ೧೦ನೇ ದ್ವಾಪರಯುಗದಲ್ಲಿ ಸತ್ಯವತೀ ಹೊಟ್ಟೆಯಲ್ಲಿ ವ್ಯಾಸನು ಹುಟ್ಟು
ವನು. ಆಗ ದಕ್ಷಿಣಕಾಶಿ, ಉತ್ತರಕಾಶಿ ಎಂದು ಎರಡು ಕಾಶೀ ಕ್ಷೇತ್ರಗಳಾಗು
ವವು. ಆಗ ನೀನು ಪುನಃ ಇಲ್ಲಿಗೆ ಬಂದು ವಿಧ್ಯುಕ್ತವಾಗಿ ವಾಸವನ್ನು ಮಾಡು.
ಇಲ್ಲಿಂದ ನೀನು ಸ್ವಲ್ಪ ದೂರಹೋಗಿ ಪಾರ್ವತೀಸುತನಾದ ಸ್ಕಂದನು ನಿನ್ನ
ಮುಂದೆ ನಿಂತಿರುವದನ್ನು ನೋಡು. ಅವನು ಎರಡೂ ಕಾಶಿಗಳ ಇತಿಹಾಸವನ್ನು
ತನಗೆ ಶಿವನು ಹೇಳಿದಂತೆಯೂ ನಿನಗೆ ಸಂತೋಷವಾಗುವಂತೆಯೂ ಹೇಳುವನು"
ಎಂದು ಹೇಳಿದಳು. ಲಕ್ಷ್ಮಿಯ ಹೇಳಿಕೆಯ ಪ್ರಕಾರ ಅಗಸ್ತ್ಯಮುನಿಯು ಏಕಾ
ಗ್ರಚಿತ್ತದಿಂದ ತ್ರಿಸ್ಥಲೀ ತೀರ್ಥದಲ್ಲಿ ತೀರ್ಥವಿಧಿಯನ್ನು ಮಾಡಿ ಮಹಾಲಕ್ಷ್ಮಿಯ
ಅನುಜ್ಞೆಯ ಮೇರೆಗೆ ಕೃಷ್ಣವೇಣಿಗೆ ಬಂದು, ತೀರ್ಥವಿಧಿಯನ್ನು ಮುಗಿಸಿಕೊಂಡು
ಎಲ್ಲತೀರ್ಥಗಳನ್ನು ನೋಡಿ, ಕೃಷ್ಣವೇಣಿಯಿಂದ ದಕ್ಷಿಣಕ್ಕೆ ಹೊರಟುಮಹಾಕೂಟಕ್ಕೆ
ಬಂದನು. ಅಲ್ಲಿ ವಿಷ್ಣು ಪುಷ್ಕರಣಿಯಲ್ಲಿ ಸ್ನಾನಮಾಡಿ ಮಹಾಕೂಟವನ್ನು ನೋಡಿ
ಲೋಕಕಂಟಕರಾದ ವಾತಾಪಿ, ಇಲ್ವಲರನ್ನು ಕೊಂದು ಭೂತೇಶ್ವರನಾದ ಮಹೇ
ಶ್ವರನನ್ನು ನಮಸ್ಕರಿಸಿ ತನ್ನ ಹೆಸರಿನಿಂದ ಉತ್ತಮವಾದ ತೀರ್ಥವನ್ನು ನಿರ್ಮಿಸಿ
ದನು. ಅಲ್ಲಿಂದ ಶ್ರೀರಂಗೇಶನನ್ನು ಪೂಜಿಸಿ ಲೋಪಾಮುದ್ರೆಯಿಂದ ಸಹಿತನಾಗಿ
ಆನಂದದಿಂದ ಶಂಕರೀ ದರ್ಶನಕ್ಕೆ ಹೋದನು. ಪರ್ವತ ಶಿಖರದಲ್ಲಿ ಸ್ವಲ್ಪ ಹೊತ್ತು
ನಿಂತು, ಸುತ್ತು ಮುತ್ತು ನೋಡಿ ಅಲ್ಲಿದ್ದ ತಿಲಾಖ್ಯವೆಂಬ ಮಹಾವನವನ್ನು ನೋಡಿ
ದನು. ತಿಲಕವನದ ಸುತ್ತುಮುತ್ತಲೂ ಅನೇಕ ತೀರ್ಥಗಳಿದ್ದದರಿಂದ ಅದು ಸುಶೋ

ಭಿತವೂ ಮನೋಹರವೂ ಆಗಿ ಕಾಣುತ್ತಿರುವದು; ಗಗನವನ್ನು ಮುಟ್ಟುವ ಗೋಪುರಗಳಿಂದ ಶಂಕರಿಯ ಗುಡಿಯು ವಿರಾಜಿಸುತ್ತಿರುವದು; ನಾನಾತರದ ತೋಟಗಳ ವನಶ್ರೀಯು ಅಲ್ಲಿ ವಿಲಾಸಮಾಡುತ್ತಿರುವ ಸರ್ವ ದೇವತೆಗಳ ಆನಂದವನ್ನು ಹೆಚ್ಚಿಸುತ್ತಿರುವದು; ದರ್ಶನ ಸ್ಪರ್ಶನಗಳಿಂದ ಆ ವನವು ಮನುಜರ ಸರ್ವಪಾಪಗಳನ್ನು ನಾಶಮಾಡುತ್ತಿರುವುದು. ಇಂಥ ರಮಣೀಯವಾದ ತಿಲಕವನವನ್ನು ನೋಡಿ ಅಗಸ್ತ್ಯ ಮುನಿಯು ಆನಂದದಿಂದ ಚಪ್ಪಾಳೆಯನ್ನು ಬಾರಿಸಿ, ರೋಮಾಂಚಗಳು ಏಳುವ ಹಾಗೆ ಆನಂದದಿಂದ ಹರನನ್ನು ಸ್ಮರಿಸುತ್ತ ಕುಣಿಯ ಹತ್ತಿದನು. "ಹೇ ದೇವಿಯೇ, ನೀನು ಚಿದಾನಂದಳೂ ಸ್ವಾತ್ಮಜ್ಞಾನಯುಕ್ತಳೂ ಇರುವಿ. ನಿನಗೆ ಜಯಜಯಕಾರವಿರಲಿ. ಸದಾತ್ಮಬೋಧ ಸಂತುಷ್ಟಳೇ, ಶುಭಕರಿಯೇ ನಿನ್ನ ಮುಖವು ಪ್ರಸನ್ನವಾಗಿದ್ದು ನೀನು ಭಕ್ತರ ದುಃಖವನ್ನು ನಾಶಮಾಡುತ್ತಿರುವಿ. ನಿನಗೆ ಜಯವಿರಲಿ" ಎಂದು ಜಯಜಯಕಾರಧ್ವನಿಯಿಂದಲೂ, ಮಹಾ ಸ್ತೋತ್ರಗಳಿಂದಲೂ ದೇವಿಯ ನಾಮಗರ್ಜನ ಮಾಡುತ್ತ ಹೊರಟನು.

## ತಿಲಕವನದ ವರ್ಣನೆಯೂ ಅದರ ಮಹಿಮೆಯೂ.

ಹೋಗಹೋಗುತ್ತ "ಮುನಿಯು ಜಗತ್ತಿಗೆ ಒಬ್ಬಳೇ ತಾಯಿಯಾದ ಶಂಕರೀ ದೇವಿಯನ್ನು ನಾನು ಇಂದಿನ ದಿನ ನೋಡಿದೆನು. ಮಯೂರ ಗುಂಪುಗಳಿಂದ ಭರದ್ವಾಜಪಕ್ಷಿಯು ಸಹ ಆಕೆಗೆ ಪ್ರದಕ್ಷಿಣೆಯನ್ನು ಹಾಕುತ್ತಿರುವದು. ನನ್ನ ಜನ್ಮವು ಈ ದಿನ ಧನ್ಯವಾಯಿತು. ಯಾಕಂದರೆ ನಾನು ತಿಲಕವನವನ್ನು ನೋಡಿದೆನು. ನಾನು ನರಿಯ ಮೋರೆಯನ್ನು ನೋಡಿದ್ದರಿಂದಲೇ ಈ ವನವು ನನ್ನ ದೃಷ್ಟಿಗೆ ಬಿದ್ದಿತೋ ಎಂಬದು ತಿಳಿಯದು. ಈ ಪವಿತ್ರವಾದ ತಿಲಕಕ್ಷೇತ್ರ ದರ್ಶನದಿಂದ ಚಂದ್ರ, ಇಂದ್ರ, ರುದ್ರ, ಮೊದಲಾದವರು ಸಿದ್ಧಿಯನ್ನು ಹೊಂದಿರುವರು. ತಿಲಕವನಕ್ಕೆ ಹೋದಂಥವನ ಪಾದಗಳೂ ಶರೀರವೂ ಪವಿತ್ರತಮವೇಸರಿ. ಆ ವನದಲ್ಲಿಯ ವೃಕ್ಷಗಳೆಲ್ಲ ದೇವತಾಸ್ವರೂಪವಾಗಿ ತೋರುವವು. ಶಂಕರೀದೇವಿಯೇ ಧನ್ಯಳು. ಆ ವನದಲ್ಲಿಯ ನೀರು ಶಿವಸ್ವರೂಪವಾಗಿದ್ದು, ಮುನೀಶ್ವರರು ಬಾದಾವಿಪಟ್ಟಣದ ವನ(ಆ ತಿಲಕವನದಲ್ಲಿ)ದಲ್ಲಿಯ ಉಸುಕಿನ ಕಣಗಳೆಂದು ಭಾಸವಾಗುತ್ತದೆ." ಎಂದು ನುಡಿದು, ಬಾದಾವಿಬನಶಂಕರೀ ದೇವಿಯನ್ನು ಆ ಮುನಿಯು ದೂರಿನಿಂದಲೇ ನೋಡಿ ಆನಂದಭರಿತನಾಗಿ ಮಹಾದ್ವಾರದ ಸಮೀಪಕ್ಕೆ ಹೋದನು. ಆಗಂತೂ ಅವನ ದೇಹದಮೇಲೆ ಆನಂದದ ರೋಮಾಂಚನಗಳೆದ್ದವು. ಆಗ ಆ

ಮಹಾಮುನಿಯು ಲೋಪಾಮುದ್ರೆಯನ್ನು ಕುರಿತು, "ಕಲ್ಯಾಣಿಯೇ, ಅತ್ಯಾಶ್ಚ ಯರ್ಕರವೂ, ಸುಂದರವಾದ ಪ್ರಾಸಾದಗಳಿಂದ ಶೋಭಿತವೂ, ಯಜ್ಞಸ್ತಂಭ ವಿಭೂಷಿತವೂ ಆದ ಈ ತಿಲಕವನವನ್ನು ನೋಡು. ಇದರ ಸುತ್ತುಮುತ್ತು ಉನ್ನತ ವಾದ ದೇವಾಲಯಗಳು ಇರುವವು; ಶ್ರೀ ಸಿದ್ಧರು, ಮಹಾಯಜ್ಞಗಳನ್ನು ಮಾಡಿದ ಗೃಹಸ್ಥರು, ವೇದಾಧ್ಯಯನವನ್ನು ಮಾಡುವ ಅನೇಕ ಬ್ರಾಹ್ಮಣರು, ನಿರ್ಮಲಮನ ಸ್ಸುಳ್ಳ ಸನ್ಯಾಸಿಗಳು ಇರುವರು. ಇತ್ತ ನೋಡು, ಇಲ್ಲಿಯೇ ವಾಸಮಾಡಿದ ಋಷಿಜನರ ಗುಂಪು ಕಾಣಿಸುವದು. ಇತ್ತನೋಡು, ಯಾತ್ರೆಗೆ ಬಂದ ಮುನಿ ಗಳು ಇರುವರು; ಅವರಲ್ಲಿ ಕೆಲವರು ತ್ರಿದಂಡಗಳಿಂದ ಶೋಭಿತರೂ, ಪರಮಾತ್ಮನ ಚಿಂತನದಲ್ಲಿ ಮಗ್ನರೂ ಆಗಿರುವರು. ಕೆಲವರು ಸೂರ್ಯನಲ್ಲಿಯೇ ತಮ್ಮ ದೃಷ್ಟಿ ಯನ್ನಿಟ್ಟು ತಪಸ್ಸು ಮಾಡಿ ಅಪಾರವೈಭವದಿಂದ ಯುಕ್ತರಾಗಿರುವರು. ಕೆಲವರು ಪಂಚಾಗ್ನಿನಿಷ್ಠರಾಗಿಯೂ, ಕೆಲವರು ಧೂಮ್ರಪ್ರಾಶನ ಮಾಡಿ, ಹೋಮತರ್ಪಣ ಗಳಲ್ಲಿ ಆಸಕ್ತರಾಗಿಯೂ ಇರುವರು; ಇತ್ತನೋಡು, ಕೆಲವರು ಮೌನವನ್ನು ಧಾರಣಮಾಡಿ, ಬ್ರಹ್ಮಚಿಂತನದಲ್ಲಿ ಕುಳಿತಿರುವರು; ಇತ್ತ ಕೆಲವರು ತಾಳಗಳ ಗತ್ತಿನಲ್ಲಿ ಶ್ರೀ ಶಿವನಾಮ ಘೋಷವನ್ನು ಮಾಡುತ್ತಿರುವರು; ಕೆಲವರು ಶಂಕರಿಯ ನಾಮಗರ್ಜನವನ್ನು ಮಾಡುತ್ತ ನಿಂತಿರುವರು; ಇತ್ತ ಕೆಲವರು ವೇದಾಂತ-ಆಗಮ ಇವುಗಳಲ್ಲಿಯ ತತ್ವಗಳನ್ನು ವಿಚಾರ ಮಾಡುತ್ತ ಕುಳಿತಿರುವರು. ಈ ಪ್ರಕಾರ ಸಶೋಭಿತವಾದ ಉಪವನವನ್ನು ನೋಡಿ ಅಗಸ್ತ್ಯರು ತಾವೇ ಧನ್ಯ ರೆಂದು ತಿಳಿಯಹತ್ತಿದರು.

ಬಳಿಕ ಅವರು ಆ ಕ್ಷೇತ್ರದಲ್ಲಿಯ ಚಿಕ್ಕಗಣೇಶನನ್ನೂ, ದ್ವಾರಪಾಲಕರನ್ನೂ, ಅನ್ಯದೇವತೆಗಳನ್ನೂ ನಮಸ್ಕರಿಸಿ, ಶ್ರೀ ಶಂಕರೀದೇವಿಯ ಗುಡಿಗೆ ಬಂದರು. ಆ ಬಳಿಕ ಶ್ರೀ ದೇವಿಗೆ ಸಾಷ್ಟಾಂಗವಾಗಿ ವಂದಿಸಿ, ಪ್ರದಕ್ಷಿಣೆಯನ್ನು ಹಾಕಿ ರಂಗ ಮಂಟಪಕ್ಕೆ ಬಂದರು. ಮುಂದೆ ಆ ದಂಪತಿಗಳು ಗರ್ಭಗುಡಿಯನ್ನು ಪ್ರವೇಶಿಸಿ, ಶಂಕರಿಯನ್ನು ನೋಡಿ, "ಹೇ ಚಿದಾನಂದ ಲಹರಿಯೇ, ಬನಶಂಕರಿಯೇ, ನೀನು ಅನೇಕ ದೈತ್ಯರನ್ನು ಸಂಹರಿಸುತ್ತಿರುವವಳೂ, ಸಂಸಾರಸಾರವನ್ನು ದಾಟಿಸುವದರಲ್ಲಿ ದಕ್ಷಳೂ ಇರುತ್ತೀ. ನಿನಗೆ ಜಯವಿರಲಿ" ಎಂದು ನಮಸ್ಕರಿಸಿದ ಬಳಿಕ ಅಗಸ್ತ್ಯರು ಮತ್ತೆ ಆ ದೇವಿಯ ಸ್ತೋತ್ರವನ್ನು ಮಾಡತೊಡಗಿದರು. "ಹೇ ಮಹಾಲಕ್ಷ್ಮಿಯೇ, ಹೇ ಮಹಾಕಾಳಿಯೇ, ಹೇ ಲಲಿತಾಂಬೆಯೇ, ಹೇ ಸರಸ್ವತಿಯೇ, ನೀನು ಅಕಾರ ದಿಂದ ಕ್ಷಕಾರದ ವರೆಗೆ ತುಂಬಿಕೊಂಡಿರುವಿ. ನೀನು ನಾದಬಿಂದು ಸ್ವರೂಪಿಣಿಯು.

ನೀನು ನಿರಾಕಾರಳಿದ್ದರೂ (ನಿನಗೆ ರೂಪವಿಲ್ಲದಿದ್ದರೂ) ಬಹುರೂಪವನ್ನು ಧರಿಸುತ್ತೀ; ನೀನು ಪೃಥಿವ್ಯಾದಿ ಪಂಚತತ್ವ ಸ್ವರೂಪಿಯಾಗಿರುತ್ತೀ. ನೀನೇ 'ತತ್' ಪದವು 'ತ್ವಂ' ಪದವು ನೀನೇ. ನೀನೇ 'ಅಸಿ' ರೂಪಳಿರುತ್ತೀ. ನೀನು ನಿರ್ಗುಣಳೂ, ಕ್ರಿಯಾರಹಿತಳೂ, ಶಾಂತಳೂ ಇದ್ದು, ನಿನ್ನ ಭಕ್ತರಿಗೆ ಸ್ವಾತ್ಮಾನುಬೋಧವನ್ನು ಉಪದೇಶಿಸುವವಳಾಗಿರುವಿ. ಹೇ ಶಂಕರಿಯೇ, ನೀನು ಶಾಕಂಭರಿಯು; ನೀನೇ ಗಾಯತ್ರಿಯು; ದುರ್ಗದೈತ್ಯನನ್ನು ವಿನಾಶಮಾಡಿದವಳೂ ನೀನೇ. ಶಂಕರಿ, ಸರ್ವೇಶ್ವರೀ ನಿನಗೆ ಜಯವಿರಲಿ, ನೀನು ಭಕ್ತರಿಗೆ ವರವ ಕೊಡುವದಕ್ಕೆ ಸಿದ್ಧಳೂ, ಸೌಭಾಗ್ಯಪ್ರದಾಯಕಳೂ ಇರುವಿ. ಹೇ ಲಲಿತಾಂಬೆಯೇ, ಸುಖಪ್ರದವಾದ ನಿನಗೆ ನಾನು ನಮಸ್ಕಾರ ಮಾಡುತ್ತೇನೆ. ನಿನಗೆ ಜಯವಿರಲಿ."

ಹೀಗೆ ಶಂಕರೀದೇವಿಯನ್ನು ಸ್ತೋತ್ರ ಮಾಡಿದಕೂಡಲೆ ಆ ಜಗದಂಬೆಯು ಕಾಶೀವಿರಹದಿಂದ ಆ ಮುನಿಯಲ್ಲಿ ಉಂಟಾದ ತಾಪವನ್ನು ಶಾಂತಮಾಡಿದಳು. ದೇವದೇವಿಯೂ, ಲೋಕಕ್ಕೆ ಕಲ್ಯಾಣಪ್ರದಳೂ ಆದ ಶ್ರೀ ಶಂಕರಿಯು ಧೂಪ ಸೌಗಂಧವಾಸಿತವಾದ ಗುಡಿಯನ್ನು ನೋಡಿ ಅಗಸ್ತ್ಯನು ಪುನಃ ಆಕೆಗೆ ಪ್ರದಕ್ಷಿಣ ನಮಸ್ಕಾರಗಳನ್ನು ಹಾಕಿ ಪದ್ಮತೀರ್ಥವನ್ನು ನೋಡಿಕೊಂಡು ಪುನಃ ಶಂಕರಿಗೆ ನಮಸ್ಕಾರ ಮಾಡಿ ಹರಿದ್ರಾತೀರ್ಥಕ್ಕೆ ಬಂದನು. ಈ ತೀರ್ಥವು ನಾನಾತರದ ಕಮಲಗಳು, ಕಲ್ಹಾರ, ಪುಷ್ಪ ಇವುಗಳಿಂದಲೂ ಚಂಚಲವಾದ ತೆರೆಗಳಿಂದಲೂ ಶೋಭಿತವಾಗಿತ್ತು; ಆ ಸರೋವರದಲ್ಲಿ ಮೀನಗಳು ಸಂಚರಿಸುತ್ತಿದ್ದದರಿಂದಲೂ ನೀರೊಳಗಿನ ಕಮಲಗಳು ಸರಿದಾಡುವದರಿಂದಲೂ ಅದಕ್ಕೆ ಒಂದು ಶೋಭೆಯು ಬಂದಿತ್ತು; ಆ ಸರೋವರವು ಅನೇಕಜಾತಿಯ ಪಕ್ಷಿಗಳು, ಹಂಸ, ಕಾರಂಡವ, ಬಕ, ಚಕ್ರವಾಕ, ಸಾರಸ, ನೀರು ನಾಯಿ ಮೊದಲಾದ ಜಲಸಂಚಾರಿ ಪಕ್ಷಿಗಳಿಂದ ಶೋಭಾಯಮಾನವಾಗಿ ಕಾಣುತ್ತಿತ್ತು; ಮಧುಮತ್ತವಾದ ಭ್ರಮರಗಳ ಗುಂಪು ಅದರಲ್ಲಿಯ (ಸರೋವರದಲ್ಲಿಯ) ಪದ್ಮಗಳ ಮೇಲೆ ಓಡಾಡುವದರಿಂದ ಅವಕ್ಕೆ ಒಳ್ಳೇ ಸೌಂದರ್ಯವು ಬಂದಿತ್ತು; ಬ್ರಹ್ಮಸಂಜ್ಞಕವಾದ ಸುಗಂಧಕಮಲಗಳಿಂದ ಆ ತೀರ್ಥವು ಮನೋರಮ್ಯವಾಗಿತ್ತು; ತೀವ್ರಜ, ಕದಂಬ ಬಕುಲ ಗಿಡಗಳಿಂದ ಅದು ಭೂಷಿತವಾಗಿತ್ತು; ಆ ತೀರ್ಥದ ದಂಡೆಯಲ್ಲಿ ಅನೇಕ ತೋಟಗಳೂ, ಪುಷ್ಪವಾಟಿಕೆಗಳೂ (ಹೂವಿನ ತೋಟಗಳೂ) ತುಲಸಿಯ ವನಗಳೂ ಇದ್ದವು. ಆ ಸರೋವರದಲ್ಲಿ ಮೊಸಳೆ, ಆವೆ ಮೊದಲಾದ ಜಲಚರ ಪ್ರಾಣಿಗಳು, ನೀರಿನಿಂದ ಹುಟ್ಟುವ ಅನ್ಯ ಜಂತುಗಳು ಇವುಗಳು ವಾಸಮಾಡಿಕೊಂಡಿದ್ದವು;

ಅದು ಸಮುದ್ರದ ಹಾಗೆ ಇತ್ತಂದರೂ ಅಡ್ಡಿಯಿಲ್ಲ. ತನ್ನ ಎದುರಿಗೆ ಇರುವ ಇಂಥ ಮನೋರಮ್ಯವಾದ ಮಹಾತೀರ್ಥವನ್ನು ನೋಡಿ ಪತಿವ್ರತೆಯಾದ ಲೋಪಾಮುದ್ರೆಯು ಮಹಾಮುನಿಯಾದ ಅಗಸ್ತ್ಯರನ್ನು ಕುರಿತು, "ಮಹಾಮುನಿಯೇ, ನಮ್ಮ ಮುಂದೆ ಶೋಭಿಸುವ ಈ ತೀರ್ಥದ ಹೆಸರೇನು? ಇದರ ಪ್ರತಿಭಾಶಾಲಿಗಳಾದ ಆಖ್ಯಾನಗಳನ್ನು ನನಗೆ ಸವಿಸ್ತಾರವಾಗಿ ಹೇಳು; ಇಂಥ ಮನೋಹರವಾದ ನೀರಿನಿಂದ ಸಂಚಿತವಾದ ತೀರ್ಥವನ್ನು ನಾನು ಎಂದೂ ನೋಡಿರುವದಿಲ್ಲ" ಎಂದು ಮಾತಾಡಿದಳು.

## ಹರಿದ್ರಾತೀರ್ಥದ ಮಹಿಮೆ.

ಅಗಸ್ತ್ಯರು ಆ ತೀರ್ಥದ ಉತ್ಪತ್ತಿಕ್ರಮವನ್ನು ಹೇಳಲಾರಂಭಿಸಿದರು. "ಮೊದಲು ಈ ತೀರ್ಥಕ್ಕೆ ಶುದ್ಧತೀರ್ಥವೆಂದೆನ್ನುತ್ತಿದ್ದರು. ಆದರೆ ಸರ್ವಲೋಕಹಿತಾರ್ಥವಾಗಿ ಮಹಾದೇವಿಯು ಆ ವೇಳೆ ಅದರಲ್ಲಿಯೇ ಒಂದು ತೀರ್ಥವನ್ನು ನಿರ್ಮಾಣಮಾಡಿದಳು. ಅದೇ ಹರಿದ್ರಾತೀರ್ಥವಾಯಿತು. ಅಲ್ಲಿ ಸ್ನಾನದಾನಗಳನ್ನು ಮಾಡಿದ ಪ್ರಾಣಿಗಳು ಪವಿತ್ರವಾಗುವವಲ್ಲದೆ ಅವುಗಳಿಗೆ ಪುಣ್ಯವೂ ದೊರಕುವದು." ಎಂದು ಹೇಳಿದನು. ಮುನಿಯ ಈ ಮಾತನ್ನು ಕೇಳಿ ಪುನಃ ಆ ಸತಿಯು ಆ ಮಹಾಮುನಿಯನ್ನು ಕುರಿತು, "ಮುನಿಶ್ರೇಷ್ಠನೇ, ಈ ತೀರ್ಥದ ವಿಸ್ತೃತವಾದ ಇತಿಹಾಸವನ್ನು ಹೇಳು. ದೇವಿಯು ಇದನ್ನು ಯಾತಕ್ಕೋಸ್ಕರ ನಿರ್ಮಿಸಿದಳು? ಇದರಿಂದ ಜನರಿಗೆ ಯಾವ ಹಿತವು ಆಯಿತು? ಇದಕ್ಕೆ ಈ ಎರಡನೆಯ ಹೆಸರು ಬಂದಕಾರಣವೇನು? ಇದನ್ನೆಲ್ಲ ನನ್ನಗೋಸ್ಕರ ಹೇಳು. ಈ ತೀರ್ಥದ ಮಾಹಾತ್ಮ್ಯವನ್ನೆಲ್ಲ ಹೇಳು" ಎಂದು ಕೇಳಿದಳು. ತನ್ನ ಪತ್ನಿಯು ಹೀಗೆ ಪ್ರಾರ್ಥನೆ ಮಾಡಿ ಕೇಳಿದ ಬಳಿಕ ಅಗಸ್ತ್ಯಮಹಾಮುನಿಯು ಹರಿದ್ರಾತೀರ್ಥದ ಶ್ರೇಷ್ಠವಾದ ಮಾಹಾತ್ಮ್ಯವನ್ನು ವಿವರಿಸಲುಪಕ್ರಮಿಸಿದನು.:—'ಹೇ ಸತಿಯೇ, ಕೇಳು. ಈ ತಿಲಕ ಕ್ಷೇತ್ರದಲ್ಲಿ ಅನೇಕ ತೀರ್ಥಗಳು ಇರುವವು. ಅವೆಲ್ಲ ಶ್ರೀ ಶಂಕರೀಮಹಿಮೆಯಿಂದ ಪ್ರಖ್ಯಾತಿಗೆ ಬಂದಿರುತ್ತವೆ. ಶಂಕರಿಯ ಭಕ್ತರು ಯಾವ ಸ್ಥಳದಲ್ಲಿ ಕುಳಿತು ಶ್ರೀ ದೇವಿಗೋಸ್ಕರ ತಪಸ್ಸು ಮಾಡಿದರೋ ಮತ್ತು ಎಲ್ಲಿ ಆ ಮಹಾದೇವಿಯು ಆ ಮಹಾತ್ಮರ ತಪಸ್ಸಿಗೆ ಮೆಚ್ಚಿ ಅವರಿಗೆ ಪ್ರಸನ್ನಳಾಗಿ ತನ್ನ ಭಕ್ತರ ಹಿತಕ್ಕಾಗಿ ಲೀಲೆಗಳನ್ನು ಮಾಡಿದಳೋ ಆ ಸ್ಥಾನಗಳು ತೀರ್ಥಗಳೆಂತಲೂ, ಕ್ಷೇತ್ರಗಳೆಂತಲೂ ಹೆಸರು ಪಡೆದಿರುವವು. ಅಂದಬಳಿಕ ತೀರ್ಥಗಳ ಹಿಮೆ

ಯೆಂದರೆ ಮಹಾದೇವಿಯ ಮಾಹಾತ್ಮ್ಯೆಯೇ ಎಂದು ತಿಳಿಯಬೇಕು. ಶಂಕರೀ ದೇವಿಯು ಈ ತಿಲಕವನದಲ್ಲಿ ಅನೇಕ ಲೀಲೆಗಳನ್ನು ಮಾಡಿ ಅನೇಕ ಜನರನ್ನು ಉದ್ಧರಿಸಿದಳು. ಅದರಿಂದ ಇಲ್ಲಿ ಅನೇಕ ತೀರ್ಥಗಳಾಗಿವೆ. ಈಗ ಶ್ರೀಶಂಕರಿಯು ಹರಿದ್ರಾ ತೀರ್ಥದಲ್ಲಿ ಯಾವ ಮಹಿಮೆಯನ್ನು ತೋರಿಸಿರುವಳೆಂಬದನ್ನು ಹೇಳುವೆನು; ಮತ್ತು ಆದಿಮಾಯೆಯಾದ ಶ್ರೀ ಶಂಕರಿಗೆ ಶಾಕಂಭರಿಯೆಂಬ ನಾಮವು ಹ್ಯಾಗೆ ಬಂದಿತೆಂಬದನ್ನು ನಾನು ಹೇಳುವೆನು.

## ಬನಶಂಕರಿಗೆ ಶಾಕಂಭರಿ ಎಂಬ ನಾಮವು ಬಂದದ್ದು.

ಪೂರ್ವದಲ್ಲಿ ಒಂದಾನೊಂದು ಕಾಲದಲ್ಲಿ ದೈವಯೋಗದಿಂದ ಜಗತ್ತಿನಲ್ಲಿ ೧೦೦ ವರ್ಷ ಮಳೆಯೇ ಬೀಳಲಿಲ್ಲ. ಅದರಿಂದ ದುರ್ಭಿಕ್ಷವು ಉಂಟಾಗಿ ಎಲ್ಲ ಪ್ರಜೆಗಳಿಗೂ ಮಹತ್ತರವಾದ ಪೀಡೆಯು ಸಂಭವಿಸಿತು. ೧೦೦ ವರ್ಷಗಳ ವರೆಗೆ ಇದೇಪ್ರಕಾರ ದುಃಸ್ಥಿತಿಯಾಗಲು ಹವ್ಯಕವ್ಯಾದಿ ಕರ್ಮಗಳು ಲಯವನ್ನು ಹೊಂದಿದವು. ಆಗ ಸಕಲ ದೇವತೆಗಳು, ಪ್ರಜೆಗಳು ಬ್ರಹ್ಮದೇವನಿಗೆ ಶರಣು ಹೋದರು. ಮಹೇಶ್ವರನು ಬ್ರಹ್ಮಾದಿಗಳನ್ನು ಕೂಡಿಕೊಂಡು ತಿಲಕವನಕ್ಕೆ ಬಂದನು. ಯಥಾವಿಧಿಯಾಗಿ ಮಹಾದೇವಿಯಾದ ಶಂಕರಿಯನ್ನು ಪೂಜಿಸಿ, ಆಕೆಯನ್ನು ಸ್ತುತಿಸಿ ನಮಿಸಿದನು. ಬಳಿಕ ರುದ್ರಾದಿದೇವತೆಗಳು ಆ ದೇವಿಗೆ ವಿಜ್ಞಾಪನೆ ಮಾಡಿಕೊಂಡದ್ದೇನಂದರೆ:—"ಹೇ ದೇವಿಯೇ, ದುರ್ಭಿಕ್ಷದಿಂದ ಪೀಡಿತರಾದ ಈ ಸರ್ವ ಪ್ರಜೆಗಳನ್ನು ಸಂರಕ್ಷಿಸು. ಯಾಕಂದರೆ ನೀನು ಸರ್ವ ಪ್ರಾಣಿಗಳ ಜನನಿಯಾಗಿದ್ದು ಅವರಿಗೆ ಸರ್ವ ವಸ್ತುಗಳನ್ನು ಕೊಡುವದಕ್ಕೆ ಸಮರ್ಥಳಿರುವಿ. ಪ್ರಜೆಗಳೆಲ್ಲರೂ ಈಗ ನಾಶಹೊಂದುವ ಪ್ರಸಂಗವು ಒದಗಿದೆ. ಲೋಕದಲ್ಲಿ ಯಜ್ಞ-ಯಾಗಾದಿಗಳು ನಡೆಯದ ಹಾಗಾಗಿವೆ. ಕ್ಷುಧೆಯಿಂದ ವ್ಯಾಕುಲರಾದ ನಾವು ಶರಣ್ಯಳೂ, ಅನ್ನದಾಯಿನಿಯೂ ಆದ ನಿನಗೆ ಶರಣುಬಂದಿರುವೆವು. ನೀನೇ ಹವ್ಯ-ಕವ್ಯ-ಯಜ್ಞಕರ್ಮಗಳ ರೂಪವಿದ್ದು, ಅವುಗಳನ್ನು ರಕ್ಷಿಸುವವಳು ನೀನೇ. ನಿನಗೆ ಪರಮೇಶ್ವರಿಯೆಂದೆನ್ನುವರು. ಆದ್ದರಿಂದ ನೀನು ಎಲ್ಲ ಪ್ರಾಣಿಗಳಿಗೆ ಅನ್ನ, ನೀರುಗಳನ್ನು ಕೊಟ್ಟು ರಕ್ಷಿಸು."

ಈ ಪ್ರಕಾರ ದೇವತೆಗಳು ಸ್ತುತಿಯನ್ನು ಮಾಡಿದ ಕೂಡಲೆ ದಯಾನ್ವಿತೆಯಾದ ಶಂಕರೀದೇವಿಯು ಪಾತಾಲದಿಂದ ನೀರನ್ನು ಬರಮಾಡಿದಳು. ಈ ತೀರ್ಥವು ಸರ್ವ ಲೋಕಗಳಿಗೆ ಪಾವನವೂ ದೇವರ್ಷಿಗಳಿಗೆ ಜೀವನವೂ ಆಯಿತು. ಈ ತೀರ್ಥ

ದಿಂದ ಕಾಲುವೆಗಳನ್ನು ನಿರ್ಮಿಸಿ ನಾನಾ ವನಗಳನ್ನು ಸಿದ್ಧಮಾಡಿದಳು. ಪ್ರಮೋದ, ತುಳಸೀಕೂಟ ಮೊದಲಾದ ವನಗಳೂ ಅನೇಕ ಉಪವನಗಳೂ ನಿರ್ಮಾಣವಾದವು; ಹಲಸು, ಮಾವು, ಬೆಳವಲ, ಎಲೆಬಳ್ಳಿ, ದ್ರಾಕ್ಷಿ, ಖರ್ಜೂರ, ಕಿತ್ತಳೆ, ಸಕ್ಕರಿಗಂಚಿ, ಲಿಂಬಿ, ತೆಂಗು, ಬಾಳೆ, ನೇರಲ ಮೊದಲಾದ ಫಲಗಳಿಂದಲೂ ನಾನಾತರದ ಪಲ್ಲೆ-ಕಾಯಿಗಳಿಂದಲೂ ಆ ವನೋಪವನಗಳು ಶೋಭಿತವಾಗಿದ್ದವು. ಆ ಶಂಕರೀದೇವಿಯು ಎಲ್ಲ ದೇವತೆಗಳಿಗೆ ನಾನಾಜಾತಿಯ ಕಾಯಿಪಲ್ಲೆಗಳನ್ನು ಕ್ಷುಧಾಶಾಂತಿಗಾಗಿ ಕೊಟ್ಟು ಅವರನ್ನು ರಕ್ಷಿಸಿದಳು.

ಬಳಿಕ ನೀರಡಿಕೆಯಿಂದ ವ್ಯಾಕುಲರಾದ ದೈತ್ಯರು ಆ ಉತ್ತಮವಾದ ತೀರ್ಥವನ್ನು ನೋಡಿ ತಮ್ಮ ಗಣಗಳೊಡನೆ ಅಲ್ಲಿಯ ನೀರನ್ನು ಕುಡಿಯುವದಕ್ಕೆ ಬಂದರು; ರಾಕ್ಷಸರು ಅಮೃತತುಲ್ಯವಾದ ಜಲವನ್ನೂ ವನಗಳಲ್ಲಿಯ ಫಲಗಳನ್ನೂ, ಪಲ್ಲೆ-ಕಾಯಿಗಳನ್ನೂ, ಎಲೆ-ಕಂದಮೂಲಗಳನ್ನೂ ತಿಂದುಬಿಟ್ಟರು. ಈ ಸುದ್ದಿಯನ್ನು ಕೇಳಿ ಮಹಾದೇವಿಯು ಅವರ (ದೈತ್ಯರ) ಸಂಗಡ ಯುದ್ಧಮಾಡುವದಕ್ಕೋಸ್ಕರ ದೇವತೆಗಳನ್ನು ಕಳಿಸಿದಳು. ಆಗ ಯುದ್ಧದಲ್ಲಿ ದೈತ್ಯರೇ ಜಯಶಾಲಿಗಳಾದರು. ಬಳಿಕ ಅಷ್ಟಭೈರವರು, ಸಪ್ತಮಾತೃಗಳು, ನವಕೋಟಿ ಸಖಿಯರು, ಪ್ರಮಥಗಣಗಳು ಇವರೇ ಮೊದಲಾದವರನ್ನು ಸಂಗಡ ಕರಕೊಂಡು ಚಿದಾನಂದಸ್ವರೂಪಿಣಿಯಾದ ಶ್ರೀ ಶಂಕರೀದೇವಿಯು ತಾನೇ ಯುದ್ಧಕ್ಕೆ ಹೊರಟಳು. ಮಹಾದೇವಿಯ ಯುದ್ಧಾವೇಶವನ್ನು ನೋಡಿ ರಾಕ್ಷಸರು ದಿಕ್ಕುಪಾಲಾಗಿ ಓಡಿಹೋದರು. ಆಗ ದೇವಿಯು ತೀರ್ಥದ ನೀರಿನ ಸಂರಕ್ಷಣಾರ್ಥಕ್ಕಾಗಿಯೂ, ಈ ತೀರ್ಥದ ಎಂಟು ದಿಕ್ಕುಗಳಲ್ಲಿಯೂ ಶೂಲಪಾಣಿಗಳಾದ ಅಷ್ಟಭೈರವರನ್ನು ನಿಯಮಿಸಿದಳು; ಹಾಗು ಕ್ಷೇತ್ರಸಂರಕ್ಷಣಕ್ಕಾಗಿ ಎಲ್ಲ ಕಡೆಯಲ್ಲಿ ದ್ವಾರಪಾಲಕರನ್ನು ಸ್ಥಾಪಿಸಿದಳು. ಮಹಾದೇವಿಯು ಪುನಃ ತನ್ನ ಅಡಿಗೆಯ ಮನೆಗೆ ಹೋಗಿ ದೇವತೆಗಳಿಗೆ ಯಥೇಚ್ಛವಾಗಿ ಪಲ್ಲೆಗಳನ್ನು ತಿನ್ನುವದಕ್ಕೆ ಕೊಟ್ಟು ಅವರನ್ನು ಸಂತೈಸಿದಳು. ಇಂದ್ರಾದಿ ದೇವತೆಗಳು ಈ ಶಾಕಾಹಾರದಿಂದ ಸಂತುಷ್ಟರಾಗಿ ತ್ರಿದಂಡಿ ಮುನಿಗಳಿಂದ ಕೂಡಿಕೊಂಡು ದೇವಿಯ ಸಂಸ್ಥಾಪನೆಯನ್ನು ಮಾಡಿದರು. ದೇವತೆಗಳು ಶಂಕರೀದೇವಿಗೆ ಶಾಕಂಭರೀ ಎಂಬ ಹೆಸರನ್ನಿಟ್ಟರು. ಸುಮುಹೂರ್ತದಲ್ಲಿ, ಸ್ಥಿರಲಗ್ನದಲ್ಲಿ, ಹರಿದ್ರಾ ತೀರ್ಥವು ಪೂರ್ವಭಾಗದಲ್ಲಿ ಒಪ್ಪುತ್ತಿರಲು, ಉತ್ತರದಿಕ್ಕಿನಲ್ಲಿ ತೈಲತೀರ್ಥವು ಮೆರೆಯುತ್ತಿರಲು, ಪದ್ಮತೀರ್ಥವು ದಕ್ಷಿಣದಲ್ಲಿರುತ್ತಿರಲು, ಮಧ್ಯದಲ್ಲಿ ಮಹಾಮಾಯೆಯಾದ ಶಾಕಂಭರೀ ದೇವಿಯನ್ನು ವೇದ ತಾಂತ್ರಿಕ ಮಂತ್ರಗಳಿಂದ

ಸ್ಥಾಪಿಸಿದರು. ವೇದತಾಂತ್ರಿಕ ಮಂತ್ರಗಳಿಂದ ಆ ದೇವಿಯು ಈಗ ಶಾಕಂಭರಿ ಯೆಂದು ಕರೆಯಲ್ಪಡುತ್ತಾಳೆ. ಕೇವಲ ಮಾಂತ್ರಿಕರು, ಲಲಿತಾಂಬಿಕೆಯೆಂದೂ ಕರೆಯುವರು. ದೇವಿಯ ಆ ತೀರ್ಥದಿಂದ ಸಂತುಷ್ಟರಾದ ದೇವತೆಗಳು— "ಹರಿದ್ರಾತೀರ್ಥದಲ್ಲಿ ಸ್ನಾನಮಾಡಿ ಪರಮೇಶ್ವರಿಯ ದರ್ಶನವನ್ನು ಪಡೆಯುವವರು, ದುಃಖದಾರಿದ್ರ್ಯಗಳಿಂದ ಮುಕ್ತರಾಗುವರಲ್ಲದೆ, ಪರಮಶ್ರೇಷ್ಠವಾದ ಗತಿಯನ್ನೂ ಪಡೆಯುವರು. ಪೌಷ (ಪುಷ್ಯ) ಮಾಸ ಶುಕ್ಲಪಕ್ಷದಲ್ಲಿ ಏಕಾಗ್ರ ಮನಸ್ಸಿನಿಂದ ಶ್ರೀ ಮಹಾದೇವಿಯನ್ನು ಪಲ್ಲೆ-ಕಾಯಿಗಳಿಂದಲೂ ಯಜ್ಞಜಪಾದಿಗಳಿಂದಲೂ ತೃಪ್ತಿಪಡಿಸುವವನು ಇಹ-ಪರಲೋಕಗಳಲ್ಲಿ ಸೌಖ್ಯವನ್ನು ಹೊಂದುವನು. ಪುಷ್ಯ ಶು|| ೮ ದಿವಸ ಅಷ್ಟಭುಜಯುಕ್ತಳೂ ಅಷ್ಟ ಸಿದ್ಧಿಪ್ರದಾಯಕಳೂ ಆದ ಶಂಕರೀ ದೇವಿಯನ್ನು ವೈದಿಕ ಹಾಗು ತಾಂತ್ರಿಕ ವಿಧಾನಗಳಿಂದ ಅಧಿಕಾರಾನುಗುಣವಾಗಿ ಪೂಜಿಸಬೇಕು. ನವಮಿಯದಿನ (೯) ದುರ್ಗಾತ್ಮಿಕೆಯೂ, ನವ (ಒಂಬತ್ತು) ಕೋಟಿ ಸಖಿಯರಿಂದ ಸಹಿತಳೂ, ನವರತ್ನಭೂಷಿತಳೂ ಆದ ಅಂಬಾದೇವಿಯನ್ನು ಪೂಜಿಸಬೇಕು. ಯಾವ ದೇವಿಯ ಪಾದಕಮಲಗಳಿಗೆ ಹತ್ತು ದಿಕ್ಪಾಲಕರು ಕಿರೀಟಗಳಿಂದ ಭೂಷಿತವಾದ ತಮ್ಮ ಮಸ್ತಕಗಳನ್ನು ಬಗ್ಗಿಸಿ ನಮಿಸುವರೋ, ಯಾವ ದೇವಿಯು ದಶಮುಖ ರಾವಣನನ್ನು ಸಂಹರಿಸುವದಕ್ಕೆ ಉದ್ಯುಕ್ತಳಾಗಿ ರುವಳೋ, ಯಾವಳು ರಾಮನನ್ನು ಸಂತುಷ್ಟಗೊಳಿಸಿದಳೋ ಅಂಥ ದೇವಿ ಯನ್ನು ದಶಮಿಯದಿನ ಪೂಜಿಸಬೇಕು. ಏಕಾದಶಿಯ ದಿವಸ ದೈತ್ಯಸಂಹಾರಿ ಣಿಯಾದ ಈ ಶಿವನ ಪತ್ನಿಯನ್ನು ಪೂಜಿಸಬೇಕು. ದಾನ್ಯಬಲಾದಿಕ್ಯರಿಗೆ ಸಿದ್ಧಿ ಗಳನ್ನು ಕೊಡುವವಳೂ, ಶಾಂತಳೂ, ಸೂರ್ಯಮಂಡಲದಲ್ಲಿ ಸಂಸ್ಥಿತಳೂ ಆದ ದೇವಿಯನ್ನು ದ್ವಾದಶೀದಿವಸ ಪೂಜಿಸಬೇಕು; ವಿಶ್ವೇಶ್ವರದೇವರಿಗೂ, ೩೩ ಕೋಟಿ ದೇವತೆಗಳಿಗೂ, ಮರುದ್ಗಣಗಳಿಗೂ ವರವನ್ನು ಕೊಟ್ಟವಳೂ, ಬ್ರಹ್ಮ, ವಿಷ್ಣು, ಶಿವ ಇವರಲ್ಲಿ ಇರುವವಳೂ ಆದ ಜಗನ್ಮಾತೆಯನ್ನು ೧೩ ನೆಯ ದಿವಸ ಪೂಜಿಸಬೇಕು. ಚತುರ್ದಶಿಯ ದಿವಸ ಇಂದ್ರ, ಮನಸುಗಳು ಇವರನ್ನು ನಿಯಮನ ಮಾಡುವವಳೂ, ತತ್ವರೂಪಳೂ, ಭಕ್ತರಿಗೆ ಮಂಗಲವನ್ನು ಕೊಡು ವವಳೂ ಆದ ಶಂಕರೀದೇವಿಯನ್ನು ಪೂಜಿಸಬೇಕು, ಮತ್ತು ಆ ದಿನ ಮಹಾದೇ ವಿಗೆ ಅನೇಕ ಶಾಕಾದಿಗಳನ್ನು ಅರ್ಪಿಸಬೇಕು; ಮತ್ತು ಪುರಂಧ್ರಿ ಸುವಾಸಿನಿ ಯರಿಗೆ ಎಲ್ಲ ಪಲ್ಲೆ ಕಾಯಿಗಳನ್ನೂ ಉಂಡಿಗಳನ್ನೂ ದಾನ ಕೊಡಬೇಕು. ಪೌರ್ಣಿಮೆಯ ದಿನ ದೇವಿಯು ಪೂರ್ಣರೂಪಳೂ ಪೂರ್ಣಾನಂದಪ್ರದಳೂ

ಎಂದು ತಿಳಿದು ಶಂಕರಿಯನ್ನು ಪೂಜಿಸಬೇಕು. ಪತಿವ್ರತಾಸುವಾಸಿನಿಯರಿಗೆ ಸುಗಂಧ ದ್ರವ್ಯ, ಸುಗಂಧತೈಲ ಸಹಿತದ ಮಂಗಳಸ್ನಾನಮಾಡಿಸಬೇಕು; ಮತ್ತು ಬ್ರಾಹ್ಮಣ ರಿಗೆ ವಸ್ತ್ರಾಲಂಕಾರಗಳನ್ನು ಕೊಟ್ಟು ಪ್ರೇಮದಿಂದ ಪೂಜಿಸಬೇಕು. ಶಿವನಿ ಲ್ಲದ ದೇವಿಯನ್ನೂ ದೇವಿಯಿಲ್ಲದ ಶಿವನನ್ನೂ ಪೂಜಿಸಿದರೆ ಅಯುತಕೋಟಿ ವರ್ಷ ಗಳವರೆಗೆ ಸಿದ್ಧಿಯು ಸಿಗಲಾರದು. ಶಿವಶಕ್ತ್ಯೈಕ್ಯಭಾವದಿಂದ (ಐಕ್ಯಭಾವದಿಂದ) ಶಂಕರೀಭಕ್ತಿಸಂಯುತನಾದವನು ಪತಿವ್ರತೆಯರಾದ ಪುರಂಧ್ರಿಯರಿಗೆ ದಾನ ಗಳನ್ನು ಕೊಡತಕ್ಕದ್ದು. ವಿತ್ತ ತನ್ನಲ್ಲಿ ದ್ರವ್ಯವಿದ್ದ ಮಾನದಿಂದ ದೇವೀಸಂತ ರ್ಪಣ ಮಾಡಬೇಕು'' ಎಂದು ನುಡಿದರು.

ಈ ಪ್ರಕಾರ ದೇವಿಯು ಸ್ಥಾಪಿಸಿ ಮಹೇಂದ್ರಪ್ರಮುಖರಾದ ದೇವತೆಗಳು ಮಳೆ ಬರುವವರೆಗೆ ಶಂಕರೀದೇವಿಯು ಕೊಟ್ಟ ಕಾಯಿಪಲ್ಲೆಗಳಿಂದ ತೃಪ್ತರಾಗಿ ದ್ದರು. ಮಹಾದೇವಿಯನ್ನು ಅವರು ಭಕ್ತಿಯಿಂದ ಪೂಜಿಸುತ್ತಿರಲು, ಅವರ ಇಚ್ಛೆಯಂತೆ ವೃಷ್ಟಿಯು ಸುರಿಯಿತು.

## ಚಂಡಭೈರವನಿಗೆ ಶಂಕರಿಯು ವರಪ್ರದಾನ.

ಹರಿದ್ರಾತೀರ್ಥವನ್ನು ರಕ್ಷಣ ಮಾಡುವದಕ್ಕೆ ಶ್ರೀ ಶಂಕರೀದೇವಿಯಿಂದ ನಿಯಮಿಸಲ್ಪಟ್ಟ ಅಷ್ಟಭೈರವರೊಳಗೆ ಒಬ್ಬನು ಆ ತೀರ್ಥದಲ್ಲಿಯೇ ತಪಸ್ಸಿಗಾಗಿ ಕುಳಿತನು. ಅವನು ಜಿತೇಂದ್ರಿಯನೂ, ಜಿತಕ್ರೋಧನೂ ಆಗಿ, ನೀರು-ಆಹಾರ ಗಳನ್ನು ಬಿಟ್ಟನು ಆದರೂ ಅವನು ಸಂತೋಷವೃತ್ತಿಯಿಂದ ಮಹಾದೇವಿಯ ಆರಾ ಧನೆಯನ್ನು ನಡಿಸಿದನು ಹೀಗೆ ಕೆಲದಿನಗಳು ಕ್ರಮಿಸಲು, ಭೈರವನ ಅನನ್ಯ ಭಕ್ತಿಯ ತಪಸ್ಸಿಗೆ ಸಂತುಷ್ಟಳೂ, ಕೃಪಾಯುಕ್ತಳೂ ಆದ ಶಂಕರೀದೇವಿಯು ಸಕಲದೇವತೆಗಳೊಡನೆ ಅವನು ಇದ್ದಲ್ಲಿಗೆ ಬಂದಳು; ಮತ್ತು ತಪಸ್ಸಿನಲ್ಲಿ ಆ ಭೈರ ವನ ಮನಸ್ಸು ಪೂರ್ಣವಾಗಿ ಮಗ್ನವಾದದ್ದನ್ನು ನೋಡಿ, ''ಭೈರವನೇ, ಏಳು ಏಳು, ನಿನಗೆ ಕಲ್ಯಾಣವಾಗಲಿ ನೀನು ತಪಸ್ಸಿನಿಂದ ಸಿದ್ಧಪುರುಷನಾಗುವಿ. ನಾನು ನಿನಗೆ ವರವನ್ನು ಕೊಡಲಿಕ್ಕ ಬಂದಿರುವೆನು. ಆದ್ದರಿಂದ ನಿನಗೆ ಇಷ್ಟವಾದ ವರವನ್ನು ಬೇಡಿಕೊ'' ಎಂದು ಹೇಳಿದಳು. ಬಳಿಕ ಭೈರವನು ವರದಾಯಕಳೂ ಪರಮೇಶ್ವರಿಯೂ ಆದ ಶಂಕರೀದೇವಿಯನ್ನು ನಮಿಸಿ, ವರವನ್ನು ಬೇಡಲಿಚ್ಛಿಸಿ,—''ಮಹಾದೇವಿಯೇ, ನೀನು ವರವನ್ನು ಕೊಡುವದಾದರೆ ನನಗೆ ಇದೇ ವರವನ್ನು ಕೊಡು. ಸರ್ವದೇವತೆಗಳಿ ಗೂ ಮುಕ್ತಿಯನ್ನು ಕೊಡುವಂಥವಳಾದ ನಿನ್ನ ಸೇವೆಯನ್ನು ಕೊಡು. ನಿನ್ನ ಕ್ಷೇತ್ರ

ದಲ್ಲಿ ಸರ್ವಪ್ರಾಣಿಗಳಿಗೂ ಸುಖವಾದ ವಾಸಕೊಡು. ಈ ಹರಿದ್ರಾತೀರ್ಥವು ಪರಮ ಪವಿತ್ರವೂ,ಶ್ರೇಷ್ಠವೂ ಆಗಿರುತ್ತದೆ ಈ ತೀರ್ಥದಲ್ಲಿ ಸ್ನಾನದಾನಾದಿಗಳನ್ನು ಮಾಡುವ ಜನರನ್ನು ಪಾವನಮಾಡು.'' ಎಂದು ಮಾತಾಡಿದನು. ಭೈರವನು ಈ ಪ್ರಕಾರ ಪ್ರಾರ್ಥನೆಮಾಡಿಕೊಂಡ ಬಳಿಕ ದೇವಿಯು ಸಂತುಷ್ಟಮನಸ್ಸುಳ್ಳವಳಾಗಿ ಅವನಿಗೆ ವರವನ್ನು ನೀಡಲು ಸಿದ್ಧಳಾದಳು. ಶ್ರೀ ದೇವಿಯು, ''ಭೈರವನೇ, ನನ್ನಲ್ಲಿ ನೀನು ಭಕ್ತಿಯನ್ನಿಡು. ನನ್ನ ಗಣಗಳಲ್ಲಿ ನೀನು ವರಿಷ್ಠನಾಗು. ನೀನು ಚಂಡ ಭೈರವನೆಂಬ ಹೆಸರಿನಿಂದ ಪ್ರಸಿದ್ಧನಾಗುವಿ. ನನ್ನ ಕ್ಷೇತ್ರದಲ್ಲಿ ಯಾವ ನರಾಧಮರು ಪಾಪವನ್ನು ಆಚರಿಸುವರೋ ಅಂಥ ಪಾಪಿಗಳಿಗೆ ನೀನು ದೊಡ್ಡಶಿಕ್ಷೆಯನ್ನು ವಿಧಿಸು; ನೀನು ಯಥಾಸುಖವಾಗಿ ಸಜ್ಜನರನ್ನು ಪಾಲನ ಮಾಡು; ಹಾಗು ದೈತ್ಯರಿಗೆ ಮಾತ್ರ ಭಯಂಕರ ನಿರ್ದಯನಾಗು; ಹಾಗು ನನ್ನ ಕ್ಷೇತ್ರದ ರಕ್ಷಕನಾಗಿ ಸುಖದಿಂದಿರು. ನೀನು ಪೂಜ್ಯತೆಯನ್ನು ಹೊಂದುವಿ. ನನ್ನ ಕ್ಷೇತ್ರವಾಸಿಗಳನ್ನು ದಂಡಿಸುವದಕ್ಕೆ ಯಾವನೂ ಸಮರ್ಥನಾಗಲಾರನು. ನೀನು ದಿವ್ಯ ರೂಪವನ್ನು ಧರಿಸಿ ನಾನಾರತ್ನವಿಭೂಷಿತನಾಗಿ ಈ ತೀರ್ಥದ ಮಧ್ಯದಲ್ಲಿ ಸುಖವಾಗಿ ವಾಸಮಾಡಿಕೊಂಡಿರು. ನಿನ್ನ ಸುತ್ತುಮುತ್ತು ಉಳಿದ ಭೈರವರು ಇರುವರು. ಈ ತೀರ್ಥದ ಹೊಂಡದಲ್ಲಿ ಒಂದು ಲಿಂಗವು ಉತ್ಪನ್ನವಾಗುವದು. ಅದು ಲೋಕದಲ್ಲಿ ನಿನ್ನ ಹೆಸರಿನಿಂದಲೇ ಪ್ರಖ್ಯಾತಿಯನ್ನು ಹೊಂದುವದು. ಈ ನಿನ್ನ ಭೈರವ ತೀರ್ಥದ ಅಥವಾ ಲಿಂಗದ ದರ್ಶನದಿಂದಲೂ ಪೂಜೆಯಿಂದಲೂ ಎಲ್ಲ ಪ್ರಾಣಿಗಳಿಗೆ ಸಕಲವೂ ಸಿದ್ಧಿಯಾಗುವದು. ಯಾವ ನರನು ನಿನ್ನ ಪೂಜೆಯನ್ನು ಮಾಡದೆ ನನ್ನ ಪೂಜೆಯನ್ನು ಮಾಡುವದರಲ್ಲಿ ರತನಾಗುವನೋ, ಅವನು ನನ್ನ ಪೂಜೆಯ ಫಲವನ್ನು ಪಡೆಯಲಾರನು. ಸರ್ವಪಾಪದಿಂದ ವಿಶುದ್ಧನಾದವನು ಮಾತ್ರ ಇಚ್ಛಿಸಿದ ಫಲವನ್ನು ಹೊಂದುವನು. ಶುಕ್ರವಾರದಿನ ಯಾವನು ವ್ರತಾದಿ ನಿಯಮಗಳಿಂದ ಈ ತೀರ್ಥದಲ್ಲಿ ಸ್ನಾನಮಾಡಿ, ನಿನ್ನನ್ನು ಪೂಜಿಸುವನೋ, ಅವನಿಗೆ ನಾಶರಹಿತವಾದ ಪದವಿಯು ದೊರೆಯುವದು. ನಿನ್ನನ್ನು ಪೂಜಿಸುವ ರೋಗಿಯ ಮನೋರೋಗಗಳು ನಾಶವಾಗುವವು. ನಿನ್ನನ್ನು ಪತ್ರ-ಪುಷ್ಪ, ಅಕ್ಷತೆ ಮೊದಲಾದವುಗಳಿಂದ ಪೂಜಿಸುವ ಕ್ಷತ್ರಿಯರು ಎಲ್ಲ ಕಾಮನೆಗಳನ್ನು ಪಡೆಯುವರು.'' ಈ ಪ್ರಕಾರ ವರವನ್ನು ಕೊಟ್ಟು ದೇವಿಯೇ ಎಲ್ಲ ದೇವಗಣಗಳಿಂದ ಸಹಿತವಾಗಿ ಆ ತೀರ್ಥಮಧ್ಯದಲ್ಲಿ ದಿವ್ಯವೂ, ಸುಂದರವೂ ಆದ ದೇವಾಲಯವನ್ನು ನಿರ್ಮಿಸಿ, ಶ್ರೀ ಚಂಡಭೈರವನನ್ನು ಸ್ಥಾಪಿಸಿದಳು; ಮತ್ತು ಅನೇಕ ಲಿಂಗಗಳನ್ನು ನಾಲ್ಕೂ ಕಡೆ

ಯಲ್ಲಿ ಸಂಸ್ಥಾಪಿಸಿ ಸಂತೋಷದಿಂದ ತನ್ನ ಮಂದಿರಕ್ಕೆ ಹೋದಳು. ಆಗ ಎಲ್ಲ ದೇವತೆಗಳ ಸಮೂಹವು ಆ ಮಹಾದೇವಿಯನ್ನು ಸ್ತುತಿಸಿತು; ಇತ್ತ ಶ್ರೀಚಂಡಭೈರವನು ದೇವಿಯಿಂದ ಶ್ರೇಷ್ಠವಾದ ವರವನ್ನು ಪಡೆದು, ದೇವಿಯು ಆಜ್ಞೆಮಾಡಿದಂತೆ ಆ ತೀರ್ಥದ ಆಧಿಪತ್ಯವನ್ನು ಸ್ವೀಕರಿಸಿದನು. ಶ್ರೀ ಬನಶಂಕರಿಯು ನಿರ್ಮಿಸಿದ ಈ ತೀರ್ಥವು ಸರ್ವರಿಗೂ ಹಿತದಾಯಕವಾಗಿರುವದು.

## ಅಗಸ್ತ್ಯಕೃತ ಬನಶಂಕರೀ ಸ್ತೋತ್ರ

ಈ ಪ್ರಕಾರ ತನ್ನ ಪತ್ನಿಯಾದ ಲೋಪಾಮುದ್ರೆಗೆ ತೀರ್ಥಮಾಹಾತ್ಮ್ಯೆವನ್ನು ಹೇಳಿ ಆ ಮಹಾಮುನಿಯು ಹರಿದ್ರಾತೀರ್ಥದಲ್ಲಿ ಸ್ನಾನಮಾಡಿ ಸಂಧ್ಯಾದಿ ತರ್ಪಣಗಳನ್ನು ತೀರಿಸಿಕೊಂಡು ಯಥಾಶಕ್ತಿಯಾಗಿ ಹಿರಣ್ಯದಾನಾದಿಗಳನ್ನು ಮಾಡಿ, ಶ್ರೀ ಚಂಡೇಶ್ವರಿಯನ್ನು ಪೂಜಿಸಿ ಅಷ್ಟಲಿಂಗಗಳನ್ನು ಪೂಜಿಸಿದನು. ಬಳಿಕ ಔದುಂಬರಗಿಡದಲ್ಲಿ ವಾಸಮಾಡಿದ ದೇವಿಯನ್ನೂ, ಗಣೇಶನನ್ನೂ, ದ್ವಾರಪಾಲಕರನ್ನೂ ಪೂಜಿಸಿದನು. ಅನಂತರ ಪೂಜಾಸಾಮಗ್ರಿಗಳನ್ನೂ, ಸುಗಂಧಗಳಿಂದ ವಾಸಿತವಾದ ನೀರನ್ನೂ ತೆಗೆದುಕೊಂಡು, ಶ್ರೀ ಶಾಕಂಭರೀಪೂಜೆಗೆ ಹೊರಟನು. ಆ ಮಹಾಮುನಿಯು ಮೊದಲು ಗುರುವಂದನವನ್ನು ಮಾಡಿ, ಬಳಿಕ ಪೀಠಪೂಜೆಯನ್ನು ಮಾಡಿ, ಪಂಚಾಮೃತ, ಇಕ್ಷುರಸ (ಕಬ್ಬಿನರಸ) ತೆಂಗಿನಕಾಯಿನೀರು, ಇವೆಲ್ಲವುಗಳಿಂದಲೂ ಶತರುದ್ರೀಯಸೂಕ್ತ, ದೇವೀಸೂಕ್ತ, ಪವಮಾನಸೂಕ್ತ ಮೊದಲಾದವುಗಳಿಂದಲೂ ದೇವಿಗೆ ಅಭಿಷೇಕ ಮಾಡಿದನು. ಬಳಿಕ ಹರಿದ್ರಾ (ಅರಿಷಿಣ) ಕುಂಕುಮ, ಕಾಡಿಗೆಗಳಿಂದ ತಂತ್ರೋಕ್ತದಿಂದ ನವಾವರಣ ಪೂಜೆಯನ್ನು ಮಾಡಿ, ಅಂಗಣ ಭೂಮಿಯಲ್ಲಿ ಅರಿಷಿಣಪುಡಿ ಹಾಗು ಎಣ್ಣೆಯನ್ನು ಚಲ್ಲಿದನು. ಬಳಿಕ ದೇವೀನಾಮಸಹಸ್ರದಿಂದ ಗಂಧಪುಷ್ಪಗಳಿಂದ ಪೂಜೆಯನ್ನು ಮಾಡಿ, ಧೂಪ, ದೀಪ, ನೈವೇದ್ಯ, ತಾಂಬೂಲಾದಿಗಳನ್ನು ದೇವಿಗೆ ಅರ್ಪಿಸಿದನು. ಅನಂತರ ಪ್ರದಕ್ಷಿಣನಮಸ್ಕಾರಗಳನ್ನು ಹಾಕಿ ತನ್ನ ಮಸ್ತಕದಮೇಲೆ ತನ್ನ ಎರಡೂ ಕೈಗಳಿಂದ ಕೂಡಿದ ಅಂಜಲಿಯನ್ನು ಇಟ್ಟುಕೊಂಡು, ಆ ಮಹಾಮುನಿಯು ಯಥಾವಿಧಿಯಾಗಿಯೂ, ಯಥಾಮತಿಯಾಗಿಯೂ ಶ್ರೀ ಶಂಕರೀದೇವಿಯ ಸ್ತೋತ್ರವನ್ನು ಪ್ರಾರಂಭಿಸಿದನು. "ಹೇ ಮನೋಜ್ಞಳಾದ ಮಹಾದೇವಿಯೇ, ನಾನು ನಿನ್ನನ್ನು ಸದ್‌ಭಾವದಿಂದ ನಮಸ್ಕರಿಸುವೆನು. ನೀನು ಪರಿಪೂರ್ಣಸ್ವರೂಪಳೂ, ಸರ್ವಪ್ರದಾಯಕಳೂ ಯೋಗಿಯ ಮನಸ್ಸಿನಲ್ಲಿ ವಾಸಮಾಡುವವಳೂ ಇರುವಿ. ಸದ್‌ಭಕ್ತರು ನಿನ್ನ ಪಾದಕಮಲ

ಗಳನ್ನು ಸದಾಕಾಲ ಸೇವಿಸುತ್ತಿರುವರು. ನೀನು ನಿನ್ನಲ್ಲಿ ನಿಷ್ಠರಾದ ಭಕ್ತರ ಸಂಸಾರತಾಪವನ್ನು ನಾಶಮಾಡುವದರಲ್ಲಿ ದಕ್ಷಳಿರುವಿ. ಹೇ ಮಹಾ ಕಾಳಿಯೇ ಇಡೀ ವಿಶ್ವವು, ಅಶೇಷವಸ್ತುಗಳಿಗೂ ಸಾಕ್ಷಿಭೂತಳಾದ ನಿನ್ನಿಂದ ಹುಟ್ಟಿ, ನಿನ್ನಿಂದಲೇ ಬದುಕಿ ನಿನ್ನಲ್ಲಿಯೇ ಲೀನವಾಗುವದು. ಪರಬ್ರಹ್ಮವಸ್ತುವಿ ನಿಂದ ಯಾವದೂ ಹುಟ್ಟುವದಿಲ್ಲ. ಅದರಂತೆ ಈ ಜಗತ್ತು ಅಸತ್ಯವಾದರೂ ನಿನ್ನ ಮಾಯೆಯಿಂದ ಸತ್ಯವೆಂದು ಭಾಸವಾಗುತ್ತದೆ. ಹೇ ದೇವಿಯೆ, ಬುದ್ಧಿ ವಂತರು ಈ ರಹಸ್ಯವನ್ನು ಅಂದರೆ ಐಕ್ಯಜ್ಞಾನವನ್ನೂ ಪ್ರಳಯಪ್ರಪಂಚಗಳ ಗುಟ್ಟನ್ನೂ ತಿಳಿದುಕೊಂಡು ನಿನಗೆ ಶರಣು ಬರುವರು. ಈ ಭವಸಮುದ್ರದಲ್ಲಿ ವಾಸಿಸುವ ಇಂಥ ಭಕ್ತರ ಜನ್ಮವೇ ಧನ್ಯವು. ಸಂಸಾರವೆಂಬ ಅಂಧಕೂಪದಲ್ಲಿ ಬಿದ್ದಂಥ ನನಗೆ ನಿನ್ನ ಸ್ವಲ್ಪ ಪ್ರಕಾಶವಾದರೂ ಆತ್ಮಜ್ಞಾನಪ್ರದವೂ. ಶೋಕವಿನಾ ಶಗಳಿಂದ ರಕ್ಷಕವೂ ಆಗುವದು. ಯೋಗಿಗಳು ಆತ್ಮಪ್ರಕಾಶವನ್ನು ಪಡೆದು ಭವ ಸಾಗರವನ್ನು ದಾಟಿರುವರು. ದೈತ್ಯ ಸಂಹಾರವನ್ನು ಮಾಡುವ ಸುರೇಶ್ವರಿಯೇ, ಮಹಾ ಮಾಯೆಯೇ ನೀನು ತಮೋಗುಣಯುಕ್ತಳಾಗಿದ್ದದರಿಂದ ನಿನಗೆ ಶ್ರೀ ರುದ್ರರೂಪಿಣಿಯೆಂದೂ ಮಹಾಕಾಲಿಯೆಂದೂ ಕರೆಯುತ್ತಾರೆ. ನಿನಗೆ ಹತ್ತು ಮುಖ ಗಳೂ, ಹತ್ತು ಭುಜಗಳೂ ಇದ್ದು, ನಿನ್ನ ದೇಹವೆಲ್ಲ ಸರ್ವಾಭರಣಗಳಿಂದ ಭೂಷಿ ತವಾಗಿದೆ. ನಿನಗೆ ಮೂವತ್ತು ಕಣ್ಣುಗಳಿರುವವು. ಹೇ ಸುರೇಶ್ವರಿ, ನೀನು ಅಂಜನ (ಕಾಡಿಗೆ)ದಂತೆ ಶ್ಯಾಮರೂಪಿಣಿಯಾಗಿ ಪ್ರಕಾಶಿಸುತ್ತೀ. ನೀನು ನಿನ್ನ ಕೈಗಳಲ್ಲಿ ಪರಿಘ, ಭೃಶುಂಡಿ, ಕಾರ್ಮುಕ ಮೊದಲಾದ ದಿವ್ಯ ಆಯುಧಗಳನ್ನು ಧರಿಸಿರುವಿ..'' ಎಂದು ಸ್ತೋತ್ರ ಮಾಡಿದನು.

ಅಗಸ್ತ್ಯನು ಈ ಪ್ರಕಾರ ಮಹಾಕಾಲಿಯ ಸ್ತೋತ್ರಮಾಡಿ ಮಹಾಲಕ್ಷ್ಮಿ ಯನ್ನು ಸ್ತುತಿಸಲಿಕ್ಕೆ ಪ್ರಾರಂಭ ಮಾಡಿದನು. ''ಸುರ ಪೂಜಿತಳಾದ ಮಹಾ ಲಕ್ಷ್ಮಿಯೇ, ನೀನು ವಿಷ್ಣುವಿನಂತೆ ಶಂಖ, ಚಕ್ರ, ಗದಾ, ಪದ್ಮಗಳನ್ನು ಕೈಗಳಲ್ಲಿ ಧಾರಣಮಾಡಿರುವಿ; ನೀನು ಗರುಡಾರೂಢಳು; ನೀನು ಮಹಿಷಾಸುರನೆಂಬ ರಾಕ್ಷಸ ನನ್ನು ಸಂಹರಿಸಿದಿ. ವಿಷ್ಣುಪತ್ನಿಯಾದ ನಿನಗೆ ಬ್ರಾಹ್ಮಿ, ನಾರಾಯಣಿ ಎಂಬ ಹೆಸರುಗಳು ಶೋಭಿಸುವವು. ನೀನು ಸಿದ್ಧಿಬುದ್ಧಿಪ್ರದಾಯಕಳೂ, ಭಕ್ತಿಮುಕ್ತಿ ಗಳನ್ನು ಕೊಡುವವಳೂ ಇರುವಿ. ಹೇ ಮಂತ್ರಮೂರ್ತಿಯೇ, ಸದಾನಂದ ಸ್ವರೂಪಿಣಿಯಾದ ಮಹಾಲಕ್ಷ್ಮಿಯೇ, ನಿನಗೆ ನಮಸ್ಕಾರವು. ಜಗಜ್ಜನನಿಯೇ, ನೀನು ಶ್ವೇತಾಂಬರವನ್ನು ಪರಿಧಾನಮಾಡಿದವಳೂ, ರತ್ನಾಭರಣ ಭೂಷಿತಳೂ,

ಚರಾತ್ಮಕಳೂ ಆಗಿರುವ ನಿನಗೆ ನಮಸ್ಕಾರವು. ಹೇ ಮಹಾಲಕ್ಷ್ಮಿಯೇ, ನೀನು ಸೂಕ್ಷ್ಮಳೂ, ಸ್ಥೂಲಳೂ, ಮಹಾನಂದಮಯಳೂ, ಶಾಂತಳೂ, ಮಹೋದರಳೂ, ಮಹಾಪಾಪಹರಳೂ ಇರುವಿ. ನಾನು ನಿನಗೆ ನಮಸ್ಕರಿಸುತ್ತೇನೆ. ಹೇ ಸರ್ವೇಶ್ವರೀ, ನೀನು ಎಲ್ಲ ವರಗಳನ್ನು ಕೊಡುವವಳೂ, ಸರ್ವದುಃಖವಿನಾಶಿನಿಯೂ ಇರುವಿ. ಇಂಥ ನಿನ್ನನು ನಾನು ನಮಸ್ಕರಿಸುವೆನು. ಹೇ ಮಹಾಲಕ್ಷ್ಮೀ, ನಿನಗೆ ಆದಿ-ಅಂತ್ಯಗಳು ಇಲ್ಲ. ನೀನು ಎಲ್ಲ ಲೋಕಗಳನ್ನು ಪೋಷಿಸುತ್ತೀ. ನೀನು ಆದಿಬ್ರಹ್ಮನ ಪತ್ನಿಯು. ನಿನ್ನ ಸ್ವರೂಪವು ಅಗೋಚರವಾಗಿದೆ. ನೀನು ಯೋಗಿನಿಯೂ, ಯೋಗಸಂಭೂತಳೂ ಇರುವಿ. ನಾನು ನಿನಗೆ ಅನೇಕಸಾರೆ ನಮಸ್ಕಾರಗಳನ್ನು ಅರ್ಪಿಸುವೆನು.'' ಮಹಾಲಕ್ಷ್ಮಿಯ ಸ್ತೋತ್ರದ ಈ ಎಂಟು ಶ್ಲೋಕಗಳನ್ನು ದೇವಿಯ ಸನ್ನಿಧಿಯಲ್ಲಿ ಭಕ್ತಿಯಿಂದ ಪಠಿಸುವವರು ದುಃಖದಾರಿದ್ರ್ಯಗಳಿಂದ ಬಿಡುಗಡೆ ಹೊಂದುವರು; ಹಾಗು ಎಲ್ಲ ಕಾಮನೆಗಳನ್ನು ಪಡೆಯುವರು. ಈ ಪ್ರಕಾರ ಮಹಾಲಕ್ಷ್ಮೀಸ್ವರೂಪಿಣಿಯಾದ ಬನಶಂಕರಿಯನ್ನು ಸ್ತುತಿಸಿ, ವಾಗ್ದೇವಿ (ಸರಸ್ವತೀ) ಸ್ವರೂಪಿಣಿಯಾದ ಶಂಕರಿಯನ್ನು ಅತ್ಯಾನಂದದಿಂದ ಸ್ತೋತ್ರ ಮಾಡಹತ್ತಿದನು. ''ಅಕ್ಷರುದ್ರಾಕ್ಷಮಾಲೆ ಹಾಗು ಅಂಕುಶಗಳನ್ನು ಕೈಯಲ್ಲಿ ಹಿಡಿದವಳೂ, ವೀಣಾಪುಸ್ತಕಧಾರಿಣಿಯೂ, ರಜೋರೂಪಧಾರಿಣಿಯೂ ಆದ ಸರಸ್ವತಿಯೇ, ನಾನು ನಿನ್ನನ್ನು ನಮಿಸುವೆನು. ಹೇ ದೇವಿಯೇ, ನೀನು ಶ್ವೇತ ಪದ್ಮಾಸನದ ಮೇಲಿದ್ದು ಒಳ್ಳೇ ಕಾಂತಿಯುಳ್ಳ ಬಂಗಾರದಂಥ ವಸ್ತ್ರವನ್ನು ಪರಿಧಾನಮಾಡಿರುವಿ. ನಿನ್ನ ಮುಖವು ಚಂದ್ರನಂತೆ ಆಹ್ಲಾದಕರವಾಗಿದೆ. ವಿಶಾಲಾಕ್ಷಿಯಾದ ನೀನು ವಿದ್ಯಾದಾನರತಳೂ, ಶ್ರೇಷ್ಠಳೂ ಇರುವಿ. ನೀನು ಶುಭ್ರವಾದ ಚಂದನಲೇಪಗಳನ್ನು ಶರೀರಕ್ಕೆ ಹಚ್ಚಿಕೊಂಡು ಹಂಸಾಸನದ ಮೇಲೆ ಕುಳಿತವಳಾಗಿರುವಿ; ನೀನು ಸರ್ವಸಿದ್ಧಿಗಳನ್ನು ಕೊಡುವವಳೂ, ಕಮಂಡಲುಧಾರಿಣಿಯೂ ಇರುವಿ. ನಾನು ನಿನಗೆ ಪುನಃಪುನಃ ನಮಸ್ಕಾರಗಳನ್ನು ಮಾಡುತ್ತೇನೆ.'' ಈ ಪ್ರಕಾರ ಸರಸ್ವತೀ ಸ್ವರೂಪದಿಂದಿರುವ ಶ್ರೀ ಶಂಕರೀ ದೇವಿಯನ್ನು ಅಗಸ್ತ್ಯ ಮುನಿಯು ಸ್ತುತಿಸಿದನು. ''ಹೇ ಚಿಚ್ಛಕ್ತಿಯಾದ ಪರಮೇಶ್ವರಿಯೇ, ನಿನ್ನ ಸತ್ತ್ವಸ್ವರೂಪದಿಂದ ಸೂರ್ಯ, ಚಂದ್ರ, ಅಗ್ನಿ ಮೊದಲಾದವರು ಹುಟ್ಟಿ ನಿತ್ಯದಲ್ಲಿಯೂ ಜಗತ್ತಿಗೆ ಪ್ರಕಾಶವನ್ನು ಕೊಡುವರು. ಮೂವತ್ತಾರು ತತ್ವರೂಪಗಳುಳ್ಳವಳೂ, ತತ್ವಾತೀತಳೂ, ಬೃಹನ್ಮಯಳೂ ಆದ ಮಹಾದೇವಿಯೇ, ನೀನು ಎಲ್ಲ ಜಗತ್ತನ್ನು ವ್ಯಾಪಿಸಿ ಎಲ್ಲ ತತ್ವಗಳಿಂದ ದೂರ ಇರುವಿ. ಹೇ ದೇವಿಯೇ, ನೀನು ಸ್ವ...

ದಳೂ, ಬೋಧಸ್ವರೂಪಿಣಿಯೂ ಆಗಿದ್ದು ನಿರ್ವಾಣ (ಮೋಕ್ಷ) ವೇ ನಿನ್ನ ಪಾದದಲ್ಲಿರುವದು. ನಾನು ನಿನಗೆ ಅನೇಕಸಾರೆ ನಮಸ್ಕಾರಮಾಡುವೆನು. ಸದಾನಂದಮಯಳಾದ ಸರ್ವಶಕ್ತಿಯೇ, ನಿನ್ನ ಸ್ವರೂಪವನ್ನು ತಿಳಿಯಬೇಕೆಂದು ಮನಸ್ಸು ಹಾಗು ವಾಣಿ ಇವು ಬಹಳ ಪ್ರಯತ್ನಪಟ್ಟರೂ ಅವು ನಿನ್ನ ಹತ್ತಿರ ಹೋಗಿಹೋಗಿ ತಿರುಗಿ ಬಂದವು.'' ಈ ಪ್ರಕಾರ ಶ್ರೀ ಬನಶಂಕರಿಯ ಮೂರು ಸ್ವರೂಪಗಳನ್ನೂ ನಿರ್ಗುಣಸ್ವರೂಪವನ್ನೂ ಸ್ತುತಿಸಿ, ಸಂತುಷ್ಟಮನಸ್ಸುಳ್ಳ ಅಗಸ್ತ್ಯಮುನಿಯು ಕೆಲವು ಹೊತ್ತು ಅಲ್ಲಿ ನಿಂತು ಮತ್ತೆ ದೇವಿಗೆ ನಮಸ್ಕಾರಮಾಡಿ, ತೈಲತೀರ್ಥಕ್ಕೆ ಬಂದನು.

## ೪ನೆಯ ಅಧ್ಯಾಯ

### ತೈಲತೀರ್ಥದಲ್ಲಿ ಶಂಕರಿಯ ಲೀಲೆಗಳು.

ಲೋಪಾಮುದ್ರೆಯು ತೈಲತೀರ್ಥವನ್ನು ನೋಡಿದಕೂಡಲೆ ಆ ಮಹಾ ಮುನಿಗಳಾದ ಅಗಸ್ತ್ಯರನ್ನು ಕುರಿತು, ''ಮುನಿಗಳೇ ಈಗ ನಮ್ಮೆದುರಿಗೆ ಕಾಣುವ ನಿರ್ಮಲೋದಕ ಪೂರ್ಣವಾದ ತೀರ್ಥದ ಹೆಸರೇನು? ಇಲ್ಲಿ ಯಾರು ತಪಸ್ಸು ಮಾಡಿದರು? ಇದರ ಪೂರ್ವದ ಇತಿಹಾಸವನ್ನು ಹೇಳಿರಿ.'' ಎಂದು ಕೇಳಿದಳು. ಆಗ ಅಗಸ್ತ್ಯರು ಹೇ ಕಾಂತೇ, ಕೇಳು; ನಾನು ತಿಳಿದ ಮಟ್ಟಿಗೆ ಈ ತೀರ್ಥದ ಬಗ್ಗೆ ಹೇಳುವೆನು.

ಪೂರ್ವದಲ್ಲಿ ಶುಂಭಾದಿ ದೈತ್ಯರು ಘೋರವಾದ ತಪಶ್ಚರ್ಯವನ್ನು ಆಚರಿಸಿ ಬ್ರಹ್ಮದೇವನನ್ನು ಪ್ರಸನ್ನೀಕರಿಸಿಕೊಂಡರು. ಬ್ರಹ್ಮದೇವನು, ''ನಿಮಗೆ ಪುರುಷರಿಂದ ಮರಣವು ಬರಲಿಕ್ಕಿಲ್ಲ'' ಎಂದು ಅವರಿಗೆ ವರವನ್ನು ಕೊಟ್ಟನು. ಈ ವರದಿಂದ ಮದೋನ್ಮತ್ತರಾದ ದೈತ್ಯರು ದೇವತೆಗಳನ್ನು ಬಹುಪರಿಯಿಂದ ಪೀಡಿಸಿದರು. ಆಗ ಬಹು ದುಃಖಪೀಡಿತರಾದ ದೇವತೆಗಳೂ ಮರುದ್ಗಣಗಳೂ ಬ್ರಹ್ಮದೇವನಿಗೆ ಶರಣು ಹೋದರು. ದೇವತೆಗಳು, ''ಬ್ರಹ್ಮದೇವನೇ, ಶುಂಭಾದಿದೈತ್ಯರು ನಮಗೆ ಅತ್ಯಂತ ಪೀಡೆಯನ್ನು ಕೊಡುವರು. ನಮಗೆ ಸ್ವಾಹಾಕಾರಾದಿ

ಗಳಿಂದ ಬರುವ ಹವಿರ್ಭಾಗವು ನಿಂತುಹೋಗಿದೆ. ಅವರನ್ನು ಕೊಲ್ಲಲಿಕ್ಕೆ ನಮ್ಮಲ್ಲಿ ಸಾಮರ್ಥ್ಯವಿಲ್ಲ. ಆದ್ದರಿಂದ ದೇವನೇ, ದಾನವರ ಭಯದಿಂದ ವ್ಯಾಕುಲರಾದ ನಮ್ಮನ್ನು ರಕ್ಷಿಸು, ಎಂದು ಪ್ರಾರ್ಥಿಸಿದರು. ಬ್ರಹ್ಮದೇವನು, ದೇವತೆಗಳ ವಿನಂತಿಯನ್ನು ಕೇಳಿ, "ನಿರ್ಜರರೇ, ಪುರುಷರಿಂದ ಅವರಿಗೆ ಮರಣವಿಲ್ಲೆಂಬ ವರವು ನನ್ನಿಂದ ಈ ಮೊದಲೇ ಕೊಡಲ್ಪಟ್ಟಂತೆ ನನ್ನ ಸ್ಮರಣದಲ್ಲಿದೆ. ಆದ್ದರಿಂದ ನೀವು ದೇವಿಯ ಹತ್ತರ ಹೋಗಿ ಅವಳನ್ನು ಪ್ರಾರ್ಥಿಸಿದರೆ, ಅವಳು ಆ ದೈತ್ಯರನ್ನು ನಾಶಮಾಡುವಳು." ಎಂದು ಹೇಳಿದನು. ಬ್ರಹ್ಮದೇವನ ಮಾತನ್ನುಕೇಳಿ ಅಗ್ನಿದೇವನನ್ನು ಮುಂದೆಮಾಡಿಕೊಂಡು ದೇವತೆಗಳೆಲ್ಲರೂ ಭವಭೀತಿಯನ್ನು ಹರಣಮಾಡುವ ದೇವಿಯನ್ನು ಕುರಿತು ಪ್ರಾರ್ಥಿಸಿದರು. "ಹೇ ಲೋಕಜನನಿಯೇ ನೀನು ಲೋಕಕ್ಕೆ ಮಂಗಲಪ್ರದಾಯಕಳೂ, ಭಕ್ತವತ್ಸಲಳೂ ಇರುವಿ. ನೂತನ ಹಾಗು ಪುರಾತನ ವಿಶ್ವರೂಪಿಣಿಯೇ, ನಾವು ನಿನಗೆ ನಮಸ್ಕರಿಸುವೆವು. ನೀನು ನಿತ್ಯಾನಿತ್ಯಸ್ವರೂಪಳೂ, ಲೋಕಾಧ್ಯಕ್ಷಳೂ ಇರುವಿ. ಇಡಿ ಬ್ರಹ್ಮಾಂಡವು ಪೃಥಿವ್ಯಾದಿಪಂಚಭೂತಗಳೂ ನಿನ್ನ ರೂಪಗಳಿರುವವು. ಹೇ ದೇವಿಯೇ, ನೀನು ಭಕ್ತರಮೇಲೆ ಕೃಪೆಯನ್ನಿಟ್ಟು ನಿನ್ನ ಮನಸ್ಸಿಗೆ ಬಂದ ದೇಹವನ್ನು ಧರಿಸುತ್ತೀ. ವೇದಗಳೆಲ್ಲ ನಿನ್ನ ಸುಸ್ಕಾರದಿಂದ ಉತ್ಪನ್ನವಾಗಿವೆ. ನೀನು ಶ್ರೇಷ್ಠಳೂ, ತುರ್ಯಾದಿ (ಬ್ರಹ್ಮೈಕ್ಯ) ರೂಪಿಣಿಯೂ ಇರುವಿ. ಇಡಿ ವಿಶ್ವವೂ, ಭೂತಗಳೂ ನಿನ್ನ ಪಾದಗಳಿರುತ್ತವೆ. ನಿನ್ನ ಶಿರಸ್ಸೇ ಆಕಾಶವು. ನಿನ್ನ ನಾಭಿಯಿಂದಲೇ ಅಂತರಿಕ್ಷದ ಉತ್ಪತ್ತಿಯು ವನಸ್ಪತಿಗಳೇ ನಿನ್ನ ಕೂದಲುಗಳು. ಚಂದ್ರನು ನಿನ್ನ ಮನಸ್ಸಿನಿಂದ ಹುಟ್ಟಿದವನು. ನಿನ್ನ ಕಣ್ಣುಗಳಿಂದ ಸೂರ್ಯನು ಸಂಭವಿಸಿದನು. ಹೇ ದೇವಿಯೇ, ಎಲ್ಲವೂ ನೀನೇ ಇರುವಿ. ಈ ಜಗತ್ತಿನಲ್ಲಿ ನಿನ್ನಹೊರತು ಅನ್ಯವಸ್ತುಗಳಿಲ್ಲ. ಮಹಾದೇವಿಯೇ ನಾವು ನಿನಗೆ ಪುನಃಪುನಃ ನಮಸ್ಕಾರ ಮಾಡುವೆವು.

ಈ ಪ್ರಕಾರ ಸ್ತೋತ್ರಮಾಡಿ ದೇವತೆಗಳು ಭೂಮಿಯಮೇಲೆ ದಂಡವತ್ ಬಿದ್ದು ದೇವಿಗೆ ಸಾಷ್ಟಾಂಗನಮಸ್ಕಾರವನ್ನು ಹಾಕಿದರು. ಸ್ತೋತ್ರನಮಸ್ಕಾರಗಳಿಂದ ಪರಿತುಷ್ಟಳಾದ ದೇವಿಯು ದೇವತೆಗಳನ್ನು ಕುರಿತು, "ದೇವತೆಗಳೇ, ಏಳಿರಿ, ಏಳಿರಿ; ನಾನು ಪ್ರಸನ್ನಳಾಗಿರುವೆನು. ನಿಮಗೆ ಬೇಕಾದ ಶ್ರೇಷ್ಠವಾದ ವರವನ್ನು ಬೇಡಿಕೊಳ್ಳಿರಿ. ನನ್ನನ್ನು ಕುರಿತು ನೀವು ಈಗ ಮಾಡಿದ ಸ್ತೋತ್ರದಿಂದ ಯಾರು ನನ್ನನ್ನು ಸಂತೋಷಿಸುವರೋ ಅವರಿಗೆ ಆರೋಗ್ಯ, ಸಂತತಿ, ಆಯುಷ್ಯಾದಿಗಳು ದೊರಕುವವು; ಇದಲ್ಲದೆ, ಅವರ ಕಾಮನೆಗಳೆಲ್ಲ ಪರಿಪೂರ್ಣವಾಗುವವು. ನಿಮ್ಮ

ಸ್ತೋತ್ರವು ಎಲ್ಲರಿಗೂ ಸಕಲಾಭೀಷ್ಟಪ್ರದವಾಗಿರುವದು; ಮತ್ತು ಸರ್ವಸಿದ್ಧಿಗಳನ್ನು ಕೊಡುವದು. ನೀವು ನಿಶ್ಚಿಂತರಾಗಿ ಇರಬೇಕು. ನಿಮ್ಮ ಭಯದ ಕಾರಣವನ್ನು ನಾನು ಬಲ್ಲೆನು. ನಿಮಗೆ ಪೀಡಿಸುವ ಶುಂಭಾದಿ ದೈತ್ಯರನಾಶವನ್ನು ಮಾಡಿ ನೀವು ಸುಖದಿಂದ ಇರುವಂತೆ ಮಾಡುವೆನು.'' ಎಂದು ಅವರಿಗೆ ಅಭಯವನ್ನು ಕೊಟ್ಟು, ಲೋಕಕ್ಕೆ ಕಲ್ಯಾಣಮಾಡುವ ಶಂಕರಿಯು ಬ್ರಹ್ಮದೇವನನ್ನು ಕರೆದು—ನೀನು ಏಕಾಗ್ರಮನಸ್ಸಿನಿಂದ ಯಜ್ಞವನ್ನು ಮಾಡು, ಎಂದು ಹೇಳಿದಳು ಹಾಗೇ ಆಗ ಲೆಂದು ಬ್ರಹ್ಮದೇವನು ತನ್ನ ಪತ್ನಿಯೊಡನೆ ಯಜ್ಞಕ್ಕೆ ಪ್ರಾರಂಭ ಮಾಡಿದನು. ಈ ತೈಲತೀರ್ಥದ ಸಮೀಪದಲ್ಲಿಯೇ ಯಜ್ಞಕುಂಡದ ಮಂಟಪವನ್ನು ರಚಿಸಿದರು. ಆ ಬ್ರಹ್ಮದೇವನ ಯಜ್ಞದಲ್ಲಿ ಕಶ್ಯಪನು ಹೋತೃಕೆಲಸಕ್ಕೆ ನಿಯಮಿಸಲ್ಪಟ್ಟನು; ಗಾಲವನು ಋತ್ವಿಜನಾದನು; ವಸಿಷ್ಠನು ಸಾಮವೇದ ಪಾಠಕ (ಉದ್ಗಾತೃ) ನಾದನು; ವಿಶ್ವಾಮಿತ್ರ ಋಷಿಯು ಪ್ರಶೋತೃ (ಪ್ರವರ್ತಕ) ನಾದನು; ಅಧ್ವರ್ಯುರ್ವಿನ ಕಾರ್ಯಕ್ಕೆ ಜಮದಗ್ನಿಯು ನಿಯಮಿಸಲ್ಪಟ್ಟನು. ಪರಾಶರನು ಉಪದೃಷ್ಟವಾಗಿ (ಸಾಕ್ಷಿತ್ವದ) ನಿಯಮಿಸಲ್ಪಟ್ಟನು. ಪ್ರತ್ಯುತ್ತರ ಕೊಡುವ (ಪ್ರತಿವಕ್ತೃವಿನ) ಕೆಲಸಕ್ಕೆ ಒಬ್ಬನನ್ನು ನಿಯಮಿಸಿ ಬ್ರಹ್ಮನು ಯಜ್ಞಕ್ಕೆ ಪ್ರಾರಂಭ ಮಾಡಿದನು. ಎಲ್ಲ ದೇವತೆಗಳೂ ಇಂದ್ರನಿಂದ ಸಹಿತವಾಗಿ ಯಜ್ಞವನ್ನು ನೋಡಲಿಕ್ಕೆ ಬಂದರು. ಋಷಿಗಳೂ ದೇವಕನ್ನಿಕೆಯರೂ, ಸಹ ಯಜ್ಞಕ್ಕೆ ಬಂದಿದ್ದರು. ದೇವತೆಗಳೆಲ್ಲರು ಬರಲು ಬ್ರಹ್ಮನು ಯಜ್ಞ ಸಂರಕ್ಷಣಾರ್ಥವಾಗಿ ದೇವಿಯ ಧ್ಯಾನ ಮಾಡತೊಡಗಿದನು. ''ಹೇ ಜಗನ್ಮಾತೆಯೇ, ಆದಿಮಾತೆಯೇ, ಮೊದಲು ನಿತ್ಯವಾದ ಬ್ರಹ್ಮ ವಸ್ತುವು ಇದ್ದು, ಅದಕ್ಕೆ ನಿನ್ನ ಸಾನ್ನಿಧ್ಯದಿಂದ ಮೂರು ರೂಪಗಳಾದವು. ಒಂದಕ್ಕೆ ಬ್ರಹ್ಮದೇವನೆಂತಲೂ, ಮತ್ತೊಂದಕ್ಕೆ ವಿಷ್ಣುವೆಂತಲೂ, ಮೂರನೆಯದಕ್ಕೆ ಮಹೇಶ್ವರನೆಂತಲೂ ಹೆಸರುಗಳು ಬಂದವು. ಈ ಮೂರೂ ರೂಪಗಳು ಕ್ರಮವಾಗಿ ರಜೋಗುಣ, ಸತ್ವಗುಣ, ತಮೋಗುಣಗಳನ್ನು ಅಂಗೀಕರಿಸಿದವು. ಸಕಲರ ಹೃದಯದಲ್ಲಿರುವ ತತ್ವವನ್ನು ನೀನು ತಿಳಿಯುತ್ತೀ; ಹೇ ಜಗನ್ಮಾತೆಯೇ, ಸದಯ ಹೃದಯವುಳ್ಳವಳೇ ನಿನ್ನನ್ನು ಸ್ತುತಿಸಲು ಯಾರು ಸಮರ್ಥರಿರುವರು! ಯಜ್ಞವನ್ನು ರಕ್ಷಿಸಿ, ಅದನ್ನು ಪವಿತ್ರವಾಗ ಮಾಡು; ಹೇ ದೇವಿಯೇ, ಸದ್ಭಕ್ತರಿಗೆ ಕಲ್ಪ ವೃಕ್ಷದಂತಿರುವ ನೀನು ಪರಮೇಶ್ವರನ ಕಂಠಭೂಷಣಳಾಗಿರುವಿ. ಕೇಯೂರ, ಸುವರ್ಣಮಯ, ಕಟಕ, ಪ್ರಕಾಶಮಾನವಾದ ಕಂಕಣ ಇವುಗಳಿಂದ

ವಿಭೂಷಿತೆಯಾದ ದೇವಿಯೇ ಸಂಸಾರಸಾಗರದಲ್ಲಿ ನಾನು ಬಿದ್ದಿರುವೆನು. ಅದರೊಳಗಿಂದ ಮೇಲಕ್ಕೆ ಏಳಲಿಕ್ಕೆ ನನಗೆ ಆಧಾರವು ಬೇಕಾಗಿರುವದು; ಆದ್ದರಿಂದ ನಿನ್ನ ಕರವೆಂಬ ಕೋಲನ್ನು ನನಗೆ ಕೊಡು.'' ಈ ಸ್ತೋತ್ರವನ್ನು ಕೇಳಿ ಸರ್ವ ವ್ಯಾಪಕಳೂ ಬ್ರಹ್ಮನ ಹೃದಯವನ್ನು ತಿಳಿದವಳೂ ಆದ ದೇವಿಯು ಯಜ್ಞರೂಪವನ್ನು ತಾಳಿ ನವಕೋಟಿ ಸಖಿಯರು ಬ್ರಹ್ಮಾದಿ ಮಾತೃಗಳು ಇವರೊಡನೆ ಯಜ್ಞ ಮಂಟಪದಲ್ಲಿ ಪ್ರಕಟಳಾದಳು. ಶ್ರೀ ದೇವಿಯು ಬಂದದ್ದನ್ನು ನೋಡಿ ಬ್ರಹ್ಮನಿಗೆ ಆನಂದವಾಯಿತು. ಅವನು ಸಂಭ್ರಮದಿಂದ ಒಂದು ಕುಂಡವನ್ನು ಉತ್ತಮವಾದ ಚಂಪಕ ತೈಲದಿಂದ ತುಂಬಿದನು; ಮತ್ತು ಹರಿದ್ರಾತೀರ್ಥದ ಹಿಂಭಾಗದಲ್ಲಿ ಅರಿಷಿಣದಿಂದ ಮತ್ತೊಂದು ಕುಂಡವನ್ನು ತುಂಬಿದನು. ಕಸ್ತೂರಿ, ಕುಂಕುಮ, ಸುಗಂಧದ್ರವ್ಯ ಇವುಗಳನ್ನು ಯಥಾಪ್ರಕಾರವಾಗಿ ವ್ಯವಸ್ಥೆಯಿಂದ ಸಿದ್ಧಮಾಡಿಟ್ಟು ಯಜ್ಞವನ್ನು ಮುಗಿಸಿದನು. ಬಳಿಕ ತುಳಸೀ ಕೂಟದ ಸಮೀಪದಲ್ಲಿ ತ್ರಿವೇಣೀ ಸಂಗಮದಿಂದ ಜಲವನ್ನು ತಂದು ದೇವತೆಗಳೆಲ್ಲರೂ ಅವಭೃತಸ್ನಾನಕ್ಕೆ ತತ್ಪರರಾದರು. ಕುಲಕುಂಭೆಯೇ ಯಮುನೆಯು; ಮಲಾಪಹಾರಿಯೇ, ಗಂಗೆಯು; ಸರಸ್ವತಿ ಹಳ್ಳವು ಸರಸ್ವತಿಯು; ಹೀಗೆ ತ್ರಿವೇಣಿ ಸಂಗಮವಾಯಿತು. ಯಥೇಷ್ಟವಾಗಿ ಜಲವನ್ನು ತಂದು ಜಯ ಶಬ್ದವನ್ನು ಉಚ್ಚರಿಸುತ್ತ ಯಜ್ಞಸಂಬಂಧವಾದ ಜಲವನ್ನು ಸಿದ್ಧಮಾಡಿದರು. ಬಳಿಕ ಕಶ್ಯಪಾದಿ ಮುನಿಗಳು ಸಕಲ ದೇವತೆಗಳು ಸುವಾಸಿನಿಯರು ಇವರೊಡನೆ ಶಂಕರಿಗೂ ಬ್ರಹ್ಮದೇವನಿಗೂ 'ಅಪ'' ಲಿಂಗೋಕ್ತ ಮಂತ್ರಗಳಿಂದಲೂ ಶಾರದೆಯ ಸೂಕ್ತಿಗಳಿಂದಲೂ ಅವಭೃತಾಭಿಷೇಕವನ್ನು ಮಾಡಿದರು. ಅರಿಶಿನ ಪುಡಿಯಿಂದ ಮಿಶ್ರಿತವಾದ ಎಣ್ಣೆಯನ್ನು ದೇವಿಗೆ ಹಚ್ಚಿ ಸ್ನಾನ ಮಾಡಿಸಿದ ಬಳಿಕ ದೇವತೆಗಳೆಲ್ಲರು ಸ್ನಾನಮಾಡಿ ಕಸ್ತೂರಿ ಚಂದನಗಳನ್ನು ಒಬ್ಬರಿಗೊಬ್ಬರು ಲೇಪನಮಾಡಿದರು ಅದರಲ್ಲಿಯೂ ವಿಶೇಷವಾಗಿ ಶ್ರೀ ಶಂಕರೀದೇವಿಗೆ ಉತ್ತಮವಾದ ಕಸ್ತೂರಿಚಂದನವನ್ನು ಹಚ್ಚಿದರು. ದೇವಿಯ ದೇಹದ ಮಲವು ತೊಳೆದು ಹೊರಬಿದ್ದು ಕುಂಕುಮ ಅರಿಶಿನಾದಿಗಳಿಂದ ಕೆಂಪಾಗಿಯೂ ಸುಗಂಧವೂ ಪವಿತ್ರವೂ ಆದ ಹರಿಯುವ ನೀರನ್ನು ಅಮೃತವೆಂದು ತಿಳಿದು ಎಲ್ಲರೂ ತಕ್ಕೊಂಡರು. ಬಳಿಕ ಬ್ರಹ್ಮಾದಿ ಮಹಾದೇವತೆಗಳು, ದೇವಿಯ ನವಕೋಟಿ ಸಖಿಯರಿಂದ ಸಮೇತರಾದ ಶಚೀದೇವಿ ಮೊದಲಾದವರು, ದೇವಸ್ತ್ರೀಯರು ಇವರೆಲ್ಲರು ಅವಭೃತಸ್ನಾನಮಾಡಿ ದಿವ್ಯವಸ್ತ್ರಗಳನ್ನುಟ್ಟುಕೊಂಡು ದಿವ್ಯಗಂಧಾನುಲೇಪನಮಾಡಿಕೊಂಡು, ದೇವಿಗೆ ಹಚ್ಚಿ ಉಳಿದ ಅರಿಷಿಣ ಕುಂಕುಮವನ್ನು ಧರಿಸಿ, ಶೇಷಹೋಮ

ವನ್ನು ಮಾಡಿದರು. ಬಳಿಕ ದೇವತೆಗಳು ಕಶ್ಯಪಾದಿ ಮಹಾಮುನಿಗಳ ಹಾಗು ಬ್ರಾಹ್ಮಣರ ಪೂಜೆಯನ್ನು ಮಾಡಿ ಶಂಕರೀ ಪೂಜೆಯನ್ನು ಮಾಡಿದರು. ಗಂಧ ಮಾಲೆ, ವಸ್ತ್ರಾಲಂಕಾರ, ದೋತರ, ಕರ್ಣಭೂಷಣ, ಆಕಳು, ಭೂಮಿ, ಹಿರಣ್ಯ ಮೊದಲಾದವುಗಳನ್ನು ಬ್ರಾಹ್ಮಣೋತ್ತಮರಿಗೆ ಕೊಟ್ಟು ಅವರಿಂದ ಆಶೀರ್ವಾದ ಗಳನ್ನು ತಕ್ಕೊಂಡರು. ಆ ಸಮಯದಲ್ಲಿ ದುರ್ಗಾಸುರನೆಂಬ ರಾಕ್ಷಸನು ಅಲ್ಲಿ ಕೂಡಿದ ಸ್ತ್ರೀಯರ ಸಮುದಾಯವನ್ನು ನೋಡಿ, ಕೋಟ್ಯವಧಿ ದೈತ್ಯರ ಸಂಘಗ ಳೊಡನೆ ಗಜ, ರಥ, ಕುದುರೆ, ಕಾಲಾಳು ಮೊದಲಾದವುಗಳಿಂದ ಕೂಡಿದ ಚತುರಂಗ ಬಲ, ಅನೇಕವಾದ್ಯಗಳು, ಆಯುಧಗಳು ಇವುಗಳನ್ನು ತೆಗೆದುಕೊಂಡು ಬಂದನು. ಅವನ ವಾದ್ಯಗಳ ಶಬ್ದದಿಂದ ಜಗತ್ತೆಲ್ಲ ತುಂಬಿಹೋಯಿತು. ಇತ್ತ ಮಾತೃಕಾ ಗಣಗಳೂ, ದೇವತೆಗಳೂ ಕವಚಾಸ್ತ್ರಗಳನ್ನು ತಕ್ಕೊಂಡುಸನ್ನದ್ಧರಾದರು. ಅವರು "ಇದೇನು ಗದ್ದಲವು ಎದ್ದಿರುವದು? ಹೊಡೆಯಿರಿ, ಮುರಿಯಿರಿ, ಕೊಲ್ಲಿರಿ ಎಂದು ಮಾತಾಡುತ್ತ" ಓಡಹತ್ತಿದರು ಸ್ವಲ್ಪ ಹೊತ್ತಿನ ಮೇಲೆ ಘೋರವಾದ ಯುದ್ಧವು ಪ್ರಾರಂಭವಾಯಿತು. ಮುಷ್ಟಿಯುದ್ಧವೂ, ದ್ವಂದ್ವಯುದ್ಧವೂ ನಡೆದವು. ಬಳಿಕ ಇಂದ್ರನು ತನ್ನ ವಜ್ರಾಯುಧವನ್ನು ತಕ್ಕೊಂಡು ಯುದ್ಧಭೂಮಿಗೆ ಹೋದನು. ಹಂಸಾರೂಢಳೂ, ರುದ್ರಾಕ್ಷಮಾಲೆಕಮಂಡಲು ಧಾರಣೆಯುಳ್ಳದ ಬ್ರಹ್ಮನ ಶಕ್ತಿ ಯಾದ ಶಂಕರಿಯು ತನ್ನ ಸಂಗಡ ಅನ್ಯಶಕ್ತಿಗಳನು ಕರಕೊಂಡು ಮೂರುಲೋಕ ಗಳನ್ನು ರಕ್ಷಿಸುವ ಇಚ್ಛೆಯಿಂದ ಯುದ್ಧಕ್ಕೆ ಹೊರಟಳು. ಆಗ ದೇವತೆಗಳೆಲ್ಲ ಆಕೆಯನ್ನು ಸ್ತುತಿಸಹತ್ತಿದರು. ಶಂಕರಿಯು ದುರ್ಗಾಸುರನ ಬೆನ್ನು ಹತ್ತಿ ಅವರ ಮೇಲೆ ಹಲ್ಲೆಯನ್ನು ಮಾಡಹತ್ತಿದಳು. ಇತ್ತ ಇಂದ್ರನು ದಾನವರ ಸೈನ್ಯಾಧಿಪನ ಬೆನ್ನು ಹತ್ತಿ ಹೊಡೆಯಹತ್ತಿದನು. ಬಳಿಕ ಆ ದೈತ್ಯ ಸೈನ್ಯದ ಅಧಿಪತಿಯಾದ ರೌದ್ರನು ಅನೇಕ ಕೋಟಿ ಭಟರನ್ನು ತಕ್ಕೊಂಡು ಬಂದನು. ದೇವದೈತ್ಯರ ನಡುವೆ ಪರಮದಾರುಣವಾದ ಸಂಗ್ರಾಮವು ನಡೆಯಿತು. ರುದ್ರರು, ವಸುಗಳು, ಆದಿತ್ಯರು, ದೇವಗಣಗಳು ಇವರೆಲ್ಲರು ದಾನವರ ಸಂಗಡ ಯುದ್ಧಮಾಡುತ್ತಿದ್ದರು. ದೇವೇಂ ದ್ರನು ವಜ್ರವನ್ನು ತಕ್ಕೊಂಡು ಅಸುರರ ಸೈನ್ಯಕ್ಕೆ ಪ್ರಹಾರಮಾಡಿದನು. ಯಮಾದಿ ಲೋಕಪಾಲಕರು ತಮ್ಮ ತಮ್ಮ ಆಯುಧಗಳನ್ನು ತಕ್ಕೊಂಡು ದೈತ್ಯಸಂಘವನ್ನು ಸಂಹರಿಸುತ್ತಿದ್ದರು. ದೇವತೆಗಳ ಶಸ್ತ್ರಗಳ ಪ್ರಹಾರಗಳನ್ನು ನೋಡಿ, ದಾನವರು ಓಡಿಹೋಗಲಿಕ್ಕೆ ಉದ್ಯುಕ್ತರಾದರು. ದೇವತೆಗಳಿಂದ ಸಂಹೃತವಾಗುವ ತನ್ನ ಸೈನ್ಯಸಮೂಹವನ್ನು ನೋಡಿ ದುರ್ಗಾಸುರನು ಖೇದಪಟ್ಟು ರಕ್ತಲೋಲನೂ, ರಕ್ತ

ನೇತ್ರನೂ, ರಕ್ತಮುಖನೂ, ರಕ್ತಭೋಜನನೂ, ಆದ ದೈತ್ಯ ಸೇನಾಸಮೂಹಪಾಲಕನನ್ನು ಕಳಿಸಿದನು; ಆಗ ತುಮುಲಯುದ್ಧವು ನಡೆಯಿತು. ರಾಕ್ಷಸರು ಶೂಲ, ಶಕ್ತಿ, ಪರಶ್ವಧ, ನಾಮಾಚ, ಭಲ್ಲ, ನಿಸ್ತ್ರಿಂಶ, ಪಟ್ಟಿಶ, ಮುರ್ಗರ, ಹತ್ತುಸಾವಿರ ಆನೆಗಳ ಬಲವುಳ್ಳ ವಜ್ರಾಯುಧ ಮೊದಲಾದವುಗಳಿಂದ ದೇವಸೈನ್ಯವನ್ನು ಹೊಡೆಯಲಾರಂಭಿಸಿದರು. ಆಗ ದೇವೇಂದ್ರನು ತನ್ನ ವಜ್ರದಿಂದ ದಾನವರ ದಂಡನ್ನು ಕೊಂದನು. ಈ ಪ್ರಕಾರ ತನ್ನ ದೈತ್ಯಬಂಧುಗಳು ಹತರಾದದ್ದನ್ನು ನೋಡಿ ಚತುರನೂ, ವಿಕ್ರಮಶಾಲಿಯೂ ಆದ ದುರ್ಗಾಸುರನು, ಕೋಟಿಸಂಖ್ಯಾಕ ರಾಕ್ಷಸರನ್ನು ಪುನಃ ಸಮರಕ್ಕೆ ಕಳಿಸಿದನು. ಆದರೆ ಬ್ರಾಹ್ಮ್ಯಾದಿ ಮಾತೃಕೆಯರು ತಮ್ಮ ತೇಜಸ್ಸಿನಿಂದ ಆ ಕೋಟಿ ರಾಕ್ಷಸರನ್ನು ಸಂಹರಿಸಿದರು; ಕೋಟಿ ಸಂಖ್ಯಾಕ ರಾಕ್ಷಸರು ಸತ್ತು ಬಿದ್ದದ್ದನ್ನು ನೋಡಿ ದುರ್ಗಾಸುರನು ನೂರುಕೋಟಿ ದಾನವಪರಿವಾರವನ್ನು ಕರಕೊಂಡು ತಾನೇ ಎದುರಾದನು. ಆಗ ಅವನು ಎರಡನೆಯ ಯಮನಂತೆ ಕಂಡನು. ಕಡಿ, ಹೊಡಿ, ಕೊಲ್ಲು ಎಂದು ಒದರುತ್ತ ಆರಾಕ್ಷಸರು ಮಳೆಗಾಲದಲ್ಲಿ ಮೇಘಗಳು ಪರ್ವತಗಳ ಮೇಲೆ ನೀರನ್ನು ಸುರಿಸುವಂತೆ ದೇವ ಸೈನ್ಯದ ಮೇಲೆ ಶಸ್ತ್ರಾಸ್ತ್ರಗಳ ಮಳೆಯನ್ನು ಕರೆದರು. ಬ್ರಹ್ಮಾದಿ ದೇವತೆಗಳು ಸೋತದ್ದನ್ನೂ ದುರ್ಗಾಸುರನೇ ಯುದ್ಧಕ್ಕೆ ಬಂದದ್ದನ್ನೂ ನೋಡಿ ರುದ್ರನಿಗೆ ಅತ್ಯಂತ ಕೋಪವು ಬಂದಿತು. ರುದ್ರನು ಸಿಟ್ಟಿಗೆದ್ದದ್ದನ್ನು ನೋಡಿ ಶೂಲಪಾಣಿಯಾದ ರುದ್ರಗಣವು ದುರ್ಗಾಸುರನ ಸೈನ್ಯದ ಸಂಗಡ ಯುದ್ಧ ಮಾಡತೊಡಗಿತು, ನಂದಿ, ಶೃಂಗಿ, ಭೃಂಗಿ, ಮೊದಲಾದವರು ದೈತ್ಯರ ಸಂಗಡ ರಣದಲ್ಲಿ ಬಹು ಪರಾಕ್ರಮದಿಂದ ಹೋರಾಡಿದರು; ಆದರೆ ಆ ಪಾಪಾತ್ಮನಾದ ದುರ್ಗಾಸುರನು ಆ ರುದ್ರಗಣಗಳನ್ನು ಹೊಡೆದು ಕೆಡವಿದನು. ಅದನ್ನು ನೋಡಿ ಮಹೇಶ್ವರನು ಸಿಟ್ಟಿಗೆದ್ದು ಶೀಘ್ರವಾಗಿ ತನ್ನ ಶೂಲಾಯುಧವನ್ನು ತಕ್ಕೊಂಡು ಯುದ್ಧಕ್ಕೆ ಬಂದನು. ರುದ್ರನು ತನ್ನ ಕಡೆಗೆ ಬರುವದನ್ನು ನೋಡಿ ದುರ್ಗಾಸುರನು ಮೇಘಗಳಿಂದ ಸೂರ್ಯನು ಮುಚ್ಚಲ್ಪಡುವಂತೆ ತೀಕ್ಷ್ಣವೂ, ಘನವೂ ಆದ ಬಾಣಗಳಿಂದ ರುದ್ರನನ್ನು ಮುಚ್ಚಿದನು; ಆದರೆ ರುದ್ರನು ತನ್ನ ಶೂಲದಿಂದ ಮೊನೆಯಾದ ಆ ಬಾಣಗಳನ್ನು ಛೇದಿಸಿದನು.

ಬಳಿಕ ಆ ಅಮಿತವಿಕ್ರಮನಾದ ಮಹೇಶ್ವರನು ದುರ್ಗಾದೈತ್ಯನ ಹೃದಯದಲ್ಲಿ ಶೂಲದಿಂದ ಹೊಡೆದನು. ಹೀಗೆ ಮಹಾರುದ್ರನು ದುರ್ಗಾಸುರನನ್ನು ಅನೇಕ ಬಾಣಗಳಿಂದ ನಾಶಮಾಡಿದಾಗ್ಯೂ ಅವನು ಪುನಃ ಪುನಃ ಏಳುವನು

ವನ್ನು ಮಾಡಿದರು. ಬಳಿಕ ದೇವತೆಗಳು ಕಶ್ಯಪಾದಿ ಮಹಾಮುನಿಗಳ ಹಾಗು ಬ್ರಾಹ್ಮಣರ ಪೂಜೆಯನ್ನು ಮಾಡಿ ಶಂಕರೀ ಪೂಜೆಯನ್ನು ಮಾಡಿದರು. ಗಂಧ ಮಾಲೆ, ವಸ್ತ್ರಾಲಂಕಾರ, ದೋತರ, ಕರ್ಣಭೂಷಣ, ಆಕಳು, ಭೂಮಿ, ಹಿರಣ್ಯ ಮೊದಲಾದವುಗಳನ್ನು ಬ್ರಾಹ್ಮಣೋತ್ತಮರಿಗೆ ಕೊಟ್ಟು ಅವರಿಂದ ಆಶೀರ್ವಾದ ಗಳನ್ನು ತಕ್ಕೊಂಡರು. ಆ ಸಮಯದಲ್ಲಿ ದುರ್ಗಾಸುರನೆಂಬ ರಾಕ್ಷಸನು ಅಲ್ಲಿ ಕೂಡಿದ ಸ್ತ್ರೀಯರ ಸಮುದಾಯವನ್ನು ನೋಡಿ, ಕೋಟ್ಯವಧಿ ದೈತ್ಯರ ಸಂಘಗ ಳೊಡನೆ ಗಜ, ರಥ, ಕುದುರೆ, ಕಾಲಾಳು ಮೊದಲಾದವುಗಳಿಂದ ಕೂಡಿದ ಚತುರಂಗ ಬಲ, ಅನೇಕವಾದ್ಯಗಳು, ಆಯುಧಗಳು ಇವುಗಳನ್ನುತೆಗೆದುಕೊಂಡು ಬಂದನು. ಅವನ ವಾದ್ಯಗಳ ಶಬ್ದದಿಂದ ಜಗತ್ತೆಲ್ಲ ತುಂಬಿಹೋಯಿತು. ಇತ್ತ ಮಾತೃಕಾ ಗಣಗಳೂ, ದೇವತೆಗಳೂ ಕವಚಾಸ್ತ್ರಗಳನ್ನು ತಕ್ಕೊಂಡುಸನ್ನದ್ಧರಾದರು. ಅವರು "ಇದೇನು ಗದ್ದಲವು ಎದ್ದಿರುವದು? ಹೊಡೆಯಿರಿ, ಮುರಿಯಿರಿ, ಕೊಲ್ಲಿರಿ ಎಂದು ಮಾತಾಡುತ್ತ" ಓಡಹತ್ತಿದರು ಸ್ವಲ್ಪಹೊತ್ತಿನ ಮೇಲೆ ಘೋರವಾದ ಯುದ್ಧವು ಪ್ರಾರಂಭವಾಯಿತು. ಮುಷ್ಟಿಯುದ್ಧವೂ, ದ್ವಂದ್ವಯುದ್ಧವೂ ನಡೆದವು. ಬಳಿಕ ಇಂದ್ರನು ತನ್ನ ವಜ್ರಾಯುಧವನ್ನು ತಕ್ಕೊಂಡು ಯುದ್ಧಭೂಮಿಗೆ ಹೋದನು. ಹಂಸಾರೂಢಳೂ, ರುದ್ರಾಕ್ಷಮಾಲೆಕಮಂಡಲು ಧಾರಣೆಯುಳ್ಳದ ಬ್ರಹ್ಮನ ಶಕ್ತಿ ಯಾದ ಶಂಕರಿಯು ತನ್ನ ಸಂಗಡ ಅನ್ಯಶಕ್ತಿಗಳನು ಕರಕೊಂಡು ಮೂರುಲೋಕ ಗಳನ್ನು ರಕ್ಷಿಸುವ ಇಚ್ಛೆಯಿಂದ ಯುದ್ಧಕ್ಕೆ ಹೊರಟಳು. ಆಗ ದೇವತೆಗಳೆಲ್ಲ ಆಕೆಯನ್ನು ಸ್ತುತಿಸಹತ್ತಿದರು. ಶಂಕರಿಯು ದುರ್ಗಾಸುರನ ಬೆನ್ನು ಹತ್ತಿ ಅವರ ಮೇಲೆ ಹಲ್ಲೆಯನ್ನು ಮಾಡಹತ್ತಿದಳು. ಇತ್ತ ಇಂದ್ರನು ದಾನವರ ಸೈನ್ಯಾಧಿಪನ ಬೆನ್ನು ಹತ್ತಿ ಹೊಡೆಯಹತ್ತಿದನು. ಬಳಿಕ ಆ ದೈತ್ಯ ಸೈನ್ಯದ ಅಧಿಪತಿಯಾದ ರೌದ್ರನು ಅನೇಕ ಕೋಟಿ ಭಟರನ್ನು ತಕ್ಕೊಂಡು ಬಂದನು. ದೇವದೈತ್ಯರ ನಡುವೆ ಪರಮದಾರುಣವಾದ ಸಂಗ್ರಾಮವು ನಡೆಯಿತು. ರುದ್ರರು, ವಸುಗಳು, ಆದಿತ್ಯರು, ದೇವಗಣಗಳು ಇವರೆಲ್ಲರು ದಾನವರ ಸಂಗಡ ಯುದ್ಧಮಾಡುತ್ತಿದ್ದರು. ದೇವೇಂ ದ್ರನು ವಜ್ರವನ್ನು ತಕ್ಕೊಂಡು ಅಸುರರ ಸೈನ್ಯಕ್ಕೆ ಪ್ರಹಾರಮಾಡಿದನು. ಯಮಾದಿ ಲೋಕಪಾಲಕರು ತಮ್ಮ ತಮ್ಮ ಆಯುಧಗಳನ್ನು ತಕ್ಕೊಂಡು ದೈತ್ಯಸಂಘವನ್ನು ಸಂಹರಿಸುತ್ತಿದ್ದರು. ದೇವತೆಗಳ ಶಸ್ತ್ರಗಳ ಪ್ರಹಾರಗಳನ್ನು ನೋಡಿ, ದಾನವರು ಓಡಿಹೋಗಲಿಕ್ಕೆ ಉದ್ಯುಕ್ತರಾದರು. ದೇವತೆಗಳಿಂದ ಸಂಹೃತವಾಗುವ ತನ್ನ ಸೈನ್ಯಸಮೂಹವನ್ನು ನೋಡಿ ದುರ್ಗಾಸುರನು ಖೇದಪಟ್ಟು ರಕ್ತಲೋಲನೂ, ರಕ್ತ

ನೇತ್ರನೂ, ರಕ್ತಮುಖನೂ, ರಕ್ತಭೋಜನನೂ, ಆದ ದೈತ್ಯ ಸೇನಾಸಮೂಹಪಾಲಕನನ್ನು ಕಳಿಸಿದನು; ಆಗ ತುಮುಲಯುದ್ಧವು ನಡೆಯಿತು. ರಾಕ್ಷಸರು ಶೂಲ, ಶಕ್ತಿ, ಪರಶ್ವಧ, ನಾರಾಚ, ಭಲ್ಲೆ, ನಿಸ್ತ್ರಿಂಶ, ಪಟ್ಟಿಶ, ಮುದ್ಗರ, ಹತ್ತುಸಾವಿರ ಆನೆಗಳ ಬಲವುಳ್ಳ ವಜ್ರಾಯುಧ ಮೊದಲಾದವುಗಳಿಂದ ದೇವಸೈನ್ಯವನ್ನು ಹೊಡೆಯಲಾರಂಭಿಸಿದರು. ಆಗ ದೇವೇಂದ್ರನು ತನ್ನ ವಜ್ರದಿಂದ ದಾನವರ ದಂಡನ್ನು ಕೊಂದನು. ಈ ಪ್ರಕಾರ ತನ್ನ ದೈತ್ಯಬಂಧುಗಳು ಹತರಾದದ್ದನ್ನು ನೋಡಿ ಚತುರನೂ, ವಿಕ್ರಮಶಾಲಿಯೂ ಆದ ದುರ್ಗಾಸುರನು, ಕೋಟಿಸಂಖ್ಯಾಕ ರಾಕ್ಷಸರನ್ನು ಪುನಃ ಸಮರಕ್ಕೆ ಕಳಿಸಿದನು. ಆದರೆ ಬ್ರಾಹ್ಮ್ಯಾದಿ ಮಾತೃಕೆಯರು ತಮ್ಮ ತೇಜಸ್ಸಿನಿಂದ ಆ ಕೋಟಿ ರಾಕ್ಷಸರನ್ನು ಸಂಹರಿಸಿದರು; ಕೋಟಿ ಸಂಖ್ಯಾಕ ರಾಕ್ಷಸರು ಸತ್ತು ಬಿದ್ದದ್ದನ್ನು ನೋಡಿ ದುರ್ಗಾಸುರನು ನೂರುಕೋಟಿ ದಾನವಪರಿವಾರವನ್ನು ಕರಕೊಂಡು ತಾನೇ ಎದುರಾದನು. ಆಗ ಅವನು ಎರಡನೆಯ ಯಮನಂತೆ ಕಂಡನು. ಕಡಿ, ಹೊಡಿ, ಕೊಲ್ಲು ಎಂದು ಒದರುತ್ತ ಆರಾಕ್ಷಸರು ಮಳೆಗಾಲದಲ್ಲಿ ಮೇಘಗಳು ಪರ್ವತಗಳ ಮೇಲೆ ನೀರನ್ನು ಸುರಿಸುವಂತೆ ದೇವ ಸೈನ್ಯದ ಮೇಲೆ ಶಸ್ತ್ರಾಸ್ತ್ರಗಳ ಮಳೆಯನ್ನು ಕರೆದರು. ಬ್ರಹ್ಮಾದಿ ದೇವತೆಗಳು ಸೋತದ್ದನ್ನೂ ದುರ್ಗಾಸುರನೇ ಯುದ್ಧಕ್ಕೆ ಬಂದದ್ದನ್ನೂ ನೋಡಿ ರುದ್ರನಿಗೆ ಅತ್ಯಂತ ಕೋಪವು ಬಂದಿತು. ರುದ್ರನು ಸಿಟ್ಟಿಗೆದ್ದದ್ದನ್ನು ನೋಡಿ ಶೂಲಪಾಣಿಯಾದ ರುದ್ರಗಣವು ದುರ್ಗಾಸುರನ ಸೈನ್ಯದ ಸಂಗಡ ಯುದ್ಧ ಮಾಡತೊಡಗಿತು, ನಂದಿ, ಶೃಂಗಿ, ಭೃಂಗಿ, ಮೊದಲಾದವರು ದೈತ್ಯರ ಸಂಗಡ ರಣದಲ್ಲಿ ಬಹು ಪರಾಕ್ರಮದಿಂದ ಹೋರಾಡಿದರು; ಆದರೆ ಆ ಪಾಪಾತ್ಮನಾದ ದುರ್ಗಾಸುರನು ಆ ರುದ್ರಗಣಗಳನ್ನು ಹೊಡೆದು ಕೆಡವಿದನು. ಅದನ್ನು ನೋಡಿ ಮಹೇಶ್ವರನು ಸಿಟ್ಟಿಗೆದ್ದು ಶೀಘ್ರವಾಗಿ ತನ್ನ ಶೂಲಾಯುಧವನ್ನು ತಕ್ಕೊಂಡು ಯುದ್ಧಕ್ಕೆ ಬಂದನು. ರುದ್ರನು ತನ್ನಕಡೆಗೆ ಬರುವದನ್ನು ನೋಡಿ ದುರ್ಗಾಸುರನು ಮೇಘಗಳಿಂದ ಸೂರ್ಯನು ಮುಚ್ಚಲ್ಪಡುವಂತೆ ತೀಕ್ಷ್ಣವೂ, ಘನವೂ ಆದ ಬಾಣಗಳಿಂದ ರುದ್ರನನ್ನು ಮುಚ್ಚಿದನು; ಆದರೆ ರುದ್ರನು ತನ್ನ ಶೂಲದಿಂದ ಮೊನೆಯಾದ ಆ ಬಾಣಗಳನ್ನು ಭೇದಿಸಿದನು.

ಬಳಿಕ ಆ ಅಮಿತವಿಕ್ರಮನಾದ ಮಹೇಶ್ವರನು ದುರ್ಗಾದೈತ್ಯನ ಹೃದಯದಲ್ಲಿ ಶೂಲದಿಂದ ಹೊಡೆದನು. ಹೀಗೆ ಮಹಾರುದ್ರನು ದುರ್ಗಾಸುರನನ್ನು ಅನೇಕ ಬಾಣಗಳಿಂದ ನಾಶಮಾಡಿದಾಗ್ಯೂ ಅವನು ಪುನಃ ಪುನಃ ಏಳುವನು.

ಆಗ ದೇವತೆಗಳಿಗೆ ಮಹಾ ಚಿಂತೆಯು ಉತ್ಪನ್ನವಾಯಿತು. ಚಿಂತಾಕ್ರಾಂತರಾದ ದೇವತೆಗಳನ್ನು ನೋಡಿದ ಬಳಿಕ ಲೋಕಕ್ಕೆ ಸುಖಪ್ರದಳಾದ ಶಂಕರಿಯು ದೈತ್ಯರ ಬಾಣಗಳಿಂದ ಬ್ರಹ್ಮ ವಿಷ್ಣು ಮಹೇಶ್ವರರು ಸೂರ್ಯಮಂಡಲದ ವರೆಗೆ ಮುಚ್ಚಲ್ಪಟ್ಟದ್ದನ್ನು ನೋಡಿದಳು, ಮತ್ತು ಕೂಡಲೆ ತನ್ನ ಸಂಗಡ ನವಕೋಟಿ ಸಖಿಯರನ್ನು ಕರಕೊಂಡು ಯುದ್ಧಕ್ಕೆ ಬಂದಳು. ನವಕೋಟಿಸಂಖ್ಯಾಕ ಕಾತ್ಯಾಯನಿಯರು ಮಹಾಗರ್ಜನೆಯನ್ನು ಮಾಡುತ್ತ ಯುದ್ಧದಲ್ಲಿ ಅನೇಕ ರಾಕ್ಷಸರನ್ನು ಕೊಂದು ಅವರ ರಕ್ತಪಾನ ಮಾಡುತ್ತ ನಡೆದರು. ೬೪ ಯೋಗಿನಿಯರೂ ೫೪೪ ಕೋಟಿ ಚಾಮುಂಡಗಣಗಳೂ ದೈತ್ಯರ ರಕ್ತಪಾನವನ್ನು ಮಾಡಿ ಮತ್ತರಾಗಿ ಕುಣಿಯಹತ್ತಿದರು. ಅನಂತರ ದೇವತೆಗಳ ಕೋಪದಿಂದ ದೈತ್ಯನಾಶಕನೂ, ಭಯಂಕರನೂ ಆದ ಭೂತನಾಥನು ಪ್ರಕಟನಾದನು. ಆ ಮಹಾಬಲವುಳ್ಳ ಭೂತನಾಥನು ಸಮರಾಂಗಣದಲ್ಲಿ ನಿಂತು ದೈತ್ಯರಸಂಗಡ ಕಾಳಗಮಾಡಿ ಅತ್ಯಂತ ದಾರುಣಗಳಾದ ಬಾಣಗಳಿಂದ ದೈತ್ಯರನ್ನು ಸಂಹರಿಸಿದನು. ಚಂಡಭೈರವವೀರಾದಿಗಳು ಕಾಲವೇತಾಲದಿಂದ ಕೂಡಿಕೊಂಡು ಅನೇಕ ದೈತ್ಯರನ್ನು ಕೊಂದು ಹತ್ತು ದಿಕ್ಕುಗಳಲ್ಲಿ ಒಗೆದರು.

ಬಳಿಕ ಶಂಕರಿಯು ಅಷ್ಟಬಾಹುಗಳನ್ನು ಧರಿಸಿ ಚಾಪ, ಅಂಕುಶ, ಪಾನಪಾತ್ರ, ಬಾಣ, ತ್ರಿಶೂಲ, ಡಮರು ಖಟ್ವಾಂಗ ಮೊದಲಾದ ಆಯುಧಗಳನ್ನು ತಕ್ಕೊಂಡು ಸಿಂಹಾರೂಢಳಾಗಿ ದುರ್ಗಾಸುರನನ್ನು ಕೊಲ್ಲುವದಕ್ಕಾಗಿ ರಣಭೂಮಿಗೆ ಬಂದಳು. ಮುನಿಗಳು ದೇವತೆಗಳು ನೋಡನೋಡುತ್ತಿರಲು, ದೇವಿಯು ಖಡ್ಗದಿಂದ ದುರ್ಗಾಸುರನನ್ನು ಹೊಡೆದಳು. ಆ ರಾಕ್ಷಸನ ಶಸ್ತ್ರಗಳನ್ನು ವಿಧ್ವಂಸ ಮಾಡಿ ದೇವಿಯು ಪುನಃ ತನ್ನ ಶೂಲದಿಂದ ದುರ್ಗಾಸುರನನ್ನು ಹೊಡೆದಳು, ತನ್ನ ಕಡೆಗೆ ಬರುವ ಶೂಲವನ್ನು ನೋಡಿ ದುರ್ಗಾಸುರನು ಅದನ್ನು ತನ್ನ ಹುಂಕಾರ ಧ್ವನಿಯಿಂದಲೇ ನಿವಾರಣಮಾಡಿದನು; ಬಳಿಕ ದೇವಿಯು ತನ್ನ ಶಕ್ತ್ಯಾಯುಧವನ್ನು ಅವನ ಮೇಲೆ ಬಿಡಲು ಆ ರಾಕ್ಷಸನು ಅದನ್ನು ತನ್ನ ಖಡ್ಗದಿಂದ ಕಡಿದು ಹಾಕಿದನು; ರಾಕ್ಷಸನು ಗದಾಯುಧದಿಂದ ದೇವಿಯನ್ನು ಹೊಡೆಯಲು ದೇವಿಯು ಅದನ್ನು ಚೂರು ಚೂರುಮಾಡಿ ತನ್ನ ಶಕ್ತ್ಯಾಯುಧವನ್ನು ತಕ್ಕೊಂಡು ತಾನೇ ಆ ರಾಕ್ಷಸನ ಹೃದಯದಲ್ಲಿ ಪ್ರವೇಶಿಸಿದಳು. ಮತ್ತು ದೈತ್ಯವಂಶಜನಾದ ದುರ್ಗಾಸುರನನ್ನು ನೂರು ಸಾರೆ ತಿರುಗಿಸಿ ತನ್ನ ಅಸ್ತ್ರದಿಂದ ಅವನನ್ನು ಎಳೆದು ನೆಲಕ್ಕೆ ಕೆಡವಿ ಅವನ ಎದೆಯಮೇಲೆ ಕಾಲನ್ನು ಮೆಟ್ಟಿ ಶೂಲದಿಂದ ಎದೆಯಲ್ಲಿಯೂ ಮೂಗಿ

ನಲ್ಲಿಯೂ ಪ್ರಹಾರ ಮಾಡಹತ್ತಿದಳು. ಇಷ್ಟಾದರೂ ಆ ಮಹಾಸುರನು ಮೃತನಾಗಲಿಲ್ಲ.

## ದೇವತೆಗಳು ದುರ್ಗಾಸುರನಿಗೆ ತೋರಿಸಿದ ದಯೆಯು.

ಬಳಿಕ ಬ್ರಹ್ಮ ವಿಷ್ಣು ಶಂಕರ ಮೊದಲಾದ ದೇವತೆಗಳಲ್ಲಿ ಮುಂದಾಳುವಾದ ರುದ್ರನು "ಹೇ ದೈತ್ಯನೇ, ನಾನು ನಿನ್ನ ಬಲವನ್ನು ಎಷ್ಟೆಂದು ವರ್ಣಿಸಲಿ? ಮೂರು ಲೋಕಗಳನ್ನು ನೀನು ನಿನ್ನ ದೇಹದಲ್ಲಿ ಅಣುಗಳಂತೆ ಧರಿಸಿರುತ್ತೀ; ನಿನ್ನ ದೇಹದ ರೋಮವಿವರದಲ್ಲಿ ದೈತ್ಯರು ಉರುಳಾಡುವರಲ್ಲದೆ ನಿನ್ನ ಶಕ್ತಿಯ ವೇಗದಿಂದ ಬ್ರಹ್ಮಾಂಡಗಳೂ ಅಣುಗಳಂತೆ ವಾಯುಮಾರ್ಗದಲ್ಲಿ ಹಾರಾಡುತ್ತವೆ. ಹೇ ಅಸುರವರ್ಯನೇ, ಸಮರಾಂಗಣದಲ್ಲಿ ನಿನ್ನ ಬಲವನ್ನು ನೋಡಿ ನಾನು ನಿನಗೆ ಆದರದಿಂದ ವರವನ್ನು ಕೊಡುವೆನು, ನೀನು ನಿನ್ನ ಮನಸ್ಸಿನ ಕಲ್ಮಷವನ್ನು ಬಿಟ್ಟು ಉದಾರಚಿತ್ತವುಳ್ಳವನಾಗಿ ನಿನಗೆ ಇಷ್ಟವಾದ ವರವನ್ನು ಬೇಗನೆ ಬೇಡಿಕೋ" ಎಂದು ಹೇಳಿದನು. ಆಗ ದಯಾಪರನಾದ ಮಹಾದೇವನಿಂದ ದುರ್ಗಾಸುರನು ಮುಕ್ತನಾದನು. ಬ್ರಹ್ಮಾದಿ ದೇವತೆಗಳ ಪಾದಪ್ರಹಾರದಿಂದಾದ ದೈತ್ಯನ ದುಃಖವು ನಾಶವಾಯಿತು. ಪರಮಾತ್ಮನ ದರ್ಶನವು ಅವನಿಗೆ ಆದ್ದರಿಂದ ಅವನು ಪರಲೋಕವನ್ನು ನೋಡಿ ಈ ಲೋಕವನ್ನು ಅಲಕ್ಷ್ಯ ಮಾಡಿಬಿಟ್ಟನು. ಆ ಬುದ್ಧಿವಂತನಾದ ರಾಕ್ಷಸನು ಹೆಂಡಿರು ಮಕ್ಕಳು ಮೊದಲಾದವುಗಳಿಂದ ಕೂಡಿದ ಹಾಗೂ ಉಗ್ರದುಃಖವುಳ್ಳ ಕಾಲಪಾಶವನ್ನು ಬಿಟ್ಟು ಪುಣ್ಯಕಾರಕವೂ, ನಿತ್ಯವೂ ಆದ ವರವನ್ನು, ಲೋಕಹಿತಾರ್ಥವಾಗಿ ಬೇಡಿಕೊಂಡನು. ದುರ್ಗಾಸುರನು ಪರಮಾತ್ಮನನ್ನು ಕುರಿತು, ಬೇಡಿಕೊಂಡದ್ದೇನಂದರೆ:— "ಹೇ ಶಂಭುವೇ, ಈ ಲೋಕವು ನನಗೆ ಬೇಡ; ಮೇಲಿನ ಲೋಕವನ್ನು ನಾನು ಇಚ್ಛಿಸುವದಿಲ್ಲ. ನನ್ನ ಕಾಮನೆಗಳನ್ನು ಪೂರ್ಣಮಾಡೆಂದು ನಾನು ಬೇಡುವದಿಲ್ಲ. ಅಥವಾ ಕುದುರೆ, ರಥ, ಸೈನ್ಯಗಳಿಂದ ಸಮೇತವಾದ ಸ್ವಾಮಿತ್ವವನ್ನು ಬೇಡುವದಿಲ್ಲ. ಯಾಕಂದರೆ ಅಧಿಸತ್ಯವಾದರೂ ಕಾಲಗ್ರಸ್ತವೂ, ಕ್ಷಣಭಂಗುರವೂ ಬಹು ದುಃಖಪೂರ್ಣವೂ ಇರುತ್ತದೆ. ರುದ್ರನೇ ಹೆಂಡಿರು ಮಕ್ಕಳು ಮಿತ್ರರನ್ನೂ ಭೂಮಿಯನ್ನೂ ನಿನ್ನಿಂದ ಬೇಡುವದಿಲ್ಲ. ಯಾಕಂದರೆ ಅವು ದುಷ್ಟರಂತೆ ಮಹಾಕ್ರೂರವೂ, ಕ್ಲೇಶದಾಯಕವೂ, ಆಗಿರುತ್ತವೆ; ಐಶ್ವರ್ಯವು ನಷ್ಟವಾದರೆ ನಮಗೆ ತಗಲುವ ಅನೇಕ ದೋಷಗಳು ದೂರವಾಗುವವು. ಯಾವದು ಕ್ಲೇಶ ಬೀಜವಿರು

ವದೋ ಅದನ್ನೇ ನಾವು ನಾಶಮಾಡತಕ್ಕದ್ದು. ಬ್ರಹ್ಮ, ವಿಷ್ಣು, ಈಶ್ವರರ ಯಾವ ಪಾದಾಂಬುಜಗಳು ನಿಃಸಂಗರಾದ ಯೋಗಿಗಳಿಂದ ಅಂತರಂಗದಲ್ಲಿ ಚಿಂತಿಸಲ್ಪಡುತ್ತವೆಯೋ ಅಂಥ ದೇವಶ್ರೇಷ್ಠರ ಆ ಪಾದ ಕಮಲವು ನನಗೆ ಸಿಕ್ಕ ಬಳಿಕ ನಾನು ಬೇಡತಕ್ಕದ್ದೇನು? ಇದಕ್ಕೂ ಹೆಚ್ಚಿನ ಶ್ರೇಯಸ್ಸು ಇನ್ನಾವದು ಇರುವದು?

ಶಿವನೇ ನಿನ್ನ ಸನ್ನಿಧಿಯಲ್ಲಿ ಶ್ರೀ ದೇವೀ ಹಸ್ತದಿಂದ ನನಗೆ ದೊರೆಯುವ ಮೃತ್ಯುವು ಜೀವಿತಕ್ಕಿಂತಲೂ ಅಪೂರ್ವವೆಂದು ನಾನು ತಿಳಿಯುತ್ತೇನೆ. ನಿನ್ನ ಪಾದ ಸ್ಮರಣದಿಂದ ಬಹು ಜನರು ಜನ್ಮ ಮರಣಗಳಿಂದ ಯುಕ್ತವಾದ ಸಂಸಾರ ಸಾಗರವನ್ನು ದಾಟಿರುವರು. ಸಂಸಾರಪಾಶ ವಿಮೋಚನಕ್ಕಾಗಿ ನಾನು ತಪಸ್ಸು ಮಾಡಿ ಅದರ ಸಿದ್ಧಿಗೋಸ್ಕರ ನಿನ್ನ ಪಾದವನ್ನೇ ಅಪೇಕ್ಷಿ ಮಾಡುತ್ತಿರುವೆನು. ನನ್ನ ತಪಸ್ಸು ನಿನ್ನ ಪಾದ ದರ್ಶನದಿಂದ ಈ ಹೊತ್ತು ಸಿದ್ಧಿಸಿತು. ಅಂದಬಳಿಕ ನಾನು ನಿನ್ನ ಬಳಿಯಲ್ಲಿ ಬೇಡುವದೇನದೆ? ಸಂಸಾರವಿಮುಕ್ತಿಗೆ ಇದಕ್ಕೂ ಹೆಚ್ಚಿನ ಸಾಧನವು ಯಾವದಿರುವದು? ಹೇ ದೇವನೇ, ಈ ಕ್ಷೇತ್ರವು ಪ್ರಾಣಿಗಳ ಸರ್ವ ಕಾಮನೆಗಳನ್ನು ಪೂರ್ಣಪಡಿಸಲಿ ಈ ಕ್ಷೇತ್ರವನ್ನು ಸೇವಿಸುವ ನಿಷ್ಕಾಮ ಭಕ್ತರು ಬ್ರಹ್ಮ ಪದವನ್ನು ಹೊಂದಲಿ; ಹಾಗು ಈ ಕ್ಷೇತ್ರವು ಸರ್ವಸ್ತ್ರೀಯರಿಗೂ ಅವರ ಮನೋರಥಗಳನ್ನು ಪೂರೈಸಿಕೊಡಲಿ. ಹೇ ದೇವನೇ, ನೀನು ಮಾನವರಿಗೆ ಸಂತತಿ ಸಂಪತ್ತುಗಳನ್ನು ಕೊಟ್ಟು ಅವರ ಅಭೀಷ್ಟಗಳನ್ನು ಪೂರ್ಣಮಾಡು.''

## —:ರಾಕ್ಷಸನಿಗೆ ವರಪ್ರದಾನ:—

ಈ ಪ್ರಕಾರ ದುರ್ಗಾಸುರನು ಶಿವನನ್ನು ಕುರಿತು ಪ್ರಾರ್ಥಿಸಿದ ಬಳಿಕ ಮಹಾದೇವನು ತೇಜಸ್ವಿನಿಯಾದ ಶಂಕರಿಯನ್ನು ಕುರಿತು, ''ಹೇ ದೇವಿಯೇ ಈ ನೀಚನಾದ ದುರ್ಗಾಸುರನ ಮೇಲೆ ದಯೆಯನ್ನಿಡು. ಸಕಲ ಕೋಪವನ್ನು ಬಿಟ್ಟು ನನ್ನ ಸಲುವಾಗಿ ನೀನು ಆವನಿಗೆ ವರಪ್ರದಳಾಗು. ಶಂಕರಿಯೇ, ನೀನು ಸಾಕ್ಷಾತ್ ಲೋಕಗಳ ಜನನಿಯಿರುತ್ತೀ; ಮಿತ್ರರೂ ಶತ್ರುಗಳೂ ನಿನಗೆ ಸಮಾನರಾಗಿ ಕಾಣುವರು. ಹೇ ಈಶ್ವರೀ, ನೀನು ಲೋಕಗಳ ಕಲ್ಯಾಣಕ್ಕಾಗಿ ಈ ದೈತ್ಯನ ಮೇಲೆ ಕೋಪವನ್ನು ಮಾಡುತ್ತೀ; ನೀನು ಕೋಪದಿಂದ ಹುಬ್ಬುಗಳನ್ನು ಏರಿಸಿದರೆ ಎಲ್ಲ ಲೋಕಗಳು ಒಂದು ಕ್ಷಣದಲ್ಲಿ ನಾಶವಾಗುವವು. ಇಂಥ ಕ್ಷುಲ್ಲಕ ರಾಕ್ಷಸನ ಮೇಲೆ ನೀನು ಸಿಟ್ಟು ಮಾಡುವದು ನಿನಗೆ ಯೋಗ್ಯವಲ್ಲ. ಮೃತ ಹೊಂದಿದ ಮಾನವರಿಗೂ ಸಹ ನೀನು ಭುಕ್ತಿ ಮುಕ್ತಿಗಳನ್ನು ಕೊಡುತ್ತಿರುವಿ;

ಹೇ ದೇವಿಯೇ, ನೀನು ಇವನಿಗಾದರೂ ವರವನ್ನು ಕೊಟ್ಟು ಇವನಿಗೆ ಮುಕ್ತಿಯನ್ನು ಕೊಡು; ಎಂದು ಹೇಳಿದನು. ರುದ್ರನ ಮಾತನ್ನು ಕೇಳಿ ದೇವಿಯು ದಯಾನ್ವಿತಳಾಗಿ ಕೋಪವನ್ನೆಲ್ಲ ತ್ಯಜಿಸಿ ದುರ್ಗಾಸುರನನ್ನು ಕುರಿತು "ಎಲೈ ದೈತ್ಯನೇ ವರವನ್ನು ಬೇಡು; ನಾನು ನಿನಗೆ ವರವನ್ನು ಕೊಡುವದಕ್ಕಾಗಿಯೇ ಬಂದಿರುವೆನು. ದೇವತೆಗಳಿಗೂ ದುರ್ಲಭವಾದ ವರವನ್ನು ನಾನು ನಿನಗೆ ಕೊಡಲು ಸಿದ್ಧಳಾಗಿರುವೆನು. ನೀನು ನನ್ನ ಚರಣಗಳಮೇಲೆ ಬಿದ್ದು ಶರಣು ಬಂದುದರಿಂದ ನಾನು ಸಂತುಷ್ಟಳಾಗಿರುವೆನು. ಎಂದು ಮಾತಾಡಿದಳು. ದೇವಿಯ ಈ ಅಭಯವಚನಗಳನ್ನು ಕೇಳಿ, "ದೇವಿಯೇ, ನಾನು ಲೋಕಕ್ಕೆ ಕಲ್ಯಾಣವಾಗುವ ವರವನ್ನು ಬೇಡುವೆನು. ನನಗೆ ನೀನು ವರವನ್ನು ಕೊಡಲಿಕ್ಕೆಬಂದದ್ದು ನಿಜವಾದರೆ ಈಗ ನಾನು ಬೇಡುವ ವರವನ್ನು ಕೊಡು. ಈ ತೈಲತೀರ್ಥವು ದುರ್ಗಾಸುರನನ್ನು ಕೊಂದ ಶಂಕರೀ ತೀರ್ಥವೆಂಬ ಹೆಸರಿನಿಂದ ಪ್ರಖ್ಯಾತವಾಗಲಿ. ಆಕಾಶದಲ್ಲಿ ಸೂರ್ಯ ಚಂದ್ರರು ಇರುವವರೆಗೆ ನೀನು ಈ ತೀರ್ಥದಲ್ಲಿ ಸರ್ವ ದೇವಗಣಗಳೊಡನೆ ನಿತ್ಯದಲ್ಲಿಯೂ ವಾಸಮಾಡು. ನಿನ್ನ ಹೆಸರಿನಿಂದ ಯಜ್ಞವನ್ನು ಮಾಡುವವರಿಗೂ ಅಲ್ಲಿ ಸ್ನಾನ ತರ್ಪಣ ನಿನ್ನ ಪೂಜನಗಳನ್ನು ಮಾಡುವವರಿಗೂ ಪರಮಗತಿಯು ಆಗಲಿ; ಆ ಮನುಷ್ಯರು ಪುನರ್ಜನ್ಮವು, ಪುನರ್ಮರಣವು ಇವುಗಳಿಂದ ರಹಿತರಾಗಲಿ. ಇಲ್ಲಿ ವಾಸಮಾಡುವ ಪ್ರಾಣಿಗಳ ಮನೋರಥವನ್ನು ನೀನು ಪೂರ್ಣಮಾಡು. ಹೇ ಜಗದೀಶ್ವರೀ, ನೀನು ನಿನ್ನ ದೃಷ್ಟಿಮಾತ್ರದಿಂದಲೇ ದೈತ್ಯರನ್ನು ಭಸ್ಮಮಾಡಿಬಿಡುವಿ. ರಣದಲ್ಲಿ ನಿನ್ನ ದರ್ಶನ ತಕ್ಕೊಂಡ ಶಸ್ತ್ರಪೂತ ವೀರರು ಉತ್ತಮ ಲೋಕಗಳನ್ನು ಹೊಂದಲಿ." ಎಂದು ವರವನ್ನು ಬೇಡಿಕೊಂಡನು. ದೈತ್ಯನು ಈ ಪ್ರಕಾರ ವರವನ್ನು ಬೇಡಿಕೊಂಡ ಬಳಿಕ ಮಹಾದೇವಿಯು ಹಾಗೇ ಆಗಲೆಂದು ಆ ರಾಕ್ಷಸನಿಗೆ ವರವನ್ನು ಕೊಟ್ಟು ಅವನನ್ನು ತನ್ನ ಪಾದಾಗ್ರದಲ್ಲಿ ಅತಿ ಸಿಟ್ಟಿನಿಂದ ಬಾಲಕನು ತಗಣಿಯನ್ನು ವರಿದಂತೆ ಮರ್ದನ ಮಾಡಿದಳು. ಆಗ ದುರ್ಗಾಸುರನು ಮಹಾದೇವಿಯ ಪಾದದಿಂದ ಸಂಹರಿಸಲ್ಪಡಲು, ಅವನ ಅಜ್ಞಾನ ಪಾಶಗಳು ಸಮೂಲವಾಗಿ ನಾಶವಾದವು. ದುರ್ಗಾಸುರನು ಲೋಕದಲ್ಲಿ ಮಹತ್ ಕೀರ್ತಿಯನ್ನು ಪಡೆದನು. ದೇವತೆಗಳೆಲ್ಲ ಅವನನ್ನು ಸ್ತುತಿಸಿದರು. ರಾಕ್ಷಸನು ತಿರುಗಿ ಜನ್ಮಕ್ಕೆ ಬಾರದಂಥ ಪರಮ ಪದವಿಯನ್ನು ಹೊಂದಿದನು. ಮೂರು ಲೋಕಗಳಿಗೆ ತಾಪವನ್ನು ಕೊಡುತ್ತಿದ್ದ ದುರ್ಗಾಸುರನನ್ನು ಕೊಂದ, ಮಹಾದೇವಿಯು ಶಾತಾ

ಯನೀ ಗಣಗಳಿಂದಲೂ ಬ್ರಾಹ್ಮ್ಯಾದಿ ಮಾತೃಕಾಗಣಗಳಿಂದಲೂ, ಕೂಡಿಕೊಂಡು ಸರಸ್ವತೀ ತೀರಕ್ಕೆ ಬಂದು ರುದ್ರೇಶ್ವರ ಲಿಂಗವನ್ನು ಸ್ಥಾಪಿಸಿ, ಎಲ್ಲರಿಗೂ ಮುಕ್ತಿದಾಯಕವೂ, ಮಹಾಶ್ರೇಷ್ಠವೂ ಆದ ರುದ್ರಪಾದವನ್ನು ಸ್ಥಾಪಿಸಿದಳು. ಈ ರುದ್ರೇಶ್ವರನ ದರ್ಶನವನ್ನು ಹೊಂದದವನ ಜನ್ಮವು ನಿರರ್ಥಕವೆಂದು ಹೇಳಬಹುದು. ರುದ್ರನಿಗೆ ಈ ಕ್ಷೇತ್ರಲಿಂಗವು ಪ್ರಿಯವಿದ್ದಷ್ಟು ಕೈಲಾಸವು ಕೂಡ ಪ್ರಿಯವಿರುವದಿಲ್ಲ. ದೇಹದಲ್ಲಿ ಶಿರಸ್ಸು ಶ್ರೇಷ್ಠವಿರುವಂತೆ ಎಲ್ಲ ಲಿಂಗಗಳಲ್ಲಿ ರುದ್ರೇಶ್ವರಲಿಂಗವು ಮಹತ್ತಮವಾಗಿರುವದು. ಸೌರಾಷ್ಟ್ರದಲ್ಲಿ ಸೋಮನಾಥಲಿಂಗ, ಶ್ರೀಶೈಲದಲ್ಲಿ ಮಲ್ಲಿಕಾರ್ಜುನ, ಉಜ್ಜನಿಯಲ್ಲಿ ಮಹಾಕಾಲ, ಓಂಕಾರದಲ್ಲಿ ಅಮರೇಶ್ವರ, ಚಿದಾಭೂಮಿಯಲ್ಲಿ ವೈಜನಾಥ, ದಾರುಕವನದಲ್ಲಿ ನಾಗೇಶ, ಸೇತುಬಂಧನದಲ್ಲಿ ರಾಮೇಶ, ಗೌತಮಿಯಲ್ಲಿ ತ್ರ್ಯಂಬಕೇಶ್ವರ, ಕಾಶಿಯಲ್ಲಿ ವಿಶ್ವೇಶ್ವರ, ಡಾಕಿನಿಯಲ್ಲಿ ಭೀಮಶಂಕರ, ಹಿಮಾಚಲದಲ್ಲಿ ಕೇದಾರೇಶ್ವರ, ಹಂಪಿಯಲ್ಲಿ ವಿರೂಪಾಕ್ಷ, ತಿಲಕವನದಲ್ಲಿ ರುದ್ರೇಶ, ಸಮುದ್ರತೀರದಲ್ಲಿ ಗೋಕರ್ಣೇಶ, ಈ ಪ್ರಕಾರ ಹದಿನಾಲ್ಕು ಮಹಾಲಿಂಗಗಳನ್ನು ಈ ಲೋಕದಲ್ಲಿ ಸ್ಥಾಪಿಸಿ ಇಲ್ಲಿ (ಈ ತೀರ್ಥದಲ್ಲಿ) ಶಿವನು ರುದ್ರರೂಪದಿಂದ ಯಾವಾಗಲೂ ಇರುವನು; ಎಂದು ಆಸ್ಥಾನಕ್ಕೆ ವರವನ್ನು ಕೊಟ್ಟು ಸ್ವಸ್ಥಾನಕ್ಕೆ ತೆರಳಿದಳು.

---

## ೫ ನೆಯ ಅಧ್ಯಾಯ.

### ಮಹಾಕೂಟ-ಶಂಕರೀಕ್ಷೇತ್ರದಲ್ಲಿಯ ತೀರ್ಥಗಳು

---

ಅಗಸ್ತ್ಯನು ತನ್ನ ಪತ್ನಿಯಾದ ಲೋಪಾಮುದ್ರೆಗೆ ಶಂಕರೀಮಾತೆಯ ಕ್ಷೇತ್ರದಲ್ಲಿರುವ ಪುಣ್ಯಕರವೂ, ಸರ್ವಪಾಪಪ್ರಣಾಶಕವೂ ಆದ ತೀರ್ಥಗಳನ್ನು ಹೇಳಿದನು. ಮೊದಲನೆಯದು ಮಾಲೀನೀತೀರ್ಥವು; ಎರಡನೆಯದು ಸರಸ್ವತೀ ತೀರ್ಥವು; ಹರಿದ್ರಾತೀರ್ಥವು ಮೂರನೆಯದು; ನಾಲ್ಕನೆಯದು ಪದ್ಮತೀರ್ಥವು; ತೈಲತೀರ್ಥವು ಐದನೆಯದು; ಈ ತೀರ್ಥವು ಅತುಲವೂ, ಪಾಪಪ್ರಣಾಶಕವೂ ಆಗಿರುವದು. ಇಲ್ಲಿಯೇ ಬ್ರಹ್ಮದೇವನು ಯಜ್ಞವನ್ನು ಮಾಡಿದನು. ಆರನೆಯದು ರಂಗತೀರ್ಥವು; ಅಲ್ಲಿ ರಂಗೇಶನ ದರ್ಶನವನ್ನು ತೆಗೆದುಕೊಳ್ಳಬೇಕು.

ಏಳನೆಯದು ಅಗಸ್ತ್ಯತೀರ್ಥವು; ಈ ತೀರ್ಥವು ಮೂರುಲೋಕಗಳಲ್ಲಿ ದುರ್ಲಭವೂ, ಉತ್ತಮವೂ ಆಗಿರುವದು. ಅಶ್ವತ್ಥತೀರ್ಥವು ಎಂಟನೆಯದು; ಒಂಬತ್ತನೆಯದು ಭಾನುತೀರ್ಥವು; ಈ ತೀರ್ಥದಲ್ಲಿ ಸೂರ್ಯೋದಯಕ್ಕೆ ಮುಂಚೆ ಸ್ನಾನ ಮಾಡುವ ರೋಗಿಯು ರೋಗಹೀನನಾಗಿ ತೇಜೋಯುತನಾಗುವನು; ಮತ್ತು ಸೂರ್ಯಲೋಕದಲ್ಲಿ ಪೂಜ್ಯತೆಯನ್ನು ಹೊಂದುವನು. ೧೦ ನೆಯದು ಕೋಟಿ ತೀರ್ಥವು; ವಿಷ್ಣುಪುಷ್ಕರಣಿಯು ೧೧ ನೆಯದು; ಈ ತೀರ್ಥದಲ್ಲಿ ಸ್ನಾನಮಾಡಿ ಮೇಷಸಂಕ್ರಾಂತಿಯಲ್ಲಿಯೂ, ಪೌರ್ಣಿಮೆಯಲ್ಲಿಯೂ ಕೋಣೆಶಂಕರನ ಪೂಜೆಯನ್ನು ಮಾಡುವವನು ಏಳುಜನ್ಮಗಳಲ್ಲಿ ಧನಾಢ್ಯನೂ, ವೇದಪಾರಂಗತನೂ ಆಗಿ ವಿಪ್ರಜಾತಿಯಲ್ಲಿ ಹುಟ್ಟುವನು. ಪೌರ್ಣಿಮೆ, ಶಿವಯೋಗ, ಸೋಮವಾರ ಚಂದ್ರ-ಸೂರ್ಯಗ್ರಹಣಗಳೂ, ವ್ಯತೀಪಾತ, ಸೂರ್ಯನು ಮೇಷರಾಶಿಯಲ್ಲಿರುವ ಸಂಧಿ, ಇವುಗಳಲ್ಲಿ ಮಲ್ಲಿಕಾರ್ಜುನನ ಪೂಜೆಯನ್ನು ಮಾಡುವವನೂ' ದರ್ಶನಮಾಡಿಕೊಳ್ಳುವವನೂ ತನ್ನ ಕೋಟಿಕುಲಸಂಯುಕ್ತನಾಗಿ ಶಿವಲೋಕದಲ್ಲಿ ಪೂಜಿಸಲ್ಪಡುವನು. ಶಂಕರೀ ಕ್ಷೇತ್ರದ ದಕ್ಷಿಣದಿಕ್ಕಿನಲ್ಲಿ ನಾಗೇಶ ತೀರ್ಥವೆಂಬ ಹನ್ನೆರಡನೆಯ ತೀರ್ಥವಿರುವದು. ಹೀಗೆ ಆ ಕ್ಷೇತ್ರದಲ್ಲಿ ಹನ್ನೆರಡು ಮುಖ್ಯ ತೀರ್ಥಗಳಿರುವವು. ಇವಲ್ಲದೆ ಮಲಾಪಹಾರಿಯಲ್ಲಿ ಕೋಟಿಗಟ್ಟಲೆ ತೀರ್ಥಗಳೂ, ಲಿಂಗಗಳೂ ಇರುವವು. ರಾಮತೀರ್ಥ ದಕ್ಷತೀರ್ಥ, ವಾಸಿಷ್ಠತೀರ್ಥ ಹೀಗೆ ಅಗಣಿತ ತೀರ್ಥಗಳಿರುವವು. ಮಲ್ಲಿಕಾರ್ಜುನನ ಪಾರ್ಶ್ವದಲ್ಲಿ ಪಾತಾಲೇಶ್ವರವೆಂಬ ಹೆಸರಿನ ದಿವ್ಯಲಿಂಗವು ಇರುವದು ಇದಲ್ಲದೆ ಪಿನಾಕೇಶ, ಲಜ್ಜಾಗೌರೀ, ಕೋಟಿಲಿಂಗ, ವೈಷ್ಣವೇಶ್ವರ, ವೀರಭದ್ರ, ನಾರಸಿಂಹ, ಸೃಗಾಲ, ವಾಮನ ಹೀಗೆ ಅನೇಕ ತೀರ್ಥಗಳಿವೆ. ವಿಷ್ಣುಪುಷ್ಕರಣೀ ತೀರದಲ್ಲಿ ಒಂಬತ್ತು ಲಿಂಗಗಳಿರುವವು. ಪರ್ವತದಲ್ಲಿ ಕೋಟಿಲಿಂಗಗಳಿರುವವು ಬಿಸ್ವೇಶ್ವರ ಲಿಂಗವು ಪರ್ವತದ ತುದಿಯಲ್ಲಿ ಪ್ರತಿಷ್ಠಿತವಾಗಿದೆ. ವಾತಾಪಿ ಇಲ್ವಲರ ಹತವಾದ ಸ್ಥಾನದ ಪಶ್ಚಿಮಕ್ಕಿರುವ ಮಹಾಕೂಟ ಪರ್ವತಭಾಗವೆಲ್ಲ ದೇವಮಯವಾಗಿದೆ. ಈ ತೀರ್ಥಗಳನ್ನು ನಿತ್ಯದಲ್ಲಿ ಶ್ರವಣಮಾಡುವವರು ಸರ್ವಪಾಪಗಳಿಂದ ಮುಕ್ತರಾಗುವರೆಂತಲೂ, ಶಿವಲೋಕದಲ್ಲಿ ಅವರು ಪ್ರತಿಷ್ಠೆಯನ್ನು ಹೊಂದುವರೆಂತಲೂ ಅಗಸ್ತ್ಯರು ಲೋಪಾಮುದ್ರೆಯನ್ನು ಕುರಿತು ಹೇಳಿದರು ಬಳಿಕ ಆ ಮಹಾಮುನಿಯ ಪತಿವ್ರತೆಯಾದ ಸತಿಯು ಶ್ರೀ ಶಂಕರೀ ಕ್ಷೇತ್ರದ ನೈಋತ್ಯದಿಕ್ಕಿನಲ್ಲಿರುವ ಪದ್ಮತೀರ್ಥದ ಆದ್ಯಂತ ಇತಿಹಾಸವನ್ನು ಹೇಳುವದಕ್ಕೆ ಅಗಸ್ತ್ಯರಿಗೆ ಪ್ರಾರ್ಥಿಸಿದಳು, ಆಗ ಆ ಮುನಿಯು ಅದರ

ಎಲ್ಲ ವೃತ್ತಾಂತವನ್ನು ಹೇಳತೊಡಗಿದನು. ಅವನ್ನು ಹೇಳುವದಕ್ಕಿಂತ ಮೊದಲು ಅಗಸ್ತ್ಯಮುನಿಯು ಬ್ರಾಹ್ಮ್ಯಮುಹೂರ್ತದಲ್ಲಿ ಎದ್ದು ಗುರ್ವಾದಿಗಳ ಸ್ಮರಣ ಮಾಡಿ, ತೀರ್ಥನಾಮಗಳನ್ನುಚ್ಚರಿಸುತ್ತ ಹರಿದ್ರಾ ತೀರ್ಥಕ್ಕೆ ಬಂದನು.

## ಅಗಸ್ತ್ಯಕೃತ ಚಂಡೇಶ್ವರಸ್ತೋತ್ರ.

ಪತ್ನೀಸಮೇತನಾದ ಆ ಋಷಿಶ್ರೇಷ್ಠನು ಆ ತೀರ್ಥದಲ್ಲಿ ಸ್ನಾನಮಾಡಿ ಸಂಧ್ಯಾದಿತರ್ಪಣಗಳನ್ನು ಮುಗಿಸಿಕೊಂಡು ಬ್ರಾಹ್ಮಣರಿಗೂ ಸುವಾಸಿನಿಯರಿಗೂ ನಾನಾ ದಾನಗಳನ್ನೂ, ವಾಯನಗಳ (ಬಾಗಿನ) ನ್ನೂ ಕೊಟ್ಟು ಚಂಡೇಶ್ವರನನ್ನು ಪೂಜಿಸಿ ಆತನ ಸ್ತೋತ್ರಮಾಡಿದನು. "ದೇವದೇವನೇ ಜಗತ್ಪತಿಯೇ, ವಿಭುವೇ, ಹೇ ಚಂಡೇಶ್ವರನೇ, ನೀನು ನವಚಂದ್ರಭೂಷಿತನಾಗಿರುತ್ತೀ. ನೀನು ಭೂತನಾಥನೂ, ಭವದ (ಸಂಸಾರದ) ಭಯದಿಂದ ನಿನ್ನ ಭಕ್ತರನ್ನು ರಕ್ಷಿಸುವವನೂ ಆಗಿರುವಿ; ಹೇ ವಾಂಛಿತಪ್ರದನಾದ ಶಂಕರನೇ, ನಾನು ನಿನಗೆ ನಮಸ್ಕರಿಸುವೆನು. ಹೇ ಚಂದ್ರಚೂಡನೇ, ಹೇ ಮೃಡನೇ, ಹರನೇ, ನೀಲಕಂಠ, ವಿರೂಪಾಕ್ಷ, ನೀನು ಎಲ್ಲ ಪ್ರಾಣಿಗಳ ಸಂರಕ್ಷಕನಿರುವಿ. ಹೇ ವಿಭೋ ನೀನು ವ್ಯೋಮಕೇಶನೂ, ಪ್ರಾಣಿಗಳ ಸಂಸಾರಪಾಶವನ್ನು ನಾಶಮಾಡುವವನೂ ಇರುವಿ. ಹೇ ಶಿವನೇ, ನಿನ್ನ ಹಣೆಯ್ಲಲ್ಲಿ ಉಜ್ವಲವಾದ ನೇತ್ರವು ಕಂಗೊಳಿಸುತ್ತಿರುವದು. ನೀನು ಕಾಲನನ್ನು ಮುರಿದು ನಾಶಮಾಡಿರುತ್ತೀ ಹೇ ತ್ರಿನೇತ್ರನೇ ನೀನು ದಕ್ಷನ ಯಜ್ಞವನ್ನು ನಾಶಮಾಡಿದೆ; ನೀನು ಶಾಂತನೂ, ಶಾಶ್ವತನೂ ಆಗಿರುವಿ. ಹೇ ಪಾರ್ವತೀಪತಿಯೇ, ನಾನು ನಿನಗೆ ನಮಸ್ಕರಿಸುವೆನು. ಹೇ ತ್ರಿಶೂಲಧಾರಿಯೇ, ನಿನ್ನನ್ನು ದೇವತೆಗಳು ಯಾವಾಗಲೂ ಶೋಧಿಸುತ್ತಲೂ, ಚಿಂತಿಸತ್ತಲೂ ಇರುವರು. ನೀನು ಮಾರ್ಕಂಡೇಯನಿಗೆ ವರಪ್ರದಾನಮಾಡಿ ಕೀರ್ತಿಯನ್ನು ಪಸರಿಸಿದೆ. ನಾಗೇಂದ್ರಭೂಷಣನೇ, ನೀನು ಕಾಮನನ್ನು ಜಯಿಸಿರುವಿ. ಹೇ ಭೂತಪತಿಯೇ, ಮಹೇಶ್ವರನೇ, ನಾನು ನಿನಗೆ ನಮಸ್ಕರಿಸುವೆನು. ಹೇ ಶಂಕರನೇ ನಿನ್ನಲ್ಲಿ ಅಜ್ಞಾನಕತ್ತಲೆಯು ಎಲ್ಲಿಂದ ಬರಬೇಕು? ಸರ್ವತ್ರದಲ್ಲಿಯೂ ವ್ಯಾಪಕನಾಗಿರುವಿ. ಸ್ವರ್ಗದ ಮಾರ್ಗವನ್ನು ಶೋಧಿಸುವ ಜನರಿಗೆ ನೀನು ಸುಖವನ್ನೀಯುವಿ. ನೀನು ನಿನ್ನ ಭಕ್ತರಿಗೆ ಮುಕ್ತಿಯನ್ನು ಕೊಡಲಿಕ್ಕೆ ಸಿದ್ಧನಾಗಿರುವಿ. ನೀನು ತ್ರಿಪುರಸುರರನ್ನು ಸಂಹರಿಸಿದಿ ಹೇ ಕಪರ್ದಿಯೇ, ನಾನು ನಿನಗೆ ನಮಸ್ಕಾರಮಾಡುವೆನು. ಹೇ ತ್ರ್ಯಂಬಕ

ನೇ, ನೀನು ಅಂಧಕಾಸುರನನ್ನು ನಾಶಮಾಡಿದಿ. ಈಶ್ವರನೇ, ನೀನು ವೇದಗಳನ್ನು ರಕ್ಷಿಸಿ ಅವುಗಳನ್ನು ಧರಿಸಿರುವಿ. ನೀನು ಲೋಕಹಿತಾರ್ಥವಾಗಿ ಕಾಲಕೂಟವಿಷವನ್ನು ಪಾನಮಾಡಿದೆ. ಹೇ ಶಂಕರನೇ ನಾನು ನಿನಗೆ ಅನೇಕ ಪ್ರಣತಿಗಳನ್ನು ಮಾಡುವೆನು. ನನ್ನ ಅಭೀಷ್ಟವನ್ನು ಪೂರ್ಣಮಾಡು.

ಈ ಪ್ರಕಾರ ಚಂಡೇಶ್ವರನನ್ನು ಸ್ತುತಿಸಿ, ಈಶ್ವರನ ದರ್ಶನಾನಂದ ಪರವಶನಾದ ಆ ಮುನಿಯು ಮುಖಮಂಟಪದಲ್ಲಿ ಕುಣಿಯಹತ್ತಿದನು. ಬಳಿಕ ಅವನು ವಿಘ್ನನಾಶಕನಾದ ಗಣಪತಿಯನ್ನು ಭಕ್ತಿಯಿಂದಲೂ ವಿಧ್ಯುಕ್ತವಾಗಿ ಸಿಂದೂರ ಮೊದಲಾದವುಗಳಿಂದ ಪೂಜಿಸಿ ಮೋದಕ ಲಡ್ಡುಕಗಳನ್ನರ್ಪಿಸಿ, ಶ್ರೀ ದೇವಿಯ ಗರ್ಭಗುಡಿಯನ್ನು ಹೊಕ್ಕನು. ಅಲ್ಲಿ ಆ ಮುನಿಯು ಮೊದಲು ದೇವಿಗೆ ನಮಸ್ಕಾರ ಮಾಡಿ ಗುರುದೇವತೆಗಳಿಗೆ ನಮಸ್ಕಾರ ಮಾಡಿ ಸಂಕಲ್ಪಾದಿ ವಿಧ್ಯುಕ್ತವಾಗಿ ಶ್ರೀಶಂಕರಿಯ ಪೂಜನವನ್ನು ಮಾಡಿದನು. ಬಳಿಕ ದೇವಿಗೆ ನಮಸ್ಕರಿಸಿ ಸ್ತೋತ್ರ ಮಾಡಲಾರಂಭಿಸಿದನು. "ಹೇ ದೇವಿಯೇ, ನೀನು ಲೋಕಸುಂದರಿಯು, ನಿನ್ನ ಮಹಿಮೆಯು ಅಗಾಧವಾದದ್ದು; ನಾನು ನಿನ್ನನ್ನು ಎಷ್ಟೆಂದು ವರ್ಣಿಸಲಿ? ಒಮ್ಮೊಮ್ಮೆ ನೀನು ಹದಿನೆಂಟು ಭುಜಗಳುಳ್ಳವಳೂ ಆಗಿರುವಿ. ಮತ್ತೊಮ್ಮೆ ೩೨ ಭುಜಗಳುಳ್ಳವಳಾಗುವಿ. ಕುಂಡಲಾದಿ ಅನೇಕ ಭೂಷಣಗಳು ನಿನ್ನ ಶರೀರದಲ್ಲಿ ಒಪ್ಪುತ್ತಿರುವವು. ನಿನ್ನ ಮುಖವು ಅರಳಿದ ಪದ್ಮದಂತೆ ಇರುವದು. ನಿನ್ನ ಕಣ್ಣುಗಳು ಕಮಲಪತ್ರದಂತೆ ವಿಶಾಲವಾಗಿರುವವು. ನಿನ್ನ ಟೊಂಕವು ಸಿಂಹದ ಟೊಂಕದಂತೆ ಕೃಶವಾಗಿರುವದು; ಆದರೆ ನಿತಂಬಗಳು ಮಾತ್ರ ದೊಡ್ಡವಾಗಿದ್ದು, ಅವುಗಳ ಭಾರದಿಂದ ನೀನು ಬಲು ಶೋಭಿಸುತ್ತಿರುವಿ; ನಿನ್ನ ತೇಜಸ್ಸು ಕೋಟಿ ಸೂರ್ಯರ ಪ್ರಕಾಶವನ್ನು ಮೀರಿರುತ್ತದೆ; ನಿನ್ನ ನಖಮಂಡಲಗಳಿಂದ ನಿನ್ನ ಹಸ್ತ ಪಾದಗಳಿಗೆ ಒಂದು ತರದ ಶೋಭೆಯು ಬಂದಿರುವದು; ಪಸರಿಸಿದ ಮಯೂರ ಪುಚ್ಛವನ್ನೂ ಸಹ ತಿರಸ್ಕರಿಸುವ ನಿನ್ನ ತುರುಬಿನಿಂದ ನಿನ್ನ ತಲೆಗೆ ಭೂಷಣವಾಗಿರುವದು; ನೀನು ಪದ್ಮದಿಂದ ಹುಟ್ಟಿರುವಿ. ನಿನ್ನ ರೂಪವು ಕಮಲಪತ್ರದಂತೆ ಕೆಂಪುವರ್ಣವುಳ್ಳದ್ದಿರುವದು. ನೀನು ಪ್ರವಾಳ, ರತ್ನ, ವೈಡೂರ್ಯ, ನೀಲ, ಮಾಣಿಕ್ಯ ಮೊದಲಾದ ರತ್ನಗಳ ಅಲಂಕಾರಗಳಿಂದ ಭೂಷಿತಳಾಗಿರುವಿ. ಕೆಂಪುವರ್ಣದ ನಿನ್ನ ತುಟಿಯು ತೊಂಡೀಹಣ್ಣನ್ನು ಸಹ ಧಿಕ್ಕರಿಸುತ್ತಿರುವದು. ನಿನ್ನ ಹಲ್ಲುಗಳ ಪಂಕ್ತಿಗಳು ದಾಳಿಂಬಹಣ್ಣುಗಳ ಬೀಜಗಳ ಸಾಲಿನಂತೆ ಶೋಭಿಸುವವು; ನಿನ್ನ ಉತ್ತಮವಾದ ಮೂಗಿನಮೇಲೆ ಸುಂದರವಾದ ಮೂಗತಿಯು ಶೋಭಿ

ಸುತ್ತದೆ. ನಿನ್ನ ಕಾಲುಗಳಲ್ಲಿ ಮಧುರಸ್ವರಗೈಯುವ ದಿವ್ಯ ನೂಪುರಗಳು ಒಪ್ಪುತ್ತಿರುವವು. ನೀನು ರಕ್ತವರ್ಣದ ಪೀತಾಂಬರವನ್ನು ಧರಿಸಿರುವಿ; ನೀನು ಮುತ್ತಿನ ಹಾರಸಮಾಯುಕ್ತಳೂ, ಕಟಿಸೂತ್ರ (ವಡ್ಯಾಣ) ವಿರಾಜಿತಳೂ ದಿವ್ಯ ಗಂಧಲೇಪಿತಳೂ ಆಗಿದ್ದು ಗೆಜ್ಜೆ ಕಾಲ್ಗಡಗಗಳು ನಿನಗೆ ಒಳ್ಳೇ ಭೂಷಣಗಳಾಗಿರುತ್ತವೆ. ನಿನ್ನ ಕೈಗಳಲ್ಲಿ ದಿವ್ಯ ಕಂಕಣಗಳು ಶೋಭಿಸುತ್ತವೆ; ನಿನ್ನ ಬೊಟ್ಟುಗಳಲ್ಲಿ ತರತರದ ಉಂಗರುಗಳು ಒಪ್ಪುತ್ತಿರುವವು; ನೀನು ದಿವ್ಯ ಮಾಲೆಗಳನ್ನು ವಸ್ತ್ರಗಳನ್ನು ಧಾರಣಮಾಡಿಕೊಂಡು ದಿವ್ಯಖಡ್ಗ, ಶೂಲ, ಮುಂತಾದ ಆಯುಧಗಳನ್ನು ಧರಿಸಿರುವಿ. ತಮ್ಮ ತಮ್ಮ ಸಖಿಯರಿಂದ ಸಮೇತರಾದ ಕಾತ್ಯಾಯನಿಯರು ಪ್ರತ್ಯೇಕವಾಗಿ ನಿನಗೆ ಆರತಿಯನ್ನು ಬೆಳಗುತ್ತಿರುವರು; ೬೪ ಯೋಗಿನಿಯರು ನಿನಗೆ ಚಾಮರ, ವ್ಯಜನ (ಬೀಸಣಿಕೆ) ಗಳನ್ನು ಬೀಸುತ್ತಿರುವರು; ಬ್ರಹ್ಮಾದಿದೇವತೆಗಳು ಜಯಜಯಕಾರ ಧ್ವನಿಗಳಿಂದ ಸ್ತುತಿಸುತ್ತಿರುವರು; ಚಂಡಭೈರವ ವೀರರೂ, ದಂಡಪಾಣಿಗಳೂ ನಿನ್ನ ಸ್ತೋತ್ರ ಮಾಡುತ್ತಿರುವರು. ಮೂರ್ತಿಮಂತನಾದ ವೇದಮೂರ್ತಿಯು ಸಾಮವೇದವೇ ಮೊದಲಾದ ವೇದಘೋಷಗಳಿಂದ ಸ್ತುತಿಸಿ ನಿನ್ನಮೇಲೆ ಪುಷ್ಪಾಂಜಲಿಗಳನ್ನು ಸುರುವುತ್ತ ನಿನ್ನನ್ನು ಯಾವಾಗಲೂ ಸೇವಿಸುವನು; ನಿನ್ನ ಮುಖವು ಮಕರ ಕುಂಡಲಗಳಿಂದ ಭೂಷಿತವಾದ ಕಿವಿಗಳಿಂದಲೂ, ಹೊಳೆಯುವ ಗಲ್ಲಗಳಿಂದಲೂ ಶೋಭಿಸುತ್ತಿರುವದು. ಅದನ್ನು ನೋಡಿ ದೇವತೆಗಳಾದರೂ ಆನಂದಿತರಾಗುವರು.''

## ಅಗಸ್ತ್ಯನಿಗೆ ಶ್ರೀ ಶಂಕರಿಯು ಉಪದೇಶ.

ಈ ಪ್ರಕಾರ ಸರ್ವಲಕ್ಷಣ ಸಂಪನ್ನಳಾದ ಶಂಕರಿಯನ್ನು ಏಕಾಗ್ರಚಿತ್ತದಿಂದ ಸ್ತುತಿಸಿ, ಧ್ಯಾನಮಾಡಿದ ಆ ಮಹಾಮುನಿಯಾದ ಅಗಸ್ತ್ಯನು, "ಹೇ ತಾಯಿಯೇ ನಿನ್ನ ದರ್ಶನದಿಂದಲೇ ನನ್ನ ಮನೋರಥಗಳು ಪೂರ್ಣವಾಗಿರುವವು. ಕಾಶೀಕ್ಷೇತ್ರದ ನನ್ನ ವಿರಹದುಃಖವನ್ನು ನಿವಾರಣ ಮಾಡಿದ ನಿನ್ನಲ್ಲಿ ನಾನು ಇನ್ನೊಂದು ವರವನ್ನು ಬೇಡುವದಿಲ್ಲ. ಆದರೆ ಹೇ ಪ್ರಪಂಚದ ಭಯನಾಶಿನಿಯೇ, ನಿನ್ನ ಕ್ಷೇತ್ರವಾಸವನ್ನು ಮಾತ್ರ ನನಗೆ ಕೊಡು.'' ಎಂದು ದೇವಿಯನ್ನು ಬೇಡಿಕೊಂಡನು, ಆದಕ್ಕೆ ಶ್ರೀ ಶಂಕರೀದೇವಿಯು ನಕ್ಕು "ಹೇ ಮುನಿಯೇ, ನೀನು ಸರ್ವಲೋಕಕ್ಕೆ ಉಪಕಾರಮಾಡಲು ಶಕ್ತನು. ನನ್ನ ಕ್ಷೇತ್ರವಾಸವು ನಿನಗೆ ದೊರಕಲಾರದು; ನೀನು ವಿಂಧ್ಯಪರ್ವತವನ್ನು ನಿಗ್ರಹ ಮಾಡಿದ್ದರಿಂದ ಎಲ್ಲರೂ ಕರ್ಮಗಳನ್ನು

ನಡಿಸಲಿಕ್ಕೆ ಹತ್ತಿರುವರು. ಪರೋಪಕಾರಾರ್ಥವಾಗಿ ಯಾವನು ಜೀವಿಸುವನೋ ಅವನೇ ಸಜೀವನೆಂದೆನ್ನಬೇಕು. ಪರೋಪಕಾರವು ಯಾವನ ಹೃದಯದ ಜಾಗ್ರತವಾಗಿದೆಯೋ ಅವನಿಗೆ ಹೆಜ್ಜೆಹೆಜ್ಜೆಗೆ ನೂರು ಕಾಶೀವಾಸದ ಫಲವು ದೊರಕುವದು. ಸ್ಕಂದನು ನಿನಗೆ ನನ್ನ ಕ್ಷೇತ್ರಮಹಿಮೆಯನ್ನು ನೀನು ಸಂತುಷ್ಟವಾಗುವಂತೆ ಹೇಳುವನು. ಆ ಮಾಹಾತ್ಮ್ಯವನ್ನು ನೀನು ಕೇಳಿದರೆ ನನ್ನ ಕ್ಷೇತ್ರವಾಸದ ಫಲವು ದೊರೆಯುವದು. ನನ್ನ ಕಥಾಶ್ರವಣದಿಂದ ಪದ್ಮರಾಜನಂತೆ ನೀನು ಮುಕ್ತಿಯನ್ನು ಹೊಂದುವಿ'' ಎಂದು ಹೇಳಿದಳು. ಆಗ ಅಗಸ್ತ್ಯನು ದೇವಿಯನ್ನು ಕುರಿತು, ''ಲೋಕಧಾತ್ರಿಯೇ, ಸುಂದರಿಯೇ, ಪದ್ಮರಾಜನ ಪುಣ್ಯಕರವಾದ ಕಥೆಯನ್ನು ನನ್ನ ಮೇಲೆ ದಯವಿಟ್ಟು ಸವಿಸ್ತಾರ ವಾಗಿ ಹೇಳು'' ಎಂದು ಕೇಳಿದನು. ಅನಂತರ ಸಂತುಷ್ಟಳಾದ ಶಂಕರೀ ದೇವಿಯು ಪುಣ್ಯಕರವಾದ ಪದ್ಮರಾಜನ ಕಥೆಯನ್ನು ಸವಿಸ್ತಾರವಾಗಿ ಹೇಳತೊಡಗಿದಳು:—

## ಪದ್ಮರಾಜನ ಇತಿಹಾಸ.

ದೇವಿಯು.—''ಹೇ ಅಗಸ್ತ್ಯಮುನಿಯೇ, ನಾನು ಹೇಳುವ ಇತಿಹಾಸವು ಪುರಾತನವಿದ್ದರೂ ಅದು ಸಮಸ್ತಪಾಪವನ್ನು ನಾಶಮಾಡುವದು; ಮತ್ತು ನನ್ನ ಕ್ಷೇತ್ರವಾಸದ ಫಲವನ್ನು ಕೊಡುವದು. ಪೂರ್ವದಲ್ಲಿ ವಿಂಧ್ಯಾದ್ರಿಯ ದಕ್ಷಿಣ ಭಾಗದಲ್ಲಿ ನಿರ್ಮಲ ಎಂಬ ನಗರದಲ್ಲಿ ಪದ್ಮರಾಜನೆಂಬ ರಾಜನಿದ್ದನು; ಅವನು ಸರ್ವಕರ್ಮಪರಾಯಣನಾಗಿದ್ದನು. ಆ ಮಹಾಮತಿಯು ಸಮುದ್ರವಲಯಾಂಕಿತ ಪೃಥ್ವಿಯನ್ನೆಲ್ಲ ಗೆದ್ದು ತನ್ನ ರಾಜ್ಯವನ್ನು ನ್ಯಾಯದಿಂದ ಪರಿಪಾಲಿಸುತ್ತಿದ್ದನು. ಅವನು ತನ್ನ ರಾಷ್ಟ್ರದಲ್ಲಿ ದಂಡಿಸಲಿಕ್ಕೆ ಯೋಗ್ಯರಾದ ಪುರುಷರನ್ನೇ ದಂಡಿಸು ತ್ತಿದ್ದನು. ದಂಡಕ್ಕೆ ಪಾತ್ರನಲ್ಲದ ಪುರುಷನು ಎಂದೂ ಶಿಕ್ಷಿಸಲ್ಪಡುತ್ತಿದ್ದಿಲ್ಲ; ಪೂಜ್ಯರು ಪೂಜಿಸಲ್ಪಡುತ್ತಿದ್ದರು. ಮಾರ್ಗಮಾರ್ಗಗಳಲ್ಲಿ ಅನ್ನಛತ್ರಗಳನ್ನು ಇಟ್ಟಿ ದ್ದನು. ಅಲ್ಲಲ್ಲಿಗೆ ಜನರು ನೀರು ಕುಡಿಯುವದಕ್ಕಾಗಿ ಅರವಟ್ಟಿಗೆಗಳನ್ನು ಸ್ಥಾಪಿ ಸಿದ್ದನು. ಅನ್ನಛತ್ರಗಳಲ್ಲಿ ಉತ್ತಮವಾದ ಅನ್ನವು ಸಿಗುವಂತೆ ವ್ಯವಸ್ಥೆಯನ್ನಿ ಟ್ಟಿದ್ದನು. ಅವನ ರಾಜ್ಯದಲ್ಲೆಲ್ಲ ದೇವತೆಗಳೂ, ಭೂದೇವತೆಗಳಾದ ಬ್ರಾಹ್ಮ ಣರೂ ಯಥಾವಿಧಿಯಾಗಿ ಪೂಜಿಸಲ್ಪಡುತ್ತಿದ್ದರು. ಹೀಗಿರುತ್ತಿರಲು, ಮಹಾ ಧೀರನಾದ ಪದ್ಮರಾಜನು ರಾಜಸೂಯ ಯಜ್ಞವನ್ನು ಮಾಡಲುದ್ಯುಕ್ತನಾಗಿ ಅದ ಕ್ಕಾಗಿ ಶೌನಕಾದಿ ಮುನಿಗಳನ್ನು ಕರೆಯಿಸಿ, ಯಜ್ಞಪ್ರಾರಂಭಮಾಡಿದನು. ಯಜ್ಞ

ಶಾಸ್ತ್ರವಿಶಾರದರಾದ ಮುನಿಗಳೆಲ್ಲ ಯಜ್ಞವನ್ನು ಯಥಾಪ್ರಕಾರವಾಗಿ ಸಾಂಗಗೊಳಿಸಿದರು. ಬಳಿಕ ಆ ರಾಜನು ಸರ್ವ ಮುನಿಗಳನ್ನು ಪೂಜಿಸಿ, ಅವರಿಗೆ ಬಂಗಾರದ ಉಂಗುರಗಳು, ಭೂಮಿಗಳು, ಆಕಳುಗಳು, ರತ್ನಗಳು, ಮುತ್ತುಗಳು ಮೊದಲಾದವುಗಳನ್ನು ಕೊಟ್ಟನು. ಲಕ್ಷ್ಮಿಯು ವಿದ್ಯುತ್ತಿನಂತೆ ಚಂಚಲವೆಂತಲೂ, ದಾನಮಾಹಾತ್ಮ್ಯವು ಹೆಚ್ಚಿನದೆಂತಲೂ ತಿಳಿದು, ಬುದ್ಧಿವಂತನಾದ ಹಾಗು ಬ್ರಾಹ್ಮಣಪ್ರಿಯನಾದ ಪದ್ಮರಾಜನು ಸರ್ವಸ್ವವನ್ನೂ ಬ್ರಾಹ್ಮಣರಿಗೆ ಅರ್ಪಿಸಿ, ಅವರನ್ನು ಸಂತೋಷಪಡಿಸಿದನು. ಬಳಿಕ ಅವನು ಅವರನ್ನು ಭಕ್ತಿಯಿಂದಲೂ, ಯಥಾವಿಧಿಯಾಗಿಯೂ ಪೂಜಿಸಿ ಸ್ವಸ್ಥವಾದ ಹಾಗು ಏಕಾಗ್ರವಾದ ಮನಸ್ಸಿನಿಂದ ಬ್ರಾಹ್ಮಣರನ್ನು ಕುರಿತು, ಒಂದು ಮಹತ್ವದ ಪ್ರಶ್ನೆಯನ್ನು ಮಾಡಿದನು. "ಬ್ರಾಹ್ಮಣರೇ, ಮುಕ್ತಿಯ ಮೂಲವನ್ನು ನನ್ನಗೋಸ್ಕರ ಹೇಳಿರಿ. ರಾಜ್ಯವನ್ನಾಳುವ ರಾಜನಿಗೆ ಅಂತ್ಯದಲ್ಲಿ ಘೋರವಾದ ನರಕವು ಪ್ರಾಪ್ತವಾಗುವದೆಂದು ನಾನು ಎಲ್ಲರ ಬಾಯಿಂದಲೂ ಕೇಳುತ್ತೇನೆ. ಆ ನರಕದಲ್ಲಿಯೂ ಅವನಿಗೆ ಅನೇಕ ಯಾತನೆಗಳನ್ನು ಅನುಭೋಗಿಸಬೇಕಾಗುವದೆಂದೂ ಹೇಳುವರು. ಇದರಿಂದ ನನ್ನ ಮನಸ್ಸು ಮೇಲಿಂದ ಮೇಲೆ ಭಯಭೀತವಾಗುತ್ತದೆ. ಹೇ ಬ್ರಾಹ್ಮಣರೇ, ಸರ್ವಪಾಪಮಯನೂ, ಜಡನೂ ಆದ ನನ್ನನ್ನು ಉದ್ಧಾರಮಾಡಿರಿ. ನಾನು ರಾಜ್ಯದ ಸುಖಲೋಭದಿಂದ ಅನೇಕಮಂದಿ ರಾಜರನ್ನು ಕೊಂದೆನು. ದೇಹಾತ್ಮಬುದ್ಧಿಯುಳ್ಳ ನಾನು ಅವರ ಸಂಪತ್ತಿಯನ್ನು ಹರಣಮಾಡಿದೆನು. ಮಹಾಪಾಪಿಯಾದ ನಾನು ಅವರ ದೇಶಗಳನ್ನು ಸುಟ್ಟುಬಿಟ್ಟೆನು. ಈ ಪ್ರಕಾರ ಪಾಪರತನಾದ ನಾನು ಮಹಾ ನರಕದಲ್ಲಿ ಬೀಳುವದು ನಿಶ್ಚಯವು; ಆ ಸರ್ವನರಕಗಳಿಂದ ನನ್ನನ್ನು ಬಿಡಿಸುವವರು ಯಾರು? ನನ್ನನ್ನು ಋಣವಿಮುಕ್ತಮಾಡುವಂಥ ಉತ್ತಮ ಪುತ್ರನಾದರೂ ನನಗಿಲ್ಲ. ಆದ್ದರಿಂದ ಬ್ರಾಹ್ಮಣರೇ, ಭವಸಾಗರದಲ್ಲಿ ಬಿದ್ದಂಥ ನನ್ನನ್ನು ರಕ್ಷಿಸಿರಿ. ಯಾವ ತೀರ್ಥವನ್ನು ಸೇವಿಸಿದರೆ ನನಗೆ ಉತ್ತಮ ಸಂತತಿಯು ಸಿಗುವದೋ ಮತ್ತು ನಾನು ಈ ಭವಾಬ್ಧಿಯಿಂದ ಮುಕ್ತನಾಗುವೆನೋ ಅಂಥ ಶ್ರೇಷ್ಠ ತೀರ್ಥವು ಯಾವದಾದರೂ ಇದ್ದರೆ ಹೇಳಿರಿ" ಎಂದು ಕೇಳಿದನು.

ಪದ್ಮರಾಜನು ಮಾಡಿದ ಪ್ರಶ್ನೆಯಿಂದ ಪ್ರಹೃಷ್ಟರಾದ ಶೌನಕಾದಿ ಮುನಿಗಳು ನನ್ನ ಕ್ಷೇತ್ರವನ್ನು ಮನಸ್ಸಿನಲ್ಲಿ ವಿಚಾರಿಸಿ ಅದರ ಮಹಿಮೆಯನ್ನು ವರ್ಣಿಸಹತ್ತಿದರು. ಎಲೈ ರಾಜನೇ, ದಕ್ಷಿಣದೇಶದಲ್ಲಿ ತಿಲಕವನವೆಂಬ ಸರ್ವೋತ್ತಮವೂ ಪುಣ್ಯಕರವೂ ಆದ ತೀರ್ಥವಿರುವದು. ಈ ಭೂಲೋಕದಲ್ಲಿರುವ ಸಾವಿರಾರು

ಕ್ಷೇತ್ರ-ತೀರ್ಥಗಳಲ್ಲಿ ಕಾಶಿಯು ಶ್ರೇಷ್ಠವೆಂದೆನಿಸಿಕೊಳ್ಳುವದು. ಇಂಥ ಕಾಶೀ ಕ್ಷೇತ್ರವಾದರೂ ಕ್ಷೇತ್ರರಾಜನಾದ ತಿಲಕವನದ ಷೋಡಶಕಲೆಗಳಲ್ಲಿ ಒಂದು ಕಲೆಯನ್ನೂ ಹೊಂದಿರುವದಿಲ್ಲ. ಆ ತಿಲಕವನದಲ್ಲಿ ಪ್ರತಿವರ್ಷ ಲೋಕೈಕ ಪಾವನಳಾದ ಗಂಗೆಯು ತನ್ನ ಪಾಪವಿಮೋಚನಾರ್ಥವಾಗಿ ವೈಶಾಖಮಾಸದ ಪೌರ್ಣಿಮೆಗೆ ಬರುವಳು. ಆ ತಿಲಕವನದಲ್ಲಿ ಸರ್ವತೀರ್ಥಗಳು ಯಾವಾಗಲೂ ಇರುವವು. ಅಲ್ಲಿ ತಾರಕೇಶನು ರುದ್ರೇಶನೆಂಬ ಹೆಸರಿನಿಂದ ಶ್ರೀ ದೇವಿಯ ಸನ್ನಿಧಿಯಲ್ಲಿ ಇರುವನು. ಅವನು ಎಲ್ಲ ಪ್ರಾಣಿಗಳಿಗೆ ತಾರಕೋಪದೇಶವನ್ನು ಮಾಡಿ ಅವರನ್ನು ಉದ್ಧರಿಸುವನು. ಅಲ್ಲಿ ಎಷ್ಟೋ ಜನರು ವಾಸಮಾಡಿ ಸಂಸಾರ ಪಾಶಬಂಧನದಿಂದ ಮುಕ್ತರಾಗಿರುವರು. ಆ ಮಹತ್‌ಕ್ಷೇತ್ರವನ್ನು ಸೇವಿಸುವ ಮನುಜರ ಕೈಯಲ್ಲಿ ಮುಕ್ತಿಯು ಇರುವದು. ಆ ಕ್ಷೇತ್ರದ ಮಹಿಮೆಯು ಅಪಾರವಿರುವದು. ಬ್ರಹ್ಮಹತ್ಯಾದಿ ಪಾಪವು ನಾಶವಾಗುವದು. ಈ ತಿಲಕವನದಲ್ಲಿ ಭಕ್ತಿಗೆ ಪ್ರಸನ್ನಳಾಗುವವಳೂ ದುರ್ಗಾಸುರನನ್ನು ಸಂಹರಿಸಿದವಳೂ ಆದ ಶಂಕರಿಯು ಮನುಜರ ಭಾವವಿದ್ದಂತೆ ಅವರ ಮನೋರಥಾದಿಗಳನ್ನು ಪೂರ್ಣ ಮಾಡುತ್ತ ಇರುವಳು. ಶುಕ್ರವಾರ ಹರಿದ್ರಾ ತೀರ್ಥದಲ್ಲಿ ಸ್ನಾನಮಾಡುವವನು ಸರ್ವಪಾಪಗಳಿಂದ ಮುಕ್ತನಾಗುವನು. ಮಂಗಳವಾರಯುಕ್ತವಾದ ಅಮಾಸ್ಯೆಯಲ್ಲಿ ಆ ಶ್ರೇಷ್ಠವಾದ ಹರಿದ್ರಾ ತೀರ್ಥದಲ್ಲಿ ಸ್ನಾನಮಾಡುವವನು ಈ ಭವಸಾಗರವನ್ನು ದಾಟುವದಲ್ಲದೆ ತನ್ನ ಎಲ್ಲ ಪಿತೃಗಳನ್ನು ಉದ್ಧರಿಸುವನು. ಶುದ್ಧಮನಸ್ಸಿನಿಂದ ಆ ತೀರ್ಥದಲ್ಲಿ ಪಿತೃತರ್ಪಣವನ್ನು ಮಾಡುವವನ ಪಿತೃಗಳು ಆ ತೀರ್ಥದ ಜಲವನ್ನು ಅಕ್ಷಯ್ಯವಾಗಿ ಸೋಮರಸದಂತೆ ಪಾನಮಾಡುವರು. ಈ ತೀರ್ಥದ ಜಲದ ಸೇಚನಮಾತ್ರದಿಂದ ಮನುಜರು ಪುತ್ರಪೌತ್ರರನ್ನು ಪಡೆಯುವರು. ಈ ಹರಿದ್ರಾತೀರ್ಥದಲ್ಲಿ ಗುಪ್ತದಾನಾದಿಗಳನ್ನು ಮಾಡುವವನ ವಂಶವಲ್ಲಿಯು ಯಾವಾಗಲೂ ಸಂಕಟರಹಿತವಾಗಿರುವದು. ಅದಕ್ಕೆ ನಾಶವು ಎಂದಿಗೂ ಬರಲಾರದು. ಆ ತೀರ್ಥದಲ್ಲಿ ಒಬ್ಬ ಬ್ರಾಹ್ಮಣನಿಗೆ ಆಗಲಿ ಇಲ್ಲವೆ ಒಬ್ಬ ವಟುವಿಗಾಗಲಿ ಭಕ್ತಿಯಿಂದ ಭೋಜನವನ್ನು ಮಾಡಿಸಿದರೆ ಕೋಟಿಗಟ್ಟಲೆ ಬ್ರಾಹ್ಮಣರನ್ನು ಉಣ್ಣಿಸಿದ ಫಲವು ಬರುವದು. ಮೃಕಂಡ ಋಷಿಯು ಅಲ್ಲಿ ಬಂದು ಸ್ನಾನದಾನ ಮಾಡಿದ್ದರಿಂದ ಸುಪುತ್ರನನ್ನು ಪಡೆದನು. ಆ ಪುತ್ರನು ಕೋಟಿಕಲ್ಪಾಂತಗಳವರೆಗೆ ಆಯುಷ್ಯವನ್ನು ಪಡಕೊಂಡನು. ಆದ್ದರಿಂದ ಹೇ ರಾಜೇಂದ್ರನೇ, ಶಂಕರಿಯ ಶ್ರೇಷ್ಠವಾದ ಕ್ಷೇತ್ರಕ್ಕೆ ಹೋಗು. ನಿನಗೆ ಭುಕ್ತಿಮುಕ್ತಿಗಳು ಸಿಗುವವು;

ನಿನ್ನ ಅಭೀಷ್ಟಗಳು ಪೂರ್ಣವಾಗಿ ಮಹತ್‌ಫಲವು ದೊರೆಯುವದು.'' ಎಂದು ಮುನಿಗಳು ಹೇಳಿದರು.

ಮುನೀಂದ್ರರ ವಚನಗಳನ್ನು ಕೇಳಿದಕೂಡಲೆ ಪದ್ಮರಾಜನಲ್ಲಿ ಭಕ್ತಿ ಶ್ರದ್ಧೆಗಳು ಹುಟ್ಟಿದವು. ಅವನು ತನ್ನ ರಾಜ್ಯಭಾರವನ್ನು ತನ್ನ ಶ್ರೇಷ್ಠವಾದ ಮಂತ್ರಿಗೆ ಒಪ್ಪಿಸಿ, ತನ್ನ ಭಾಂಡಾರವನ್ನೆಲ್ಲ ತಕ್ಕೊಂಡು ಆನಂದದಿಂದಲೂ, ಭಕ್ತಿಯಿಂದಲೂ ಪತ್ನೀಸಮೇತನಾಗಿ ಮುನೀಂದ್ರರ ಸಂಗಡ ಶ್ರೀ ಶಂಕರೀಕ್ಷೇತ್ರಕ್ಕೆ ಹೊರಟನು. ಆ ಕ್ಷೇತ್ರಕ್ಕೆ ಹೊರಡುವದಕ್ಕಿಂತ ಮೊದಲು ಪದ್ಮರಾಜನು ಉಪೋಷಣ ಮಾಡಿ, ಗಜಾನನನ್ನು ಪೂಜಿಸಿ ತೀರ್ಥಸಂಕಲ್ಪವನ್ನು ಮಾಡಿದನು. ಮರು ದಿನ ಸ್ನಾನಮಾಡಿ ತನ್ನ ರಾಜಧಾನಿಯಿಂದ ಶೀಘ್ರವಾಗಿಯೇ ಹೊರಟನು. ದುರ್ಗಾಸುರನನ್ನು ಸಂಹರಿಸಿದ ದೇವಿಯ ಮಾಹಾತ್ಮ್ಯವನ್ನು ಹೇಳಿದ ಮುನಿಗಳಿಂದ ಯುಕ್ತನಾಗಿ ರಾಜನು ಲೋಕಪಾವನೆಯಾದ ಕೃಷ್ಣಾತೀರಕ್ಕೆ ಬಂದನು. ಅಲ್ಲಿ ಅವನು ಉಪವಾಸವನ್ನು ಮಾಡಿ ವಿಧಿಪೂರ್ವಕವಾಗಿ ಪಿತೃಶ್ರಾದ್ಧವನ್ನು ಮಾಡಿ, ಜಗದೀಶ್ವರನಿಗೆ ನಮಸ್ಕರಿಸಿ, ಪಾರಣೆಯನ್ನು ಮಾಡಿ ಮುಂದೆ ಮಹಾಕೂಟಕ್ಕೆ ಹೊರಟುಬಂದನು. ಅಲ್ಲಿ ತೀರ್ಥವಿಧಿಯನ್ನು ಮಾಡಿಕೊಂಡು ರಾಮಕ್ಷೇತ್ರಕ್ಕೆ ಬಂದನು; ಅಲ್ಲಿ ಸ್ನಾನಮಾಡಿ ಅನಂತಲಿಂಗಗಳನ್ನು ವಿಧಿಪೂರ್ವಕವಾಗಿ ಪೂಜಿಸಿ, ಗಂಗಾಸಂಗಮದಲ್ಲಿ ಸ್ನಾನಮಾಡಿ ರುದ್ರೇಶನನ್ನು ಪೂಜಿಸಿದನು. ಬಳಿಕ ಪದ್ಮರಾಜನು ಜಗನ್‌ಮಾತೃವಾದ ಶ್ರೀ ಶಂಕರೀಕ್ಷೇತ್ರಕ್ಕೆ ಬಂದನು. ಆಗ ಅವನ ಮೈಮೇಲೆ ಆನಂದದಿಂದ ರೋಮಾಂಚನಗಳೆದ್ದವು. ರಾಜನು ಪತ್ನಿ, ಸೈನ್ಯ, ಇವುಗಳ ಸಮೇತನಾಗಿಯೂ, ಸ್ವಸ್ಥಮನಸ್ಸಿನಿಂದಲೂ ಶ್ರೀ ದೇವಿಯ ಧೂಲಿದರ್ಶನ ತಕ್ಕೊಂಡು, ಗಣೇಶಪಟುವಿಗೆ ನಮಿಸಿದನು. ಬಳಿಕ ಮುಮುಕ್ಷುವಾದ ರಾಜನು ದೇವಿಯ ನೈಋತ್ಯಭಾಗದಲ್ಲಿ ದಿವ್ಯವಾದ ಆಶ್ರಮವನ್ನು ಸಿದ್ಧಮಾಡಿದನು. ಅವನು ಸಪತ್ನೀಕನಾಗಿ ಆನಂದದಿಂದ ಮುಖ್ಯವಾದ ಹನ್ನೆರಡು ತೀರ್ಥಗಳಲ್ಲಿಯೂ ಅನ್ಯ ತೀರ್ಥಗಳಲ್ಲಿಯೂ ಕ್ರಮವಾಗಿ ಸ್ನಾನಮಾಡಿ ದಾನಾದಿಗಳನ್ನು ಮಾಡಿದನು. ಮುಕ್ತಿಕಾಮನಾದ ಪದ್ಮರಾಜನು ಹರಿದ್ರಾತೀರ್ಥದಲ್ಲಿ ಸ್ನಾನಮಾಡಿ ತನ್ನದೊಂದು ತೀರ್ಥವನ್ನು ನಿರ್ಮಿಸಿ, ಪಂಚಾಮೃತ ಮಹಾಸೂಕ್ತ, ಶ್ರೀ ಸೂಕ್ತ, ರುದ್ರಸೂಕ್ತ, ಬಿಲ್ವಪತ್ರ ನಾನಾತರದ ಪುಷ್ಪ, ಧೂಪ, ದೀಪ ನೈವೇದ್ಯ, ಫಲ ತಾಂಬೂಲಗಳಿಂದ ಶ್ರೀ ದೇವಿಯನ್ನು ಪೂಜಿಸಿ, ಪ್ರದಕ್ಷಿಣನಮಸ್ಕಾರಗಳನ್ನು ಹಾಕಿ ಶ್ರೀ ಶಂಕರೀ ಸ್ತೋತ್ರವನ್ನು ಮಾಡತೊಡಗಿದನು. ''ಓಂಕಾರರೂಪಿಣಿಯಾದ ಲಕ್ಷ್ಮಿಯೇ,

ನೀನು ಸರ್ವಭೂತಗಳಲ್ಲಿ ವಾಸವಾಡಿರುತ್ತೀ; ಬಿಂದುರೂಪಿಣಿಯಾದ ದೇವಿಯೇ, ನೀನು ಇಡೀ ಬ್ರಹ್ಮಾಂಡಕ್ಕೂ ಆನಂದವನ್ನು ಕೊಡುವಿ. ಆನಂದಾಕ್ಷಿಣಿಯೇ, ನೀನು ಓಳಪೀಠಗಳಲ್ಲಿ ವಾಸಿಸುರುತ್ತೀ. ನಿನ್ನ ಕಾಂತಿಯು ಚಂದ್ರನಕಾಂತಿಯಂತೆ ಇರುವದು. ಅದ್ಯಂತರಹಿತಳಾದ ದೇವಿಯೇ, ನೀನು ಮಂತ್ರಯೋಗಿನಿಯೂ, ಅಸಂಖ್ಯಬ್ರಹ್ಮಾಂಡಯುಕ್ತಳೂ, ಇರುವಿ. ಹೇ ಹಂಸವಾಹಿನಿಯಾದ ವಾರಾಹಿಯೇ, ನಾದ, ಬಿಂದು, ಕಲೆಗಳು, ಶಕ್ತಿಯು ಇವುಗಳಿಂದ ಪೂರ್ಣಳೂ, ಯೋಗಿಗಳ ಹೃದಯಸ್ಥಾನದಲ್ಲಿ ವಾಸವಾಡುವವಳೂ ಇರುತ್ತೀ. 'ಅ'ಕಾರವು ಬ್ರಹ್ಮರೂಪವಾಗಿದ್ದು 'ಉ'ಕಾರಕ್ಕೆ ವಿಷ್ಣುವೆಂದೆನ್ನುವರು. 'ಮ'ಕಾರವು ರುದ್ರರೂಪವಿರುವದೆಂದು ಹೇಳುವರು. ಇವೇ ಪ್ರಣವದೇವತೆಗಳು; ಓಂಕಾರದಲ್ಲಿ ಇಡಿ ವಿಶ್ವವೂ, ಶಕ್ತಿಪ್ರಳಯವೂ ಇರುವವು. ಓಂಕಾರವನ್ನು ಜಪಿಸುವವನು ಸರ್ವಪಾಪಗಳಿಂದ ಮುಕ್ತನಾಗುವನು. ಈ ಸ್ತೋತ್ರವನ್ನು ೧ ತಿಂಗಳು ಜಪಿಸುವವರ ದಾರಿದ್ರ್ಯವು ನಾಶವಾಗಿ ಲಕ್ಷ್ಮಿಯು ಅವರಿಗೆ ಅಖಂಡವಾಗಿ ಒಲಿಯುವಳು''

ಈ ಪ್ರಕಾರ ಸ್ತೋತ್ರಮಾಡಿ ಶಂಕರಿಗೆ ಪುನಃ ಪುನಃ ನಮಸ್ಕರಿಸಿ ಶ್ರದ್ಧೆಯಿಂದ ಎಲ್ಲ ಪ್ರಾಣಿಗಳಿಗೂ ಅನ್ನವನ್ನು ಕೊಟ್ಟನು. ಬಳಿಕ ಎಲ್ಲ ಬ್ರಾಹ್ಮಣರಿಗೂ ನಮಸ್ಕರಿಸಿ ಅವರಿಗೆ ಸುವರ್ಣಸಮೇತ ಗೋದಾನ, ವಸ್ತ್ರದಾನ, ಮೊದಲಾದ ಅನೇಕ ದಾನಗಳನ್ನು, ಶ್ರೀ ದೇವಿಯು ಸಂತುಷ್ಟವಾಗಲೆಂದು ಕೊಟ್ಟನು. 'ದೇವಿಯೇ ಕೊಡುವವಳು, ದೇವಿಯೇ ತಕ್ಕೊಳ್ಳುವವಳು; ದೇವಿಯೇ ಉಣ್ಣುವವಳು; ಈ ಜಗತ್ತೆಲ್ಲ ದೇವೀ ಮಯವಾಗಿರುವದು. ಶ್ರೀ ದೇವಿಯ ಪ್ರೇರಣೆಯಿಂದನಾನು ಸಂಸಾರಯಾತ್ರೆಯನ್ನು ಸಾಗಿಸುವೆನು. ಎಂದು ತಿಳಿದು ಆ ರಾಜನು ರತ್ನ ಹಿರಣ್ಯ ಮೊದಲಾದ ತನ್ನ ಸಂಪತ್ತಿಯನ್ನು ಬ್ರಾಹ್ಮಣರಿಗೆಲ್ಲ ಅರ್ಪಿಸಿದನು. ರಾಜನು ಈ ಪ್ರಕಾರ ಬ್ರಾಹ್ಮಣರಿಗೆ ತನ್ನ ಭಾಂಡಾರವನ್ನೆಲ್ಲ ದಾನಮಾಡಿ ನಿಷ್ಕಾಮನಾಗಿ ಮೋಕ್ಷವನ್ನೇ ಬಯಸುತ್ತಾ ನಿರಹಂಕಾರಯುಕ್ತನಾದನು; ಮತ್ತು ಶಾಕಂಭರಿಯ ಮಹಾ ಮಂತ್ರದ ಪುನಶ್ಚರಣವನ್ನು ಲಕ್ಷಣಪೂರ್ವಕವಾಗಿ ಮಾಡಹತ್ತಿದನು. ಶಾಕಂಭರೀ ಮಹಾಮಂತ್ರದ ಋಷಿ ಛಂದಸ್ಸು ದೈವತಗಳು ಈ ಪ್ರಕಾರ ಇರುವವು ಆದಿನಾರಾಯಣನೇ ಋಷಿಯು; ಅನುಷ್ಟುಪ್ ಛಂದವು; ಶಾಕಂಭರಿಯೇ ದೇವತೆಯು; ಪ್ರಣವಾದಿಗಳೇ ಬೀಜವು. ಶಕ್ತಿಯೇ ಶಕ್ತಿಯು. ಕಾಮರಾಜಾ ಕೀಲಕವು. ಈ ಮಹಾ ಮಂತ್ರವು ಭೋಗ ಮೋಕ್ಷಗಳನ್ನು ಕೊಡುವ ವಿದ್ಯೆಯು ಆಗಿರುತ್ತದೆ. ರಾಜನು ಎಲ್ಲ

ಮಂತ್ರಕರ್ಮಗಳನ್ನು ದೇವೀ ಪ್ರೀತ್ಯರ್ಥವಾಗಿಯೇ ಮಾಡಿದನು. ಮೋಕ್ಷ ಕಾಮನೆಯುಳ್ಳ ಪದ್ಮಾಸುರನು ಈ ಪ್ರಕಾರ ಶ್ರೀ ಶಂಕರೀಕ್ಷೇತ್ರದಲ್ಲಿ ಆನಂದ ದಿಂದ ವಾಸಮಾಡಿದ್ದನ್ನು ಕೇಳಿ ಮಂತ್ರಿಗಳು ರಾಜ್ಯಕಾಮನೆಯಿಂದ ಪ್ರೇರಿತ ರಾಗಿ ತಮ್ಮ ತಮ್ಮೊಳಗೆ ಕಲಹಕ್ಕೆ ಪ್ರಾರಂಭಮಾಡಿದರು. ಅವರ ಯುದ್ಧದಿಂದ ಎಲ್ಲ ಪ್ರಜೆಗಳಿಗೂ ಅಹೋರಾತ್ರಿಗಳಲ್ಲಿ ಪೀಡೆಯಾಗಹತ್ತಿತು. ಆ ಪ್ರಜೆಗಳು ಶಂಕರೀ ಕ್ಷೇತ್ರದಲ್ಲಿರುವ ಪದ್ಮರಾಜನ ಹತ್ತರ ಬಂದು ಅವನಿಗೆ ಶರಣು ಹೋದರು. ಆ ಕ್ಷೇತ್ರ ತೀರ್ಥಗಳನ್ನು ನೋಡಿ ಆನಂದಭರಿತರಾದ ಜನರು ತೀರ್ಥವಿಧಿಯನ್ನು ಮಾಡಿ ಮುನಿಗಣಗಳಿಂದ ಸೇವಿತನಾದ ರಾಜನ ಆ ದಿವ್ಯ ಆಶ್ರಮಕ್ಕೆ ಹೋಗಿ ರಾಜನಿಗೆ ದಂಡವತ್ ಪ್ರಣಾಮ ಮಾಡಿ ಉಚ್ಚ ಧ್ವನಿಯಿಂದ ಮಾತಾಡಿ ದರೇನಂದರೆ—

## ಪ್ರಜಾಪರಿಪಾಲನ ಧರ್ಮ

"ಎಲೈ ಮಹಾರಾಜನೇ, ನಮ್ಮನ್ನು ರಕ್ಷಿಸು; ರಕ್ಷಿಸು. ನೀನೇ ನಮ್ಮ ತಾಯಿಯು' ನಮ್ಮ ತಂದೆಯಾದರೂ ನೀನೇ. ಎಲೈ ಪ್ರಭುವೇ ನೀನು ನಮ್ಮನ್ನೆಲ್ಲ ನಿನ್ನ ಸ್ವಂತ ಮಕ್ಕಳಂತೆ ಸಂರಕ್ಷಣೆ ಮಾಡಿದಿ; ಪ್ರಜಾಪರಿಪಾಲನವೇ ರಾಜನ ಮುಖ್ಯಧರ್ಮವು. ನಿನ್ನ ಶಾಸನಗಳಿಂದಲೂ ಉಪದೇಶದಿಂದಲೂ ನೀನು ನಮ್ಮನ್ನು ಧರ್ಮಮಾರ್ಗಕ್ಕೆ ಹಚ್ಚಬೇಕು. ನಲ, ನೀಲ, ಮಾಂಧಾತ, ಮನು, ಪುರೂರು ಇವರೇ ಮೊದಲಾದ ಅರಸರು, ಪ್ರಜೆಗಳನ್ನು ಚನ್ನಾಗಿ ಸಂರಕ್ಷಣ ಮಾಡಿ ದೊರಕಿಸಿದ ಪುಣ್ಯದಿಂದ ಈ ಭವಸಾಗರವನ್ನು ದಾಟಿದರು. ಯಾವ ರಾಜನು ವಾರ್ಷಿಕ ಕರಗಳನ್ನು ತಕ್ಕೊಂಡು ಪ್ರಜೆಗಳ ರಕ್ಷಣವನ್ನು ಮಾಡು ವದಿಲ್ಲವೋ ಅವನು ನರಕದಲ್ಲಿ ಬೀಳುವನು. ಎಲೈ ರಾಜನೇ ತನ್ನ ಪ್ರಜೆಗಳು ದುಷ್ಟರಿಂದಲೂ, ಶತ್ರುಗಳಿಂದಲೂ, ವ್ಯಥೆ ಹೊಂದುವದನ್ನು ನೋಡುವ ರಾಜನು ನಿತ್ಯದಲ್ಲಿ ಧರ್ಮ ಪರಾಯಣನಾದರೂ, ವ್ಯಾಘ್ರನಾಗಿ ಹುಟ್ಟುತ್ತಾನೆ. ಯಾವ ರಾಜನು ಚೋರರು, ಅಗ್ನಿ, ಪರರಾಷ್ಟ್ರ ಶತ್ರುಗಳು ಇವರಿಂದ ತನ್ನ ಪ್ರಜೆಗಳನ್ನು ರಕ್ಷಿಸುವನೋ, ಅವನು ಐಹಿಕ ಹಾಗು ಪಾರತ್ರಿಕ ಫಲಗಳನ್ನು ಪಡೆಯುವನು. ಆದ್ದರಿಂದ ಹೇ ರಾಜನೇ, ನೀನು ನಿನ್ನ ಪ್ರಜೆಗಳಾದ ನಮ್ಮನ್ನು ಪರಿಪಾಲಿಸ ತಕ್ಕದ್ದು. ಇಲ್ಲದಿದ್ದರೆ ನಾವು ನಿನ್ನ ಮಂತ್ರಿಗಳಿಂದ ಪೀಡಿತರಾಗಿ ಸಾಯುವೆವು. ಎಲೈ ರಾಜನೇ ಇದೇ (ಪ್ರಜಾಪಾಲನವೇ) ಪರಮ ಶ್ರೇಷ್ಠವಾದ ಧರ್ಮವು; ಇದೇ ಶ್ರೇಷ್ಠವಾದ ತಪಸ್ಸು; ಇದೇ ಪರಮಜ್ಞಾನವು."

## ಪದ್ಮರಾಜನ ಉದ್ವೇಗ.

ತನ್ನ ಪ್ರಜೆಗಳು ಈ ಪ್ರಕಾರ ಮಾತಾಡಿದ್ದನ್ನು ಕೇಳಿ ಆ ರಾಜನು ಖಿನ್ನ ಮಾನಸನಾಗಿ ಮಾತಾಡಿದನೇನೆಂದರೆ;—"ಅಲ್ಪ ಭಾಗ್ಯನೂ, (ದುರ್ದೈವಿಯೂ) ಮಹಾಪಾಪಿಯೂ ಆದ ನನ್ನ ಮುಂದೆ ಇದೇನು ಬಂದು ನಿಂತಿತು! ಹೇ ವಿಶ್ವೇಶ್ವರಿಯಾದ ಶಂಕರಿಯೇ ನಾನು ಸಕಲ ಅರ್ಥಗಳನ್ನು ಕೊಡುವ ಈ ಸ್ಥಲವನ್ನು ಬಿಟ್ಟು ಹ್ಯಾಗೆ ಹೋಗಲಿ? ಈ ಭರತಖಂಡದಲ್ಲಿ ತಿಲಕವನವು ಶ್ರೇಷ್ಠವು. ನನ್ನ ಜನ್ಮಾಂತರದ ಪುಣ್ಯ ಸಮುದಾಯದ ಬಲದಿಂದ ನನಗೆ ಇಲ್ಲಿಯ ವಾಸವು ದೊರಕಿತು. ಮುಕ್ತಿದಾಯಕವೂ, ಪವಿತ್ರವೂ ಆದ ಈ ಕ್ಷೇತ್ರವನ್ನು ಹ್ಯಾಗೆ ತ್ಯಾಗ ಮಾಡಲಿ? ಮನು ಮೊದಲಾದ ಅಭಿಮಾನಿಗಳಾದ ರಾಜರು "ಈ ಪೃಥ್ವಿಯು ನನ್ನದು" ಎಂದು ವೃಥಾಭಿಮಾನವನ್ನು ಅಂಗೀಕರಿಸಿದರು. ಅದರಿಂದ ಯಾವ ಪ್ರಯೋಜನವಾಯಿತು? ರಾಜ್ಯದ ಸಲುವಾಗಿ ಈ ತಿಲಕವನವನ್ನು ನಾನು ಹ್ಯಾಗೆ ತ್ಯಜಿಸಲಿ? ತಮ್ಮ ವಿಜಯದಲ್ಲಿಯೇ ನಿರತರೂ, ವಿಮೂಢರೂ ಆದ ಈ ರಾಜರನ್ನು ನೋಡಿ, ಭೂಮಿಯು ನಗಹತ್ತಿರುವದು. ನನ್ನ ಸಂಬಂಧಿಕರಾದ ಇವರು ಮೃತರಾಗಿರುವರು. ಆದರೆ ನನಗೂ ಇನ್ನೊಬ್ಬರಿಗೂ ಎಂದೆಂದಿಗೂ ಸಂಬಂಧವೇ ಇಲ್ಲ. ಸಂಸಾರಸಾಗರದಿಂದ ಪಾರಾಗಬೇಕೆನ್ನುವ ಜನರಿಗೆ ಈ ದೇವೀ ಕ್ಷೇತ್ರವು ನೌಕೆಯಾಗಿರುವದು. ಇಂಥ ಶ್ರೇಷ್ಠವಾದ ನೌಕೆಯಲ್ಲಿ ಕುಳಿತು ಭವಸಮುದ್ರವನ್ನು ದಾಟಲಿಕ್ಕೆ ಇಚ್ಛಿಸದೆ ಇರುವವನು ಆತ್ಮಘಾತಕಿಯಲ್ಲವೆ? ನನ್ನ ಪೂರ್ವಜನ್ಮದ ಪುಣ್ಯದಿಂದ ಸಾಕ್ಷಾತ್ ಶ್ರೀ ಶಂಕರಿಯು; ನನಗೆ ಸಿಕ್ಕಿರುವಳು, ಆದರೆ ಮಂದಭಾಗ್ಯನಾದ ನನಗೆ ಮುಕ್ತಿಯು ಹ್ಯಾಗೆ ದೊರೆಯಬೇಕು? ಈ ಶ್ರೇಷ್ಠವಾದ ತಿಲಕವನವು ಮುಕ್ತಿಯ ಆದಿಸ್ಥಾನವಾಗಿರುತ್ತದೆ. ಅದ್ದರಿಂದ ಇದನ್ನು ಬಿಟ್ಟು ನಾನು ಹೋಗುವ ಬಗೆ ಹ್ಯಾಗೆ? ಈ ಕ್ಷೇತ್ರತ್ಯಾಗದಿಂದ ಹುಟ್ಟುವ ವಿಯೋಗವೆಂಬ ಬೆಂಕಿಯಿಂದ ಸುಡುತ್ತಿರುವ ನನಗೆ ರಾಜ್ಯಭೋಗದಿಂದ ಸುಖವು ಹ್ಯಾಗೆ ಆಗಬೇಕು? ವಿಶ್ವಾಸಘಾತತನ, ದುಷ್ಟತನ, ವಂಚಕತನ, ಪರದ್ರವ್ಯಾಭಿಲಾಷೆ ಇವೆಲ್ಲವುಗಳು ಇಲ್ಲದೆ ಇದ್ದ ನನಗೆ ಈ ತರದ ಫಲವು ಸಿಗಬೇಕೆ? ಎಂದು ವಿಲಾಪಮಾಡಿದನು.

# ೭ನೆಯ ಅಧ್ಯಾಯ.

## ಸ್ವಧರ್ಮಾಚರಣೆಯೇ ಶ್ರೇಯಸ್ಸಿಗೆ ಸಾಧನವು.

ಪದ್ಮರಾಜನು ಈ ಪ್ರಕಾರ ವಿಲಾಪಮಾಡಿ ಮುನಿಗಳನ್ನು ಕುರಿತು— "ಮುನೀಶ್ವರರೇ, ನೋಡಿರಿ ನನ್ನ ಭಾಗ್ಯವನ್ನು; ನೀವೇ ನನಗೆ ಸರ್ವಸ್ವವಾಗಿರುವಿರಿ; ಶಂಕರೀ ಕ್ಷೇತ್ರದಲ್ಲಿ ವಾಸಮಾಡಿದಾಗ್ಯೂ ನನಗೆ ವಿಘ್ನವು ಪ್ರಾಪ್ತವಾಗಿರುತ್ತದೆ. ಪೂರ್ವದಲ್ಲಿ ನೀವು ಆಡಿದ ವಚನವು ಸತ್ಯವಾಗಿದೆ. ಕಂಠಗತ ಪ್ರಾಣವಾಗಿದ್ದರೂ ಶ್ರೀ ಶಂಕರೀ ಕ್ಷೇತ್ರವನ್ನು ಬಿಡತಕ್ಕದ್ದಲ್ಲ. ಉತ್ತಮ ಕ್ಷೇತ್ರದಲ್ಲಿ ವಾಸಮಾಡಿದವರಿಗೆ ಬಹುವಿಧವಾದ ವಿಘ್ನಗಳು ಬರುವವು. ಪ್ರಾಣಗಳನ್ನು ತ್ಯಜಿಸುವ ಪ್ರಸಂಗವು ಒದಗಿದಾಗ್ಯೂ ಅದನ್ನು ಲೆಕ್ಕಿಸದೆ ಪ್ರಜೆಗಳನ್ನು ಪರಿಪಾಲನ ಮಾಡುವದು ರಾಜನ ಕರ್ತವ್ಯವೆಂದು ವೇದಶಾಸ್ತ್ರಗಳು ಹೇಳುತ್ತವೆ. ಸಮರಾಂಗಣದಲ್ಲಿ ಸಂಪಾದಿಸುವ ಜಯಕ್ಕಿಂತ ಹೆಚ್ಚಿನ ಧರ್ಮವು ರಾಜರಿಗೆ ಮತ್ತಾವ್ಯವದೂ ಇರುವದಿಲ್ಲ. ಆದರಂತೆ ಬ್ರಾಹ್ಮಣರಿಗೆ ದ್ರವ್ಯದಾನ ಮಾಡುವ ಧರ್ಮ, ಪ್ರಜೆಗಳಿಗೆ ಅಭಯವನ್ನು ಕೊಡುವ ಧರ್ಮ ಇವುಗಳಿಗಿಂತ ಅಧಿಕವಾದ ಧರ್ಮವು ರಾಜನಿಗೆ ಎಲ್ಲಿಂದ ಬರುವದು? ಯಾವ ರಾಜರು ಭೂಮಿಯ ಸಲುವಾಗಿ ಯುದ್ಧಗಳಲ್ಲಿ ಶತ್ರುಗಳಿಗೆ ಪರಾಙ್ಮುಖರಾಗದೆ, ಕಾಳಗಮಾಡುತ್ತಿರುವಾಗ ತಮ್ಮ ಶರೀರದಲ್ಲಿ ಆಯುಧಗಳು ನಟ್ಟು ಹತರಾಗುವರೋ ಅವರು, ಯೋಗಿಗಳು ಸ್ವರ್ಗವನ್ನು ಹೊಂದುವಹಾಗೆ ವೀರಸ್ವರ್ಗವನ್ನು ಪಡೆಯುವರು. ಅವರಿಗೆ ಹೆಜ್ಜೆಹೆಜ್ಜೆಗೆ ಯಜ್ಞಮಾಡಿದ ಫಲವು ಸಿಗುವದು. ರಣದಿಂದ ಓಡಿಹೋಗುವವರು, ರಣದಲ್ಲಿ ಹತರಾಗದವರು, ರಣಕ್ಕೆ ಪರಾಙ್ಮುಖರಾಗಿ ಓಡಿಹೋಗುವವರು ಇವರೆಲ್ಲರ ಸುಕೃತಗಳನ್ನು ಹೆದರದೆ ಯುದ್ಧವನ್ನು ಮಾಡುವ ರಾಜನು ಆಕರ್ಷಿಸುವನು. ಅಹಂವಾದಿಯು, ರಥವಿಲ್ಲದವನು, ರಣದಿಂದ ಹಿಂದಿರುಗುವವನು, ಯುದ್ಧಪ್ರೇಕ್ಷಕನು ಇವರೆಲ್ಲರನ್ನು ಸಮರದಲ್ಲಿ ಕೊಲ್ಲಬಾರದು. ಈ ಪ್ರಕಾರ ಯಾವ ರಾಜನು ಪರಾಕ್ರಮಿಯಾಗಿ ತನ್ನ ಪ್ರಾಣಗಳಿಗಿಂತ ಹೆಚ್ಚಾಗಿ ಪ್ರಜೆಗಳನ್ನು ಕಾಪಾಡುವನೋ ಅವನ ಅಭೀಷ್ಟಗಳು ಪೂರ್ಣವಾಗುವವಲ್ಲದೆ, ಅವನಿಗೆ ಐಹಿಕಪಾರತ್ರಿಕ ಸುಖವೂ

ಸಿಗುವದು. ಪರರಾಷ್ಟ್ರಗಳಿಂದ ಪೀಡಿತರಾದ ಪ್ರಜೆಗಳನ್ನು ಅಲಕ್ಷ್ಯಮಾಡುವ ರಾಜನು ಪ್ರಜಾಪೀಡೆಯ ದೋಷದಿಂದ ನರಕವನ್ನು ಪಡೆಯುವನು. ಇರಲಿ, ಆತ್ಮಹಿತವನ್ನಿಚ್ಛಿಸುವವನು ಭುಕ್ತಿಮುಕ್ತಿಪ್ರದಾಯಕವೂ ಪುಣ್ಯಾಕರವೂ ಆದ ಶಂಕರೀ ಕ್ಷೇತ್ರವನ್ನು ಎಂದಿಗೂ ಬಿಡಬಾರದು; ತಿಲಕವನದಲ್ಲಿ ದೊರೆಯುವ ಸುಖವು ಇಂದ್ರಾದಿಗಳಿಗೂ ದುರ್ಲಭವಾದದ್ದು. ಆದ್ದರಿಂದ ಅದನ್ನು ಅವರು ಯಾವಾಗಲೂ ಅಪೇಕ್ಷಿಸುತ್ತಾರೆ. ಅನ್ಯತ್ರದಲ್ಲಿ ರಾಜ್ಯವನ್ನಾಳಿದರೂ ಇಂಥ ಸುಖವು ಸಿಗುವದು ದುಸ್ತರವೇ ಸರಿ. ಭುಕ್ತಿಮುಕ್ತಿಪ್ರದವಾದ ಈ ತಿಲಕಾಖ್ಯ ಕ್ಷೇತ್ರವನ್ನು ಬಿಟ್ಟು ಅನ್ಯ ಕ್ಷೇತ್ರಗಳಲ್ಲಿ ಅನುರಾಗ ಮಾಡುವವನು ನಿಶ್ಚಯವಾಗಿ ನರಕದಲ್ಲಿ ಬೀಳುವನು. ಆದ್ದರಿಂದ ಹೇ ಸುವ್ರತರಾದ ಮುನಿಗಳೇ, ನನಗೆ ಎರಡೂ ಧರ್ಮಗಳು ಅಂದರೆ ಶಂಕರೀ ಕ್ಷೇತ್ರದಲ್ಲಿಯ ವಾಸ, ಹಾಗು ಪ್ರಜೆಗಳ ಸಂರಕ್ಷಣೆ ಇವೆರಡೂ ನನಗೆ ಪ್ರಾಪ್ತವಾಗುವ ಉಪಾಯವನ್ನು ಹೇಳಿರಿ. ನೀವು ಧರ್ಮಪರರೂ, ಶಾಂತರೂ, ಸತ್ಯಾದಿ ನಿಯಮಗಳನ್ನು ಪರಿಪಾಲಿಸುವವರೂ ಇರುವಿರಿ. ನೀವೆಲ್ಲರೂ ನನ್ನಮೇಲೆ ಕೃಪೆಯನ್ನಿಟ್ಟು ಒಂದು ನಿಶ್ಚಿತಮಾರ್ಗವನ್ನು ಹೇಳಬೇಕು.'

## ಪದ್ಮರಾಜನಿಗೆ ಮುನಿಗಳು ಹೇಳಿದ ಉಭಯಾರ್ಥಕ ಧರ್ಮ.

### (ನಿಜವಾದ ತೀರ್ಥಸ್ನಾನ)

ಪದ್ಮರಾಜನು ಮುನಿಗಳನ್ನು ಈ ಪ್ರಕಾರ ಪ್ರಶ್ನೆಮಾಡಿದ ಬಳಿಕ ಅವರು ಉಭಯಾರ್ಥಕವಾದ ಧರ್ಮವನ್ನು ಹೇಳಲಿಕ್ಕೆ ಉದ್ಯುಕ್ತರಾದರು:—"ಪರೋಪಕಾರಕ್ಕಾಗಿ ತಮ್ಮ ಪ್ರಾಣಗಳನ್ನು ಸಹ ದಾನಮಾಡಬೇಕೆಂಬುವದೇ ರಾಜರ ಶ್ರೇಷ್ಠವಾದ ಧರ್ಮವೆಂದು ಪೂರ್ವಜರಾದ ಪಂಡಿತರು ಹೇಳುತ್ತ ಬಂದಿರುವರು. ದಧೀಚ, ಉಂಛವೃತ್ತಿ ಮೊದಲಾದ ಋಷಿಗಳು ಶಿಬಿ, ಬಲಿ ಮೊದಲಾದ ರಾಜರು ಇವರೆಲ್ಲರು ಪರೋಪಕಾರ ಮಾಡುವದರಲ್ಲಿ ತಮ್ಮ ಅಸ್ಥಿರವಾದ ದೇಹವನ್ನು ವೆಚ್ಚ ಮಾಡಿ ಶಾಶ್ವತಪದವನ್ನು ಹೊಂದಿದರು. ಆದ್ದರಿಂದ ನೀನು ನಿನ್ನ ರಾಜ್ಯಕ್ಕೆ ಹೋಗಿ ವಿಧಿಪೂರ್ವಕವಾಗಿ ರಾಜ್ಯಪರಿಪಾಲನಮಾಡು. ಪ್ರಜೆಗಳ ಉಪಕಾರಕ್ಕೋಸ್ಕರವಾಗಿಯೇ ನೀನು ರಾಜ್ಯವನ್ನಾಳು. ನಿನ್ನ ಶರೀರವೃದ್ಧಿಪೋಷಣಕ್ಕಾಗಿ ರಾಜ್ಯಭಾರಮಾಡಬೇಡ. ನೀನು ಅನೇಕ ವಿಹಿತಕರ್ಮಗಳನ್ನು ಮಾಡಿ, ಅವುಗಳನ್ನು ನಿರ್ಗುಣನಾದ ಪರಮಾತ್ಮನಿಗೆ ನಿಷ್ಕಾಮದಿಂದ ಅರ್ಪಿಸು. ಪದ್ಮಪತ್ರವು ನೀರಿನಲ್ಲಿದ್ದರೂ ಅದು ನೀರಿನಿಂದ ಲಿಪ್ತವಾಗುವದಿಲ್ಲ; ಆ ಸರಂತೆ ನಿಷ್ಕಾಮಕರ್ಮ

ಗಳನ್ನು ಮಾಡುವ ನೀನು ಐಹಿಕಕರ್ಮಗಳನ್ನು ಬೇಕಾದಷ್ಟು ಮಾಡಿದರೂ ಅವು ಗಳ ಬಂಧನದಲ್ಲಿ ನೀನು ಸಿಗುವದಿಲ್ಲ. ಪರೋಪಕಾರಾರ್ಥವಾಗಿ ಬದ್ಧನಾದ ಮನುಷ್ಯನು ನಿಂತಸ್ಥಳದಲ್ಲಿಯೇ ಕಾಶೀ, ಕರವೀರ, ಗೋಮತಿ, ಭಾಗೀ ರಥೀ ಮೊದಲಾದ ಪುಣ್ಯನದಿಗಳೂ, ಪುಣ್ಯಕ್ಷೇತ್ರಗಳೂ ಬರುವವು. ನೈಮಿಷ, ಕುರುಕ್ಷೇತ್ರ, ಪಾಂಡುರಂಗ, ವಿರೂಪಾಕ್ಷ ಮೊದಲಾದ ಹದಿನೆಂಟು ಪೀಠಗಳಲ್ಲಿ ಶಂಕರೀಕ್ಷೇತ್ರವು ಶ್ರೇಷ್ಠವಾದದ್ದೂ, ಸಾಧಕಸ್ಥಿತಿಯಲ್ಲಿದ್ದ ಸಾಧಕನಿಗೆ ಪುಣ್ಯಪ್ರಾಪ್ತಿಯನ್ನು ಮಾಡಿಕೊಡುವಂಥಾದ್ದೂ ಇರುತ್ತದೆ. ಮಾನಸತೀರ್ಥ, ಭೌಮತೀರ್ಥಗಳೆಂದು ತೀರ್ಥಗಳು ಎರಡು ಪ್ರಕಾರದವಿರುತ್ತವೆ. ಅಂತರಂಗದ ಲ್ಲಿಯೇ ಇರುವ ತೀರ್ಥಗಳು ಮಾನಸತೀರ್ಥಗಳು; ಭೂಮಿಯ ಮೇಲೆ ಇರುವ ಶ್ರೀಶೈಲ, ಸೇತುಬಂಧನ ಮೊದಲಾದ ತೀರ್ಥಗಳು ಭೌಮತೀರ್ಥಗಳು. ಇನ್ನು ಮಾನಸತೀರ್ಥಗಳನ್ನು ಹೇಳುವೆವು. ಸತ್ಯ, ಕ್ಷಮೆ, ಇಂದ್ರಿಯನಿಗ್ರಹ, ಸರ್ವಭೂತದಯೆ, ಪರೋಪಕಾರ, ಸರಳತನ, ದಾನ, ತಪ, ಸಂತೋಷ, ಬ್ರಹ್ಮ ಚರ್ಯ, ಪ್ರಿಯವಾದಿತ್ವ, ಧೈರ್ಯ ಇವೆಲ್ಲ ಮಾನಸತೀರ್ಥಗಳು; ಇವೆಲ್ಲ ಪ್ರಾಣಿ ಗಳ ಅಂತರಂಗದಲ್ಲಿ ಇರತಕ್ಕ ತೀರ್ಥಗಳು. ಎಲ್ಲಕ್ಕೂ ಶ್ರೇಷ್ಠವಾದ ತೀರ್ಥ ವೆಂದರೆ ಜ್ಞಾನವು; ಮನಸ್ಸಿನವಿಶುದ್ಧಿಯೇ ಎಲ್ಲ ತೀರ್ಥಗಳಲ್ಲಿ ಶ್ರೇಷ್ಠವು. ದೇಹ ವನ್ನು ನೀರಿನಲ್ಲಿ ಮುಳುಗಿಸಿದ ಮಾತ್ರದಿಂದ ಅದಕ್ಕೆ ಸ್ನಾನವೆಂದೆನ್ನಕೂಡದು. ದಮ (ಇಂದ್ರಿಯ ನಿಗ್ರಹ) ವೆಂಬ ತೀರ್ಥದಲ್ಲಿ ಸ್ನಾನಮಾಡುವವನೇ ಸುಸ್ನಾತ ನೆಂದು ತಿಳಿಯಬೇಕು. ಶುದ್ಧಮನಸ್ಸುಳ್ಳವನೇ ಶುದ್ಧನೆಂದು (ಮತಿವಂತನೆಂದು) ಕರೆಯಬೇಕು. ಲುಬ್ಧನೂ, ವಂಚಕನೂ, ಕ್ರೂರನೂ, ದಾಂಭಿಕನೂ, ವಿಷಯಾ ಸಕ್ತನೂ ಆದವನು ಎಲ್ಲ ತೀರ್ಥಗಳಲ್ಲಿ ಸ್ನಾನಮಾಡಿದಾಗ್ಯೂ ಅವನು ಪಾಪರಹಿತ ನೆಂತಲೂ, ವಿಶುದ್ಧಮನಸ್ಸುಳ್ಳವನೆಂತಲೂ ಕರೆಯ ಕೂಡದು.

ಶರೀರದ ಮಲತ್ಯಾಗದಿಂದ ಮನುಷ್ಯನು ಎಂದಿಗೂ ನಿರ್ಮಲನಾಗಲಾರನು. ಮನಸ್ಸಿನ ಮಲವನ್ನು ತೊಳೆದುಕೊಂಡರೆ ಮಾತ್ರ ಅತ್ಯಂತ ನಿರ್ಮಲನಾಗುವನು. ಜಲಚರ ಪ್ರಾಣಿಗಳು ಜಲದಲ್ಲಿಯೇ ಹುಟ್ಟಿಸಾಯುವವು. ಆದರೆ ಅವು ಸ್ವರ್ಗಕ್ಕೆ ಎಂದಿಗೂ ಹೋಗಲಾರವು; ಹಾಗು ಅವುಗಳ ಮನಸ್ಸಿನ ಮಲವು ತೊಳೆದು ಹೋಗಿ ರುತ್ತದೆಂತಲೂ ತಿಳಿಯಕೂಡದು; ವಿಷಯಾಸಕ್ತಿಗೆ ಮನಸ್ಸಿನ ಮಲವೆಂದು ಕರೆ ಯುತ್ತಾರೆ; ಹಾಗೂ ವಿಷಯಗಳಲ್ಲಿ ವಿರಾಗವು (ಅಪ್ರೀತಿಯು) ಹುಟ್ಟಿದರೆ ಅದಕ್ಕೆ ನೈರ್ಮಲ್ಯವೆಂಬೆನ್ನಬೇಕು. ತನ್ನ ಇಂದ್ರಿಯಗಳನ್ನು ಬಿಗಿಹಿಡಿದು ನಡೆಯುವ

ಮನುಷ್ಯನು ಇರುವ ಸ್ಥಳಗಳಲ್ಲಿ ಕುರುಕ್ಷೇತ್ರ ನೈಮಿಷ, ಪುಷ್ಕರ ಮೊದಲಾದ ಕ್ಷೇತ್ರಗಳು ಇರುವವು; ಜ್ಞಾನದಿಂದ ಪೂತವಾದ, ರಾಗದ್ವೇಷಗಳ ಮಲವನ್ನು ಹರಣ ಮಾಡುವ, ಹಾಗೂ ಧ್ಯಾನವೆಂಬ ಜಲವುಳ್ಳ ಮಾನಸತೀರ್ಥದಲ್ಲಿ ಸ್ನಾನ ಮಾಡುವವನು ಪರಮಗತಿಯನ್ನು ಹೊಂದುತ್ತಾನೆ; ಆದ್ದರಿಂದ ಭೂಮಿಯ ಮೇಲಿನ ತೀರ್ಥಗಳಲ್ಲಿಯೂ ಮಾನಸತೀರ್ಥಗಳಲ್ಲಿಯೂ ಯಾವಾಗಲೂ ಸ್ನಾನಮಾಡುವ ಮನುಷ್ಯನು ಶ್ರೇಷ್ಠವಾದ ಗತಿಯನ್ನು ಪಡೆಯುವನು. ಎಲೈ ಪದ್ಮರಾಜನೇ, ನಾನು ನಿನಗೆ ಕ್ಷೇತ್ರವಾಸ ಫಲಪ್ರದವಾದ ಇನ್ನೊಂದು ಮಾತನ್ನು ಹೇಳುವೆನು. ಕ್ಷೇತ್ರಮಾಹಾತ್ಮ್ಯವನ್ನು ನಿತ್ಯದಲ್ಲಿ ಕೇಳುವವನಿಗೆ ಕ್ಷೇತ್ರವಾಸಮಾಡಿದ ಫಲವು ದೊರೆತು ಅವನು ಕ್ಷೇತ್ರವಾಸಿಯೆಂದೆನಿಸಿಕೊಳ್ಳುವನು. ಯಾವಮನುಷ್ಯನು ಯಾವ ಕ್ಷೇತ್ರಮಹಿಮೆಯನ್ನು ಶ್ರದ್ಧೆಯಿಂದ ನಿತ್ಯದಲ್ಲಿಯೂ ಕೇಳುವನೋ ಅವನಿಗೆ ಆಯಾ ಕ್ಷೇತ್ರದಲ್ಲಿ ವಾಸಮಾಡಿದ ಫಲವು ದೊರೆಯುವದೆಂಬದರಲ್ಲಿ ಸಂದೇಹವಿಲ್ಲ. ಕ್ಷೇತ್ರ ಮಾಹಾತ್ಮ್ಯವನ್ನು ಕೇಳಿ ಹೃದಯದಲ್ಲಿಯೇ ತೀರ್ಥವನ್ನು ಸೇವಿಸುವವನು ನಿಜವಾದ ತೀರ್ಥವಾಸ ಮಾಡುವ ಪುರುಷನೆಂದು ತಿಳಿಯತಕ್ಕದ್ದು. ಕಪ್ಪೆಗಳು ತೀರ್ಥಗಳ ಜಲದಲ್ಲಿ ವಾಸಮಾಡುವವು; ಆದರೆ ಅವುಗಳಿಗೆ ನಿಜವಾದ ತೀರ್ಥವಾಸಿಗಳೆಂದು ಕರೆಯಬಹುದೋ? ಎಲೈ ಪದ್ಮರಾಜನೇ, ಶ್ರೀ ಶಂಕರೀದೇವಿಯ ಕೃಪೆಯಿಂದ ನಿನಗೆ ವಂಶವರ್ಧಕನಾದ ಪುತ್ರನು ಹುಟ್ಟುವನು.''

## ಪದ್ಮರಾಜನಿಗೆ ದೇವಿಯ ಸಾಕ್ಷಾತ್ಕಾರ

ಪದ್ಮರಾಜನು ಮುನಿಗಳ ಈ ಉಪದೇಶವನ್ನು ಕೇಳಿ 'ಮಂತ್ರಿಗಳೇ' ನಾನು ಶ್ರೀಘ್ರವಾಗಿಯೇ ಪ್ರಜಾಪರಿಪಾಲನ ಮಾಡುವದಕ್ಕಾಗಿ ನನ್ನ ರಾಜಧಾನಿಗೆ ಬರುವೆನು, ಎಂದು ಮಂತ್ರಿಗಳಿಗೆ ಹೇಳಿದನು; ಬಳಿಕ ಅವನು ಶ್ರೀ ಶಂಕರೀದೇವಿಯನ್ನು ಪೂಜಿಸಿ ನಮಸ್ಕಾರ ಮಾಡಿ ದೇವಿಯನ್ನು ಕುರಿತು, "ಹೇ ದೇವಿಯೇ, ನಿನ್ನ ಕ್ಷೇತ್ರದಲ್ಲಿ ವಾಸಮಾಡುವವನೂ ಪ್ರಜಾಧಿಪನೂ ಆದ ನನ್ನನ್ನು ಎಲ್ಲಿ ತೆಗೆದುಕೊಂಡು ಹೋಗುವಿ? ಎಂದು ಕೇಳಿದನು; ಆಗ ದೇವಿಯು ಪ್ರತ್ಯಕ್ಷವಾಗಿ ರಾಜನಮುಂದೆ ಬಂದು ನಿಂತಳು. ಪದ್ಮರಾಜನು ಸಗುಣರೂಪಿಯಾದ ಶ್ರೀ ಮಹಾದೇವಿಯನ್ನು ನೋಡಿ, ನಮಸ್ಕರಿಸಿದನು. ಆಗ ಅವನ ಮೈಮೇಲೆ ರೋಮಾಂಚನಗಳೆದ್ದವು.

# ಪದ್ಮರಾಜಕೃತ ದೇವೀ ಸ್ತೋತ್ರ.

ಬಳಿಕ ಪದ್ಮರಾಜನು ಶ್ರೀ ದೇವಿಯನ್ನು ಯಥಾಮತಿಯಿಂದಲೂ, ವಿಧಿಪೂರ್ವಕವಾಗಿಯೂ, ಸ್ತೋತ್ರಮಾಡತೊಡಗಿದನು. "ಯಾವ ದೇವಿಯು ಸಿಂಹಾರೂಢಳೂ, ವಿಚಿತ್ರ ರತ್ನಭೂಷಿತಳೂ, ಪ್ರೇತಾಸನಸ್ಥನಾದ ಶಂಕರನ ಪತ್ನಿಯೂ ಆಗಿರುವಳೋ, ಯಾವಳ ಕೋಮಲವಾದ ಪಾದಗಳಲ್ಲಿ ವಿದ್ಯುತ್ತಿನಂತೆ ಪ್ರಕಾಶವಿರುವದೋ, ಯಾವ ಪಾದಗಳಲ್ಲಿ ನೂಪುರಗಳು (ಪೈಜಣಗಳು) ಶಬ್ದ ಮಾಡುವವೋ, ಯಾವಳು ವ್ಯಾಘ್ರಚರ್ಮದಂತೆ ವಿಚಿತ್ರವಾದ ಹಾಗು ರಕ್ತವರ್ಣವುಳ್ಳ ವಸ್ತ್ರವನ್ನು ಪರಿಧಾನಮಾಡಿರುವಳೋ, ಯಾವಳು ಯೋಗಪೀಠವನ್ನು ರಚಿಸಿ ಕುಳಿತಿರುವಳೋ, ಯಾವಳು ಮಾಣಿಕ್ಯಭೂಷಣಗಳಿಂದ ಅಲಂಕೃತಳಾಗಿರುವಳೋ ಅಂಥ ಶ್ರೀ ಶಂಕರಿಯು ನನ್ನನ್ನು ಸದಾರಕ್ಷಿಸಲಿ. ಹೇ ಜನರೇ, ಯಾವ ಮಹಾದೇವಿಯು ಭವ (ಸಂಸಾರ) ವೆಂಬ ರೋಗಕ್ಕೆ ಔಷಧರೂಪಳಾಗಿರುವಳೋ, ಯಾವಳು ಭಕ್ತರ ತಾಪವನ್ನು ಉಪಶಮನ ಮಾಡುವ ಚಂದ್ರನ ಬೆಳದಿಂಗಳಿನಂತೆ ತೋರುವಳೋ, ಯಾವಳು ತನ್ನ ಬಲಗೈಯಲ್ಲಿ ಪಾನಪಾತ್ರ, ಡಮರು ಖಡ್ಗ, ಶೂಲಗಳನ್ನು ಹಿಡಿದಿರುವಳೋ, ಅಂಥ ಶ್ರೀ ಶಂಕರಿಯನ್ನು, ಅರ್ಧಚಂದ್ರ ಭೂಷಣನಾದ ಶಿವನಿಂದಲೂ, ಯೋಗಿಗಳಿಂದಲೂ, ಸೇವಿತಳಾಗಿ, ಭಕ್ತರ ಪಂಚಕ್ಲೇಶಗಳನ್ನು ಅಪಹರಿಸುವವಳೂ, ಆದ ಸೋಮಶಂಕರಿಯ ರೂಪವನ್ನು ಧರಿಸಿ ನನ್ನನ್ನು ರಕ್ಷಿಸಲಿ. ಹೇ ಸರ್ವಮಂಗಲಮಾಂಗಲ್ಯಳೇ ಮಂಗಳವಾರ ದಿವಸ ಜಗತ್ತಿಗೆ ಮಂಗಲವನ್ನು ಕೊಡುವವಳೂ ಭಕ್ತರ ಪಾಪಗಳನ್ನು ನಾಶಮಾಡುವವಳೂ, ಆದ ಮಹಾಕಾಲಿಯ ರೂಪವನ್ನು ಧರಿಸಿ ನನಗೆ ವಿಜಯವನ್ನು ಕೊಡು. ಹೇ ದೇವಿಯೇ, ನೀನು ಶಮದಮಾದಿಗಳೇ ಆರು ಸಂಪತ್ತುಗಳುಳ್ಳ ಯೋಗಿಗಳ ಹೃದಯದಲ್ಲಿ ವಾಸಮಾಡುವವಳೂ, ಬುದ್ಧಿವಂತೆಯೂ, ಭಕ್ತಕಾಮ ಕಲ್ಪಲತೆಯೂ, ಆದ ನೀನು ಬುಧವಾರದಿನ ನನ್ನನ್ನು ರಕ್ಷಿಸು. ಹೇ ದೇವಿಯೇ ನೀನು ಗುರೂಪದೇಶ ಮಾರ್ಗರತಳೂ ಭೂಮಿಕೆಗಳಲ್ಲಿ ಇರುವವಳೂ, ನಿಷ್ಕಲಂಕ ಸ್ವರೂಪಿಯೂ, ಆಗಿ ಗುರುವಾರದಿನ ನನ್ನನ್ನು ರಕ್ಷಿಸು. ಶುಕ್ರವಾರದಿನ ಭವ (ಸಂಸಾರ) ಬೀಜವನ್ನು ನಾಶಮಾಡುವವಳೂ, ಶುದ್ಧ ಭಾವನೆಯುಳ್ಳ ಭಕ್ತರ ಹೃದಯದಲ್ಲಿ ವಾಸ ಮಾಡುವವಳೂ, ಯಜ್ಞಭಾಗ ಪ್ರದಾಯಕಳೂ, ಆದ ಭಾರ್ಗವೀ ರೂಪವನ್ನು ಧರಿಸಿ ನನ್ನನ್ನು ರಕ್ಷಿಸು; ಶನಿವಾರದಿನ ಶತಕುಂಭ ಭೂಷಣ ಶೋಭಿತವೇಷವುಳ್ಳವಳೂ, ಸರ್ವನಾದಗಳಿಂದ ಪೂರ್ಣಳೂ,

ಸರ್ವವ್ಯಾಪಕಳೂ, ಆಗಿ ನನ್ನನ್ನು ರಕ್ಷಿಸು. ಹೇ ಶಂಕರಿಯೇ, ನಾನು ನಿನಗೆ ನಮಸ್ಕರಿಸುವೆನು. ರಕ್ತ (ಕೆಂಪು) ಹಾಗು ಶುಕ್ಲ (ಬಿಳಿ) ಕಾಂತಿಗಳ ಮಿಶ್ರಣ ದಿಂದ ಶಾಂಭವಿ ಎಂಬ ಪದವಿಯಿಂದ ಭೂಷಿತಳಾದ ದೇವಿಯೇ, ಹೇ ದುರ್ಗೇ, ನಿನ್ನ ಉದಯವಾಗಲಿ. ಮಹಾ ಪ್ರಕಾಶವುಳ್ಳ ಶಂಕರಿಯೇ, ನಿನ್ನ ಉದಯವಾ ಗಲಿ. ತ್ರೈಲೋಕೇಶ್ವರಿಯೇ, ಕೃಪಾಯುಕ್ತಳೇ, ಮಹಾಚಂಡಿಯೇ, ಬಾದಾವಿ ಪುರವಾಸಿನಿಯೇ, ನೀನು ಉದಯಳಾಗು,''

ಈ ಪ್ರಕಾರ ದೇವಿಯನ್ನು ಸ್ತುತಿಸಿ ನಮಸ್ಕಾರಮಾಡಿ ಪದ್ಮರಾಜನು ಏಕಾ ಗ್ರಮನುಸ್ಸುಳ್ಳವನಾಗಿ ಸುಮ್ಮನೆ ನಿಂತುಕೊಂಡನು. ಅವನು ಮಾಡಿದ ಸ್ತೋತ್ರದಿಂದ ಸಂತುಷ್ಟಳಾದ ದೇವಿಯು, ''ರಾಜಶ್ರೇಷ್ಠನೇ, ಏಳು, ಏಳು, ನೀನು ಶೀಘ್ರವಾಗಿಯೇ ಪುತ್ರನನ್ನು ಪಡೆಯುವಿ; ಇಲ್ಲಿ ಆರು ತಿಂಗಳು ಇದ್ದು ಬಳಿಕ ನೀನು ನಿನ್ನ ಪಟ್ಟಣಕ್ಕೆ ಹೋಗತಕ್ಕದ್ದು. ನನ್ನ ಚರಿತ್ರ ಶ್ರವಣ ದಿಂದ ನಿನಗೆ ನನ್ನ ಕ್ಷೇತ್ರವಾಸದ ಫಲವು ದೊರೆಯುವದು. ನೀನು ಪ್ರತಿ ವರುಷ ವೈಶಾಖ ಮಾಸದಲ್ಲಿ ಕೂಡುವ ಜಾತ್ರೆಗೆ ಬಂದು ನನ್ನ ದರ್ಶನವನ್ನು ತೆಗೆದುಕೊ; ಅನೇಕ ಕುಲಧರ್ಮಗಳನ್ನು ಮಾಡು; ಆದರೆ ನಿನ್ನ ಮನೆಯಲ್ಲಿ ಕುಲದೇವತೆಯೇ ನಾನು ಆಗುವೆನು; ಹೇ ರಾಜನೇ, ನಿತ್ಯದಲ್ಲಿ ನೀನು ನನ್ನ ಪೂಜೆ ಯನ್ನು ಮಾಡಿದರೆ ನಿನಗೆ ಭೋಗ ಮೋಕ್ಷಗಳು ಸಿಗುವವು. ಪರಮಾರ್ಥವನ್ನು ಕೊಡುವ ಶಂಕರೀದೇವಿಯು ಯಾರ ಮನೆಯಲ್ಲಿರುವಳೋ, ಅವಳನ್ನು ಪೂಜಿ ಸಿದ ಮಾನವರಿಗೆ ಅವಳು ಸರ್ವಾರ್ಥಗಳನ್ನು ಕೊಡುವಳು. ಆದರೆ ಅವಳನ್ನು ಪೂಜಿಸದೆ ಇದ್ದರೆ ಅವರ ಮನೆಯು ಭಸ್ಮೀಭೂತವಾಗುವದು; ಇದುಸತ್ಯವಾದ ವಚನವೆಂದು ತಿಳಿ.'' ಎಂದು ಮಾತನಾಡಿದಳು.

ಈ ಪ್ರಕಾರ ದೇವಿಯು ಮಾತನಾಡಿದ್ದನ್ನು ಕೇಳಿ ಪದ್ಮರಾಜನು, ''ದೇವಿಯ ಮಹಾದಾಜ್ಞೆಯೇ ಪ್ರಮಾಣವೆಂದು ಅವಳ ಆಜ್ಞೆಯನ್ನ ಶಿರಸಾಮಾನ್ಯಮಾಡಿ ಆಕೆಗೆ ಪುನಃ ನಮಸ್ಕರಿಸಿ ಕೋಟಿತೀರ್ಥ, ಭಾನುತೀರ್ಥ, ಅಶ್ವತ್ಥಾಮತೀರ್ಥ, ಮೊದಲಾದ ತೀರ್ಥಗಳಲ್ಲಿ ಸ್ನಾನ ಮಾಡಿ ಬ್ರಾಹ್ಮಣರಿಗೆ ದಾನಾದಿಗಳನ್ನು ಕೊಟ್ಟು ಕ್ಷೇತ್ರಕೃತ್ಯಾದಿಗಳನ್ನು ಮುಗಿಸಿದನು. ಆ ಪದ್ಮರಾಜನ ಪತಿವ್ರತೆಯೂ ಗುಣ ವಂತಿಯೂ ಆದ ಪತ್ನಿಯು ಶ್ರೀ ಶಂಕರೀ ಕೃಪೆಯಿಂದ ಷೋಡಶ ಕಲೆಗಳಿಂದ ಯುಕ್ತವಾದ ಗರ್ಭವನ್ನು ಧಾರಣ ಮಾಡಿದಳು.

## ಪತಿವ್ರತೆಯ ಲಕ್ಷಣಗಳು.

ಪತಿವ್ರತಾ ಎಂಬ ಶಬ್ದವನ್ನು ಕೇಳಿದ ಕೂಡಲೆ ಲೋಪಾಮುದ್ರೆಯು ಅಗಸ್ತ್ಯರನ್ನು ಕುರಿತು—"ಮಹಾಮುನಿಯೇ, ಪತಿವ್ರತಾ ಮಾಹಾತ್ಮ್ಯವನ್ನು ಹೇಳಿರಿ. ಆ ಧರ್ಮವನ್ನು ಕೇಳಿ ನಾನು ಶಾಶ್ವತವಾದ ಗತಿಯನ್ನು ಹೊಂದುವೆನು ಎಂದು ಕೇಳಿದಳು. ಪ್ರಿಯಪತ್ನಿಯ ಆಹ್ಲಾದಕಾರಕ ವಚನವನ್ನು ಕೇಳಿ ಅಗಸ್ತ್ಯರು ಶ್ರೀದೇವಿಯು ತನಗೆ ಹೇಳಿದ ಪತಿವ್ರತೆಯರ ಮುಖ್ಯ ಧರ್ಮಗಳನ್ನು ಹೇಳಲಿಕ್ಕೆ ಆರಂಭಿಸಿದರು. ದೇವಿಯು ಅಗಸ್ತ್ಯರಿಗೆ ಹೇಳಿದ್ದೇನಂದರೆ:—"ಪತಿವ್ರತಾಧರ್ಮಪರಾಯಣಳಾದ ಪದ್ಮರಾಜನ ರಾಜ್ಞಿಯು ತನ್ನ ಮಗನು ಚಿತೆಯಲ್ಲಿ ಬಿದ್ದದ್ದನ್ನು ನೋಡಿದಾಗ್ಯೂ ತನ್ನ ಗಂಡನನ್ನು ಎಬ್ಬಿಸಲಿಲ್ಲ; ಹಾಗು ಅವನಿಗೆ ತಿಳಿಸಲಿಲ್ಲ. ಆದರೆ ಪಾತಿವ್ರತ್ಯದ ಶಕ್ತಿಯಿಂದ ಪೀಡಿತನಾದ ಅಗ್ನಿಯು ತಾನೇ ಚಂದನದಂತೆ ಶೀತಲನಾದನು ಶಿಶುವಿಗೆ ಏನೂ ಅಪಾಯವಾಗಲಿಲ್ಲ; ಭಾರತಾದಿ ಪುರಾಣಗಳಲ್ಲಿ ಪತಿವ್ರತೆಯರ ಕಥೆಗಳು ಹೇಳಲ್ಪಟ್ಟಿವೆ. ಅಗಸ್ತ್ಯಮುನಿಯೇ, ನಿನಗೆ ಇಂದ್ರಲೋಕದ ಆಶೆಯಾದರೂ ಇರುವದಿಲ್ಲೆಂದು ನಾನು ತಿಳಿಯುತ್ತೇನೆ; ಯಾರ ಮನೆಯಲ್ಲಿ ಪತಿವ್ರತಾಸ್ತ್ರೀಯು ಇರುವಳೋ ಅವರಿಗೆ ತಪಸ್ಸಿನಿಂದ ಪ್ರಯೋಜನವೇನು? ಕಲ್ಪವೃಕ್ಷದ ಆಶ್ರಯವನ್ನು ಹೊಂದಿದ ಮನುಷ್ಯನಿಗೆ ದಾರಿದ್ರ್ಯದ ಭಯವೇ ಇಲ್ಲ. ಯಾರ ಮನೆಯಲ್ಲಿ ಪತಿವ್ರತೆಯಾದ ಸತಿಯು ಸತ್ಯವತಿಯೂ, ಮಂಗಲಪ್ರದಳೂ, ಸಹಧರ್ಮಚಾರಿಣಿಯೂ ಆಗಿರುವಳೋ ಅಲ್ಲಿ ಎಲ್ಲವೂ ಇರುತ್ತವೆ. ಪತಿವ್ರತೆಯರಲ್ಲಿ ಅರುಂಧತಿ, ಸಾವಿತ್ರಿ, ಅನುಸೂಯಾ, ಶಾಂಡಿಲಿ, ಮಹಾಲಕ್ಷ್ಮೀ, ಪಾರ್ವತೀ, ಮೇನಕಾ, ಸುನೀತಿ, ಸಂಜ್ಞಾದೇವಿ, ಸ್ವಾಹಾದೇವಿ ಇವರಿಗೆ ಸಮಾನರಾದ ಶ್ರೇಷ್ಠ ಪತಿವ್ರತೆಯರು ಎಲ್ಲಿಯೂ ಇರುವದಿಲ್ಲೆಂದು ಹೇಳುವರು. ಪತಿವ್ರತೆಯ ಧರ್ಮವನ್ನು ಕೇಳು. ಪತಿವ್ರತಾಸ್ತ್ರೀಯು ಪತಿಯು ಉಂಡರೆ ತಾನು ಉಣ್ಣುವಳು. ಪತಿಯು ಕಳಿತರೆ ತಾನು ಕೂಡ್ರುವಳು; ಪತಿಯು ಮಲಗಲು ತಾನು ಮಲಗುವಳು; ಹಾಗು ಪತಿಯು ಏಳುವದಕ್ಕಿಂತ ಮುಂಚಿತವಾಗಿಯೇ ಏಳುವಳು. ಗಂಡನ ಹೆಸರನ್ನು ಪತಿವ್ರತೆಯು ತಕ್ಕೊಳ್ಳಬಾರದು. ಪತಿಯ ಆಯುಷ್ಯದ ವೃದ್ಧಿಗೋಸ್ಕರ ತನ್ನ ಗಂಡನ ಹೆಸರನ್ನು ಉಚ್ಚರಿಸಬಾರದು. ಕಾರಣಾಂತರದಿಂದ ಅನ್ಯ ಪುರುಷರ ಹೆಸರನ್ನಾದರೂ ಎಂದಿಗೂ ಉಚ್ಚರಿಸಬಾರದು. ಯಾವದೊಂದು ಕಾರ್ಯಾರ್ಥವಾಗಿ ಪತಿಯು ಅನ್ಯ

ಗ್ರಾಮಕ್ಕೆ ಹೋದಾಗ ಪತಿವ್ರತೆಯು ಆಭರಣಗಳನ್ನು ಮೈಮೇಲೆ ಧರಿಸಬಾರದು. ಗಂಡನು ಸಿಟ್ಟಿಗೆದ್ದು ಆಕ್ರೋಶಮಾಡಿದಾಗ್ಯೂ ಪತಿವ್ರತೆಯು ಗಂಡನ ಮೇಲೆ ಸಿಟ್ಟುಮಾಡಬಾರದು. ಗಂಡನು ತನ್ನನ್ನು ಹೊಡೆದರೂ ಪತಿವ್ರತೆಯು ಸಂತೋಷದಿಂದ ಇರುವಳು. ಹೇ ಸ್ವಾಮಿಯೇ, ನಾನು ಮಾಡಿದ್ದನ್ನು ಮಾನ್ಯಮಾಡಿ ನಿಮ್ಮ ಮನಸ್ಸಿಗೆ ಬಂದಹಾಗೆ ಮಾಡಬೇಕೆಂದು ವಿನಯದಿಂದ ಗಂಡನಿಗೆ ಹೇಳುವಳು. ತನ್ನ ಗಂಡನು ಯಾವದನ್ನು ಮುಂದಿಗೆ ಕೊಡುವದಿಲ್ಲವೋ ಅದನ್ನು ಅವಳು ಯಾರಿಗೂ ಕೊಡುವದಿಲ್ಲ. ಪತಿವ್ರತೆಯು ತನ್ನ ಮನೆ ಬಾಗಿಲಲ್ಲಿ ಬಹಳ ಹೊತ್ತಿನವರೆಗೆ ನಿಲ್ಲುವದಿಲ್ಲ. ಹಾಗು ಎರಡನೆಯವರ ಮನೆಯ ಬಾಗಿಲಿಗೆ ಹೋಗುವದಿಲ್ಲ. ತನ್ನ ಪತಿಯು ಕರೆದಕೂಡಲೆ ಪತಿವ್ರತೆಯು ತನ್ನ ಕೈಯೊಳಗಿದ್ದ ಮನೆಗೆಲಸವನ್ನಾದರೂ ಬಿಟ್ಟು ಪತಿಯ ಹತ್ತರಹೋಗಿ,, "ಪ್ರಾಣನಾಥನೇ, ನನ್ನನ್ನು ಯಾಕೆ ಕರೆಯೋಣವಾಯಿತು? ಆಜ್ಞೆಯನ್ನು ಮಾಡಬೇಕು" ಎಂದೆನ್ನುವಳು. ಅವಳು ಪೂಜೆಯ ಸಾಮಾನುಗಳನ್ನು ಕ್ರಮವಾಗಿ ತಾನೇ ತನ್ನ ಪತಿಗೆ ಒಯ್ದುಕೊಡುವಳು. ಪೂಜೆಯ ಕಾಲವನ್ನು ನಿರೀಕ್ಷಿಸುತ್ತಿರುವ ಅವಳು ನಿರ್ಮಲೋದಕ, ದರ್ಭೆಗಳು, ಪತ್ರಪುಷ್ಪಗಳು, ಅಕ್ಷತೆ ಮೊದಲಾದ ಸಾಮಾನುಗಳನ್ನು ಯೋಗ್ಯಕಾಲಕ್ಕೆ ಬಹು ಹರ್ಷದಿಂದ ಬೇಸರಿಕೆಯಿಲ್ಲದೆ ಒಯ್ದು ಕೊಡುವಳು. ಪತಿಯು ಉಂಡು ಬಿಟ್ಟುಳಿದ ಮಿಷ್ಟಾನ್ನ ಫಲಾದಿಗಳನ್ನು ಮಹಾ ಪ್ರಸಾದವೆಂದು ಪತಿವ್ರತೆಯು ಸೇವಿಸುವಳು. ದೇವರು, ಪಿತೃಗಳು, ಅತಿಥಿಗಳು, ಪರಿಚಾರಕರು, ಗಂಡನ ಮನೆತನದವರು ಇವರೆಲ್ಲರಿಗೆ ಅನ್ನವನ್ನು ಹಂಚಿಹಾಕದೆ ಪತಿವ್ರತೆಯು ತಾನೊಬ್ಬಳೇ ಎಂದಿಗೂ ಉಣ್ಣಬಾರದು. ಗಂಡನು ತನಗೆ ಅನುಜ್ಞೆಯನ್ನು ಕೊಟ್ಟರೆ ಮಾತ್ರ ಅವಳು ಉಪವಾಸವ್ರತಾದಿಗಳನ್ನು ಮಾಡಬೇಕು. ಅವಳು ಕೋಪವನ್ನು ದೂರಿನಿಂದಲೇ ನಮಸ್ಕರಿಸಿ ಬಿಡಬೇಕು. ಸರಿಜನರ ಉತ್ಸವದರ್ಶನವನ್ನಾದರೂ ಅವಳು ತೆಗೆದುಕೊಳ್ಳಬಾರದು; ಪತಿವ್ರತೆಯು ತೀರ್ಥಯಾತ್ರೆ, ವಿವಾಹ ಮೊದಲಾದವುಗಳನ್ನು ನೋಡಲಿಕ್ಕೆ ಹೋಗಬಾರದು. ಸ್ತ್ರೀಧರ್ಮಾನುಸಾರಿಣಿಯಾದ ಪತಿವ್ರತೆಯು ರಜಸ್ವಲೆಯಾದಾಗ ೩ ರಾತ್ರಿ ತನ್ನ ಮುಖವನ್ನು ಯಾರಿಗೂ ತೋರಿಸಬಾರದು. ತಾನು ಸ್ನಾನದಿಂದ ಶುದ್ಧಳಾಗುವವರೆಗೆ ವೇದಮಂತ್ರಸ್ತೋತ್ರಗಳು ತನ್ನ ಕಿವಿಗೆ ಬೀಳದಹಾಗೆ ದೂರ ಇರಬೇಕು. ಅವಳು ನಾಲ್ಕನೆಯ ದಿವಸ ಸುಸ್ನಾತಳಾದಬಳಿಕ ಅನ್ಯರ ಮುಖವನ್ನು ನೋಡದೆ ಮೊದಲು ಪತಿಯ ಮುಖವನ್ನೇ ನೋಡಬೇಕು. ಅಥವಾ ಅವಳು ಮನಸ್ಸಿನಲ್ಲಿ ಪತಿಯನ್ನು

ಧ್ಯಾನಿಸಬೇಕು. ಇಲ್ಲವೆ ಸೂರ್ಯನನ್ನು ನೋಡಬೇಕು. ಎಂಥ ಆತುರತೆಯು ಕೆಲ ಸಗಳು ಒದಗಿದಾಗ್ಯೂ ಪತಿವ್ರತೆಯು ಸುಖವಾಗಿ ನಿದ್ರೆ ಮಾಡುತ್ತ ಮಲಗಿಕೊಂಡಂಥ ಸುಖವಾಗಿ ಕುಳಿತಂಥ, ಸ್ವಚ್ಛಂದವಾಗಿ ರಮಮಾಣ ಮಾಡುವಂಥ, ಪತಿಯನ್ನು ಎಬ್ಬಿಸಬಾರದು. ಗಂಡನ ಆಯುಷ್ಯವೃದ್ಧಿಯನ್ನು ಇಚ್ಛಿಸುವ ಪತಿವ್ರತೆಯು ಅರಿಶಿನ, ಕುಂಕುಮ, ಸಿಂದೂರ, ಕಾಡಿಗೆ, ಕರ್ಪೂರಗಳನ್ನು ಹಚ್ಚಿಕೊಳ್ಳಬೇಕು; ತಾಂಬೂಲಾದಿಗಳನ್ನು ಸೇವಿಸಬೇಕು; ಬೆರಳುಗಳಲ್ಲಿ ಉಂಗುರಗಳನ್ನು ಹಾಕಿಕೊಳ್ಳಬೇಕು; ಕೂದಲುಗಳನ್ನು ಹಿಕ್ಕಿ ಹೆಳಲು ಹಾಕಿಕೊಳ್ಳಬೇಕು; ಕೈಗಳಲ್ಲಿ ಬಳೆಗಳನ್ನಿಟ್ಟುಕೊಂಡು ಕಿವಿಗಳಲ್ಲಿ ಬೆಂಡವಲಿ ಮೊದಲಾದ ಆಭರಣಗಳನ್ನು ಧಾರಣ ಮಾಡಬೇಕು. ಈ ಅಲಂಕಾರಗಳನ್ನು ಎಂದಿಗೂ ತಿರಸ್ಕರಿಸಬಾರದು; ಆಕೆಯು ಒರಳು, ಒನಿಕೆ, ಕಸಬರಿಗೆ, ಬೀಸುವ ಕಲ್ಲು, ಯಂತ್ರ, ಹೊಸ್ತಲು ಇವುಗಳ ಮೇಲೆ ಕೂಡ್ರಬಾರದು; ಪತಿವ್ರತೆಯು ಸಮಯವನ್ನು ನೋಡದೆ ನಿರ್ಭೀಡೆಯಿಂದಲೂ, ಉದ್ಧಟತನದಿಂದಲೂ ಆಚರಣೆ ಮಾಡಬಾರದು. ಗಂಡನು ಯಾವಯಾವ ವಸ್ತುಗಳನ್ನು ಪ್ರೀತಿಸುವನೋ ಆಯಾ ವಸ್ತುಗಳಲ್ಲಿ ತಾನು ಪ್ರೇಮವನ್ನು ಇಡಬೇಕು; ಗಂಡನು ಸಂತುಷ್ಟನಾದರೆ ತಾನು ಆನಂದಪಡಬೇಕು; ಗಂಡನು ಖಿನ್ನನಾದರೆ ತಾನೂ ಖಿನ್ನಳಾಗಬೇಕು; ಗಂಡನ ಸಂಪತ್ತಿನಲ್ಲಿಯೂ, ವಿಪತ್ತಿನಲ್ಲಿಯೂ ಪತಿವ್ರತೆಯು ಏಕರೂಪಳಾಗಿ ಇರಬೇಕು. ತೀರ್ಥ ಸ್ನಾನವನ್ನಿಚ್ಛಿಸುವ ಸ್ತ್ರೀಯಳು ತನ್ನ ಗಂಡನ ಪಾದೋದಕವನ್ನು ಸೇವಿಸಬೇಕು. ಸ್ತ್ರೀಯರಿಗೆ ಶಂಕರ ವಿಷ್ಣುಗಳಿಗಿಂತಲೂ ಪತಿಯೇಶ್ರೇಷ್ಠನು; ಪತಿಯನ್ನು ಬಿಟ್ಟು ಅಥವಾ ಅವನ ಅಜ್ಞೆಯಹೊರತು ಯಾವ ಸ್ತ್ರೀಯು ವ್ರತೋಪವಾಸನಿಯಮಾದಿಗಳನ್ನು ಮಾಡುವಳೋ ಅವಳ ಪಾಲಿಗೆ ಅವೆಲ್ಲ ನಿಷ್ಫಲವಾಗುವವೆಂದು ತಿಳಿಯಬೇಕು. ಇದರಲ್ಲಿ ಎರಡನೆಯ ಯಾವ ವಿಚಾರವನ್ನೂ ಮಾಡಬಾರದು. ಸ್ತ್ರೀಯರಿಗೆ ಇದೇ ಅಧಿಕವಾದ ವ್ರತವು; ಇದೇ ದೊಡ್ಡ ತಪಸ್ಸು; ಇದೇ ದೇವರ ಪೂಜೆಯು; ಪತಿವ್ರತೆಯು ಗಂಡನ ವಾಕ್ಯವನ್ನು ಎಂದಿಗೂ ಮೀರಿನಡೆಯಬಾರದು. ಗಂಡನು ತನಗೆ ಸಿಟ್ಟುಮಾಡಿದಾಗ ಯಾವಸ್ತ್ರೀಯು ಸಿಟ್ಟಿಗೆದ್ದು ಅವನಿಗೆ ಪ್ರತ್ಯುತ್ತರವನ್ನು ಕೊಡುವಳೋ ಅವಳು ಮುಂದೆ ಗ್ರಾಮದಲ್ಲಿ ನಾಯಿಯಾಗಿ ಇಲ್ಲವೆ ಅಡವಿಯಲ್ಲಿ ನರಿಯಾಗಿ ಹುಟ್ಟುವಳು. ಸ್ತ್ರೀಯರಿಗೆ ಇದೊಂದೇ ಪರಮಶ್ರೇಷ್ಠವಾದ ನಿಯಮವು ಹೇಳಲ್ಪಟ್ಟಿದೆ. ನಾರಿಯು ತನ್ನ ಗಂಡನ ಪಾದಗಳನ್ನು ಪೂಜಿಸಿ ಬಳಿಕ ತಾನು ಉಣ್ಣಬೇಕು. ಯಾವ ದುಷ್ಟ ಸ್ತ್ರೀಯು ತನ್ನ ಗಂಡನನ್ನು ಬಿಟ್ಟು ಬೇರೆ

ಮಲಗುವಳೋ ಅವಳು ವೃಕ್ಷದ ಹೊದರುಗಳಲ್ಲಿರುವ ಕ್ರೂರಪ್ರಾಣಿಯಾದ ಗೂಗೆಯಾಗಿ ಹುಟ್ಟುವಳು. ಗಂಡನು ಹೊಡೆದರೆ ಅವನನ್ನು ತಿರುಗಿ ಹೊಡೆಯುವವಳು ದನಗಳನ್ನು ತಿನ್ನುವ ಹುಲಿಯಾಗಿ ಹುಟ್ಟುವಳು. ಅನ್ಯ ಪುರುಷನನ್ನು ತನ್ನ ಕಟಾಕ್ಷಗಳಿಂದ (ಓರೆನೋಟದಿಂದ) ತನ್ನ ಕಡೆಗೆ ಆಕರ್ಷಿಸುವ ಸ್ತ್ರೀಯು ಮುಂದೆ ಮೆಳ್ಳಗಣ್ಣುಗಳುಳ್ಳವಳಾಗಿರುವಳು.

ಪತಿಯು ಹೊರಗಿಂದ ಬಂದಕೂಡಲೆ ಪತಿವ್ರತೆಯಾದ ಸ್ತ್ರೀಯು ಅವನಿಗೆ ಕಾಲು ತೊಳೆದುಕೊಳ್ಳುವದಕ್ಕೆ ನೀರನ್ನೂ ಕೂಡ್ರುವದಕ್ಕೆ ಆಸನವನ್ನೂ ಕೊಟ್ಟು ತಾಂಬೂಲ ಕೊಡೋಣ, ಗಾಳೀಬೀಸೋಣ, ಪಾದಸಂವಾಹನ(ಕಾಲು ಒತ್ತುವದು) ಮೊದಲಾದವುಗಳಿಂದ ಸಂತೋಷಪಡಿಸಿ ಅವನನ್ನು ಯಾವಾಗಲೂ ನಮ್ರತೆಯಿಂದ ಪೂಜಿಸಬೇಕು. ಗಂಡನೇ ದೇವರು, ಗಂಡನೇ ಗುರುವು, ಗಂಡನೇ ಧರ್ಮತೀರ್ಥ ವ್ರತಾದಿಗಳು; ಆದ್ದರಿಂದ ಸ್ತ್ರೀಯು ಸರ್ವಪ್ರಯತ್ನಗಳನ್ನು ಮಾಡಿ ಪತಿಯನ್ನು ಪೂಜಿಸಬೇಕು. ಯಾವ ಸ್ತ್ರೀಯಳು ಪತಿಯು ಸಾಕ್ಷಾತ್ ಶ್ರೀ ಹರಿಯೆಂದು ತಿಳಿದು ಅವನನ್ನು ಭಜಿಸುವಳೋ ಅವಳು ಗಂಡನನ್ನು ಕೂಡಿಕೊಂಡು ವೈಕುಂಠ ಲೋಕದಲ್ಲಿ ಆನಂದವನ್ನು ಪಡೆಯುವಳು. ಸ್ತ್ರೀಯರಿಗೆ ತಂದೆಯು, ಅಣ್ಣ-ತಮ್ಮಂದಿರು, ಮಕ್ಕಳು ಅಲ್ಪ ಸುಖವನ್ನು ಕೊಡುವರು. ಆದರೆ ಗಂಡನುಮಾತ್ರ ಅನುಪಮವಾದ ಸುಖವನ್ನು ಕೊಡುವನು. ಆದ್ದರಿಂದ ಗಂಡನನ್ನು ಪೂಜಿಸಬೇಕು. ಜೀವಹೋದ ಬಳಿಕ ದೇಹವು ಅಪವಿತ್ರವಾಗುವಂತೆ ಗಂಡನೇ ಇಲ್ಲದ ಸ್ತ್ರೀಯಳು (ವಿಧವೆ) ಅತ್ಯಂತ ಅಶುದ್ಧಳು. ಆಕೆಯ ದರ್ಶನದಿಂದ ಎಲ್ಲಿ ಹೋದರೂ ಕಾರ್ಯಸಿದ್ಧಿಯಾಗುವದಿಲ್ಲ. ಕನ್ಯಾವಿವಾಹ ಸಮಯದಲ್ಲಿ ಬ್ರಾಹ್ಮಣರು, "ಗಂಡನು ಇರುವವರೆಗೆ ನೀನು ಅವನ ಸಹಧರ್ಮಚಾರಿಣಿಯಾಗಿರು ಎಂದು ಹೇಳುವರು. ಗಂಡನು ಮೃತನಾಗಲು ಸ್ಮಶಾನದಲ್ಲಿ ಹೋಗಿ ಗಂಡನ ಹಿಂದೆ ಸಹಗಮನ ಮಾಡುವ ಸ್ತ್ರೀಯಳಿಗೆ ಹೆಜ್ಜೆಹೆಜ್ಜೆಗೆ ಅಶ್ವಮೇಧ ಮಾಡಿದ ಫಲವು ದೊರೆಯುವದು. ಇದರಲ್ಲಿ ಸಂಶಯವಿಲ್ಲ. ಸರ್ಪವನ್ನು ಹಿಡಿಯುವವನು ಸರ್ಪವನ್ನು ಹುತ್ತದೊಳಗಿಂದ ಹೊರಗೆ ಬೋರಿನಿಂದ ಜಗ್ಗುವಂತೆ ಪತಿವ್ರತೆಯು ಯಮದೂತರನ್ನು ಕರಿಸಿ ಅವರಿಂದ ತನ್ನ ಗಂಡನನ್ನು ಕಸಕೊಂಡು ಹೋಗುವಳು. ಯಮದೂತರು ಪತಿವ್ರತಾ ಸ್ತ್ರೀಯನ್ನುನೋಡಿ ಓಡಿಹೋಗುವರು. ಗಂಡನು ಎಷ್ಟು ದುಷ್ಟನಿದ್ದಾಗ್ಯೂ ಅವನನ್ನು ಬಿಟ್ಟುಹೋಗದ ಪತಿವ್ರತೆಯ ಮೈಮೇಲೆ ಎಷ್ಟು ಕೂದಲುಗಳು ಇರುವವೋ ಅಷ್ಟು ಕೋಟಿ ಯುಗಗಳವರೆಗೆ ಅವಳು ಗಂಡನ ಸಂಗಡ ರಮಮಾಣಳಾಗಿ ಸ್ವರ್ಗ ಸುಖ

ವನ್ನು ಅನುಭೋಗಿಸುವಳು. ಪಿತೃವಂಶಗಳು, ಮಾತೃವಂಶಗಳು, ಭರ್ತೃವಿನ ವಂಶಗಳು ಇವೆಲ್ಲ ವಂಶಗಳು ಪತಿವ್ರತೆಯ ಪುಣ್ಯದಿಂದ ಸ್ವರ್ಗಸೌಖ್ಯವನ್ನು ಅನುಭೋಗಿಸುವವು. ಜಲವೂ ಕೂಡ ನಿತ್ಯದಲ್ಲಿಯೂ ಪತಿವ್ರತೆಯ ಸ್ಪರ್ಶವನ್ನು ಬಯಸುವದು. ಹೆಂಡತಿಯು ಧರ್ಮ-ಫಲಪ್ರಾಪ್ತಿಗೂ ಸಂತಾನದ ಅಭಿವೃದ್ಧಿಗೂ ಸಾಧನವಾಗಿರುವಳು; ಹೆಂಡತಿಯಿಂದ ಇಹಲೋಕ-ಪರಲೋಕಗಳೆರಡೂ ಲಭಿಸುವವು. ಪತಿವಿಹೀನಳಾದ ನಾರಿಯು (ವಿಧವೆಯು) ಮಂಚ-ಪಲ್ಲಂಗಗಳ ಮೇಲೆ ಮಲಗಿಕೊಳ್ಳಕೂಡದು. ಅದರಿಂದ ಅವಳ ಪತಿಯು ಅಧೋಗತಿಗೆ ಇಳಿಯುವನು. ಪತಿಗೆ ಒಳ್ಳೇ ಲೋಕವು ಸಿಗಬೇಕೆಂದು ಬಯಸುವ ವಿಧವೆಯು ಭೂಮಿಯಮೇಲೆ ಮಲಗಿಕೊಳ್ಳಬೇಕು. ವಿಧವಾಸ್ತ್ರೀಯು ತನ್ನ ದೇಹಕ್ಕೆ ಸುಗಂಧದ್ರವ್ಯಗಳ ಲೇಪನವನ್ನು ಮಾಡಿಕೊಳ್ಳಬಾರದು. ಪುನಃ ಆಕೆಯು ಸಂಭೋಗೇಚ್ಛೆಯನ್ನು ತಾಳಬಾರದು. ದಿನಾಲು ಆಕೆಯು ಕುಶತಿಲೋದಕಗಳಿಂದ ಗಂಡನಿಗೆ ತರ್ಪಣವನ್ನು ಕೊಡಬೇಕು. ಪತಿಯನ್ನೇ ತಾನು ಪೂಜಿಸುವೆನೆಂದು ತಿಳಿದು ಅದೇ ಬುದ್ಧಿಯಿಂದ ವಿಷ್ಣು, ಶಂಕರ ಮೊದಲಾದ ದೇವತೆಗಳ ಪೂಜನವನ್ನು ಮಾಡಬೇಕು. ಪತಿಬುದ್ಧಿಯಿಲ್ಲದೆ ಯಾವ ದೇವತೆಯ ಪೂಜನವನ್ನೂ ಮಾಡಲಿಕ್ಕೆ ಅವಳಿಗೆ ಅಧಿಕಾರವಿರುವದಿಲ್ಲ. ವೈಶಾಖ, ಕಾರ್ತಿಕ, ಮಾಘಮಾಸಗಳಲ್ಲಿ ವಿಶೇಷ ನಿಯಮಗಳನ್ನು ಆಚರಿಸಬೇಕು. ಆ ಮಾಸಗಳಲ್ಲಿ ಅವಳು ಸ್ನಾನ ದಾನ ತೀರ್ಥ ಯಾತ್ರೆಗಳನ್ನು ಮಾಡಿ ಯಾವಾಗಲೂ ವಿಷ್ಣುವಿನ ಸ್ಮರಣವನ್ನು ಮಾಡುತ್ತಿರಬೇಕು. ಹತ್ತಿಯ ಬತ್ತಿಗಳನ್ನು ತುಪ್ಪದಲ್ಲಿ ತೊಯ್ಯಿಸಿ ಅವುಗಳನ್ನು ದೇವರ ಮುಂದೆ ಹಚ್ಚಬೇಕು. ಹಾಗು ಅನೇಕ ನೈವೇದ್ಯಗಳನ್ನು ಈಶ್ವರನಿಗೆ ಅರ್ಪಿಸಬೇಕು. ಇವೆಲ್ಲ ವಿಧಿಗಳನ್ನು ಭರ್ತೃಸ್ವರೂಪದ ಹಾಗು ಭಗವಂತನಾದ ಶ್ರೀ ಹರಿಯ ಪ್ರೀತಿಯನ್ನು ಹೊಂದಲೆಂದು ಆಚರಿಸಬೇಕು. ಪ್ರಾಣವು ಕಂಠಗತವಾದಾಗ್ಯೂ ಎತ್ತಿನ ಮೇಲೆ ಹತ್ತಬಾರದು. ಈ ಧರ್ಮಗಳನ್ನಾಚರಿಸುವ ವಿಧವೆಯು ಶುಭಕರಳೆಂದು ತಿಳಿಯತಕ್ಕದ್ದು. ದೀಕ್ಷೆಯಲ್ಲಿದ್ದ (ವ್ರತಾದಿನಿಯಮಗಳನ್ನು ಆಚರಿಸುವ) ಸ್ತ್ರೀಯು ಶಿವಲೋಕ, ವಿಷ್ಣುಲೋಕ, ಪತಿಲೋಕ ಈ ಮೂರು ಲೋಕಗಳನ್ನು ಪಡೆಯುವಳು. ಪತಿಯೇ ದೇವತೆಯೆಂದು ತಿಳಿಯುವ ಸ್ತ್ರೀಯಳು ಹಾಗು ಗಂಗೆ ಇವರಲ್ಲಿ ಭೇದವಿಲ್ಲ; ಪತಿವ್ರತೆಯು ಸಾಕ್ಷಾತ್ ಪಾರ್ವತಿಯೆಂದು ತಿಳಿದು ಆಕೆಯನ್ನು ಪೂಜಿಸತಕ್ಕದ್ದು. ಪತಿವ್ರತಾಸ್ತ್ರೀಯು ದೃಷ್ಟಿಗೆ ಬಿದ್ದಕೂಡಲೆ ಅವರಿಗೆ ನಮಸ್ಕರಿಸುವ ನರಶ್ರೇಷ್ಠರು ಧನ್ಯರಾಗುವರು. ಮಕ್ಕಳು ಮೊಮ್ಮಕ್ಕಳನ್ನು ಪಡೆಯುವರು. ಪದ್ಮರಾಜನ

ಹೆಂಡತಿಯಾದ ಸತ್ಯವತಿಯು ಪಾತಿವ್ರತ್ಯ ಧರ್ಮವನ್ನು ಪಾಲಿಸುತ್ತಿರಲು, ಶಂಕರಿಯ ಪ್ರಸಾದದಿಂದ ಯೋಗ್ಯ ಕಾಲದಲ್ಲಿ ಸುಪುತ್ರನನ್ನು ಪಡೆದಳು.

ಈ ಪ್ರಕಾರ ವಿಪ್ರವಾಕ್ಯವನ್ನು ಕೇಳುವ ನಿಮಿತ್ಯದಿಂದ ದೊಡ್ಡ ಮನಸ್ಸಿನ ಪದ್ಮರಾಜನಿಗೆ ಶಂಕರೀ ಕ್ಷೇತ್ರದಲ್ಲಿ ವಾಸಮಾಡಲಿಕ್ಕೆ ಆರು ತಿಂಗಳು ಅವಧಿಯು ಸಿಕ್ಕದ್ದರಿಂದ ಅವನ ಸಮಸ್ತ ಶೋಕವು ನಾಶವಾಯಿತು. ಮತ್ತು ಆಗ ಅವನು "ನಾನು ಪ್ರಜಾಪಾಲನ ಮಾಡುವದಕ್ಕಾಗಿ ನನ್ನ ರಾಜ್ಯಕ್ಕೆ ಹೋಗುವೆನು. ಅಪ್ಪಣೆಯನ್ನು ಕೊಡಬೇಕು." ಎಂದು ಆ ಮುನಿಗಳಿಗೆ ಬೇಡಿಕೊಂಡು ಮತ್ತು ಅವರಿಗೆ ನಮಸ್ಕರಿಸಿ ರಂಗಮಂಟಪಕ್ಕೆ ಬಂದನು. ಮತ್ತು ಶ್ರೀ ಶಂಕರೀ ದೇವಿಗೆ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ ಕೋಟಿ ತೀರ್ಥಕ್ಕೆ ಹೋಗಿ ಅಲ್ಲಿ ವಿಧ್ಯುಕ್ತವಾಗಿ ಸ್ನಾನಾದಿ ಕರ್ಮಗಳನ್ನು ಮಾಡಿದನು.

---

## ೭ನೆಯ ಅಧ್ಯಾಯ.

### ಕೋಟಿತೀರ್ಥದ ಉತ್ಪತ್ತಿ ಹಾಗು ಶುಂಭಾದಿ ದೈತ್ಯರ ಸಂಹಾರ.

ಪದ್ಮರಾಜನು ಪತ್ನೀ ಸಮೇತನಾಗಿ ಕೋಟಿತೀರ್ಥಕ್ಕೆ ಬಂದನು. ಅಲ್ಲಿ ಸ್ನಾನಮಾಡಿ ವಿಧ್ಯುಕ್ತವಾಗಿ ಕೋಟಿಶಂಕರವೆಂಬ ಲಿಂಗವನ್ನು ಪೂಜಿಸಿ ಬ್ರಾಹ್ಮಣರಿಗೆ ದ್ರವ್ಯದಾನ ಮಾಡಿದನು. ಆ ಕೋಟತೀರ್ಥದ ಉತ್ಪತ್ತಿಯು ಅಪೂರ್ವವಾದದ್ದು!

ಪೂರ್ವದಲ್ಲಿ ದೈತ್ಯಶ್ರೇಷ್ಠನಾದ ಶುಂಭನು ಮದೋನ್ಮತ್ತರಾದ ೭ ಕೋಟಿ ದೈತ್ಯಸೈನ್ಯವನ್ನು ದೇವತೆಗಳ ಸಂಗಡ ಯುದ್ಧ ಮಾಡುವದಕ್ಕಾಗಿ ಕಳಿಸಿದನು. ಇತ್ತ ೩೩ ಕೋಟಿ ದೇವತೆಗಳು ಸಿದ್ಧರಾಗಿ ರಣಭೂಮಿಗೆ ಬಂದರು. ಅವರ ನಡುವೆ ಮಹಾ ಘೋರವಾದ ಯುದ್ಧವು ನಡೆಯಿತು. ದಯಾಪರಳಾದ ಶಂಕರೀ ದೇವಿಯು, ಹಿಂದಕ್ಕೊಮ್ಮೆ ಎಲೈ ದೇವತೆಗಳಿರಾ, ದೊಡ್ಡ ಸಂಕಟವು ಬಂದಾಗ ನೀವು ನನ್ನ ಸ್ಮರಣ ಮಾಡಿರಿ. ಅಂದರೆ ನಾನು ಬಂದು ನಿಮ್ಮ ಸಂಕಟ ನಿವಾರಣೆ ಮಾಡುವೆನು. ಎಂದು ಹೇಳಿದ್ದಳು. ಅದರಂತೆ ದೈತ್ಯೇಂದ್ರರಿಂದ ಪೀಡಿತರಾದ

ದೇವತೆಗಳು ಶಂಕರಿಯನ್ನು ಸ್ಮರಿಸಿದರು. ಆಗ ಶ್ರೀ ದೇವಿಯು, ನವಕೋಟಿ ಸಖಿಯರು, ಕಾತ್ಯಾಯನಿಯರು, ಶ್ರೀ ಚಂಡಭೈರವ ಮೊದಲಾದವರು, ವೇತಾಲರು, ಮಾತೃಕೆಯರು, ಯೋಗಿನೀಗಣಗಳು ಇವರೆಲ್ಲರಿಂದ ಕೂಡಿಕೊಂಡು ಸಮರಾಂಗಣಕ್ಕೆ ಬಂದು ದೈತ್ಯರ ಸಂಗಡ ಯುದ್ಧ ಮಾಡಹತ್ತಿದಳು. ವೀರಭೈರವರೂ, ವೀರರೂ, ಶ್ರೀ ಸಿದ್ಧ ವಟುಕಾದಿಗಳೂ ದೈತ್ಯರನ್ನು ಬಲವಾಗಿ ಹೊಡೆಯಹತ್ತಲು, ಅವರು ಹತ್ತುದಿಕ್ಕುಗಳಿಗೆ ಓಡಿಹೋದರು. ಹೀಗೆ ಎಲ್ಲ ದೈತ್ಯರು ಓಡಿಹೋಗಲು, ಮತ್ತೆ ಕೋಟಿ ದೈತ್ಯರು ಕೂಡಿ ಗಣಗಳು, ಮಹಾಗಣಗಳು, ಇವರ ಸಂಗಡ ಯುದ್ಧಮಾಡಲುದ್ಯುಕ್ತರಾದರು. ಮಹಾ ಬಲಿಷ್ಠರಾದ ದೈತ್ಯರನ್ನು ನೋಡಿ ಶ್ರೀ ಶಂಕರಿಯು ಅವರ ಚಂಡಿಕೆಯನ್ನು ಹಿಡಿದು ಗರಗರನೆ ತಿರುಗಿಸುತ್ತ ಅವರನ್ನು ಭೂತಲಕ್ಕೆ ಅಪ್ಪಳಿಸಿದಳು. ಆಗ ದೈತ್ಯರ ಕಣ್ಣುಗಳೊಳಗಿಂದ ರಕ್ತವು ಚಿಮ್ಮಹತ್ತಿತು. ಅವರು ರಕ್ತವನ್ನು ಕಾರಹತ್ತಿದರು. ಅಗ ದಯಾನ್ವಿತೆಯಾದ ತಿಲಕವನದ ಶ್ರೀ ಶಂಕರಿಯು ಆ ದೈತ್ಯರ ಮೇಲೆ ಕೃಪೆ ಮಾಡಬೇಕೆಂಬ ಆಶೆಯಿಂದ "ಎಲೈ ಅಸುರ ಶ್ರೇಷ್ಠರೇ, ನೀವೆಲ್ಲರೂ ಶೀಘ್ರವಾಗಿ ನಾನು ಹೇಳಿದಂತೆ ಕೇಳಿರಿ ನನಗೆ ಶರಣು ಬರ್ರಿ. ಎಂದು ಹೇಳಿದಳು. ದೇವಿಯ ಮಾತನ್ನು ಕೇಳಿ ದೈತ್ಯರು ಸಿಟ್ಟಿಗೆದ್ದು "ಮಹಾದೇವಿಯೇ, ನಾವು ನಿರ್ಬಲರಲ್ಲ; ನಾವು ಗಂಡಸರು, ನಮಗೆ ಜೀವದಾಶೆಯಿಲ್ಲ; ನಿನ್ನ ಮನಸ್ಸಿಗೆ ಬಂದರೆ ನಮ್ಮನ್ನು ಸುಖವಾಗಿ ಕೊಲ್ಲಬಹುದು. ಯುದ್ಧದಲ್ಲಿ ಸಾಯುವದು ಶೂರರಿಗೆ ಶ್ರೇಯಸ್ಕರವೂ, ಇಷ್ಟವೂ, ಇರುವದು. ಯುದ್ಧದಲ್ಲಿ ಗೆದ್ದವರಿಗೆ ದೊಡ್ಡ ರಾಜ್ಯವು ದೊರೆಯುವದು. ಸತ್ತವರಿಗೆ ಸ್ವರ್ಗದಲ್ಲಿ ದೇವಕನ್ನಿಕೆಯರು ಸಿಗುವರು. ಈ ಜೀವಿತವೇ ಅಸ್ಥಿರವಾದದ್ದು. ಆದ್ದರಿಂದ ರಣದಲ್ಲಿ ಮರಣದ ಬಗ್ಗೆ ನಮಗೆ ಯಾವ ಚಿಂತೆಯೂ ಇಲ್ಲ. ನಾನು ನಿನ್ನವನೆಂದು ಶರಣು ಹೋಗುವ ಮನುಷ್ಯನು ನರಕದಲ್ಲಿ ವಾಸಮಾಡುವನು. ಆದ್ದರಿಂದ ನೀನು ನಿನ್ನ ಖಡ್ಗದಿಂದ ನಮ್ಮೆಲ್ಲರನ್ನು ಶೀಘ್ರವಾಗಿ ಸಂಹರಿಸು. ಇದರ ಬಗ್ಗೆ ಸಂಶಯ ಬೇಡ. ನಿನ್ನ ಹಸ್ತಗಳಿಂದ ಮರಣವನ್ನು ಹೊಂದಿ ಎಷ್ಟೋ ಜನರು ಪರಮ ಗತಿಯನ್ನು ಪಡೆದಿರುವರು. ನಮಗಾದರೂ ಅದೇ ಗತಿಯಾಗಲಿ. ಇರುವದಕ್ಕಿಂತ ನಿನ್ನ ಕೈಯಿಂದ ನಮಗೆ ಮರಣವಾಗುವದು ಒಳ್ಳೇದು." ಎಂದು ಮಾತಾಡಿದರು.

ದೇವಿಯು ದೈತ್ಯರ ಈ ವಚನವನ್ನು ಕೇಳಿ ಸಂತುಷ್ಟ ಮನಸ್ಸುಳ್ಳವಳಾದಳು. ಮತ್ತು ಅವರ ಬಲವನ್ನು ನೋಡಿ ಪುನಃ ಮಹಾದೇವಿಯು ಸಮಸ್ತ ದಾನವರನ್ನು

ಕುರಿತು "ಎಲೈ ದೈತ್ಯರೇ' ನಿಮಗೆ ಬೇಕಾದ ವರವನ್ನು ಬೇಡಿಕೊಳ್ಳಿರಿ. ಎಂದು ಹೇಳಿದಳು. ಆಗ ಆ ದೈತ್ಯರೆಲ್ಲ ತಾವು ಬೇಡತಕ್ಕ ವರವನ್ನು ಮನಸ್ಸಿನಲ್ಲಿ ಆಲೋಚಿಸಿ ನಿಶ್ಚಿಂತೆಯಿಂದ ದೇವಿಯನ್ನು ಕುರಿತು "ನಮ್ಮ ಈ ಕೋಟಿದೈತ್ಯರಿಗೂ ವರವನ್ನು ಕೊಡುವದು ನಿನ್ನಮನಸ್ಸಿಗೆ ಬಂದದ್ದಾದರೆ ನಿನ್ನ ಆಜ್ಞೆಯಿಂದ ಈ ಸ್ಥಾನವು ಕೋಟಿ ತೀರ್ಥವೆಂಬ ಹೆಸರಿನಿಂದ ಪ್ರಖ್ಯಾತವಾಗಲಿ ನಿನ್ನ ತೀರ್ಥಗಳಲ್ಲಿ ಇದೇ ತೀರ್ಥವು ಶ್ರೇಷ್ಠವಾಗಿರಲಿ. ಈ ತಿರ್ಥದಲ್ಲಿ ಯಾರ ಪಿಂಡವು ಬೀಳುವದೋ ಅವರು ಉತ್ತಮ ಗತಿಯನ್ನು ಹೊಂದುವರು." ಎಂದು ಬೇಡಿಕೊಂಡರು. ಅವರ ಪ್ರಾರ್ಥನೆಯನ್ನು ಕೇಳಿ ದುರ್ಗಾಸುರ ಮಥನಿಯಾದ ಶಂಕರೀದೇವಿಯು ಆ ದೈತ್ಯರ ಮೇಲೆ ದಯವನ್ನಿಟ್ಟು ಅವರು ಪ್ರಾರ್ಥಿಸಿದ ವರವನ್ನು ಕೊಟ್ಟು ಅವರಿಗೆ ಪರಮಗತಿಯನ್ನು ಕೊಟ್ಟಳು. ಬಳಿಕ ಶ್ರೀ ದೇವಿಯ ಆಜ್ಞೆಯಿಂದ ಸಮಸ್ತ ದೇವತೆಗಳೂ ಮಹರ್ಷಿಗಳೂ, ಆ ಕೋಟಿ ದೈತ್ಯರಿಗೆ ಪರಮ ಗತಿಯನ್ನು ಕೊಟ್ಟ ಸ್ಥಾನದಲ್ಲಿ ಕೋಟಿತೀರ್ಥವನ್ನು ಸ್ಥಾಪಿಸಿದರು. ಮತ್ತು ಅಲ್ಲಿ ಕೋಟಿಶಂಕರನಾಮಕವಾದ ಲಿಂಗವನ್ನು ಸ್ಥಾಪಿಸಿ ಇಂದ್ರಾದಿ ದೇವತೆಗಳು ಮಂತ್ರಘೋಷದಿಂದ ಅದಕ್ಕೆ ವರವನ್ನು ಕೊಟ್ಟರು. ಆಗ ಎಲ್ಲರಿಗೂ ಆನಂದವಾಯಿತು. ಕೋಟಿ ತೀರ್ಥದಲ್ಲಿ ಸ್ನಾನಮಾಡಿ ಕೋಟಿ ಶಂಕರಲಿಂಗನ ದರ್ಶನವನ್ನು ತಕ್ಕೊಂಡು ಅದನ್ನು ವಿಧಿಪೂರ್ವಕವಾಗಿ ಪೂಜಿಸುವವರು ಪಾಪರಹಿತರಾಗುವರು. ಆ ಸ್ಥಾನದಲ್ಲಿ ಯಥಾಶಕ್ತಿಯಾಗಿ ಜಪ ಹೋಮ ದಾನಗಳನ್ನು ಅಲ್ಪ ಪ್ರಮಾಣದಿಂದ ಮಾಡಿದಾಗ್ಯೂ ಕೋಟಿತೀರ್ಥ ಪ್ರಭಾವದಿಂದ ಕೋಟಿ ಫಲವು ದೊರೆಯುವದು. ತಮ್ಮ ಪಿತೃಗಳನ್ನುದ್ದೇಶಿಸಿ ಯಾವ ನರರು ಕೋಟಿತೀರ್ಥದಲ್ಲಿ ತರ್ಪಣ, ಪಿಂಡಪ್ರದಾನಗಳನ್ನು ಮಾಡುವರೋ ಅವರು ಪಾವನರಾಗುವರು, ಎಂದು ಎಲ್ಲ ದೇವತೆಗಳೂ ವರವನ್ನು ಕೊಟ್ಟರು. ಬಳಿಕ ದೇವತೆಗಳಿಂದ ಸಮೇತಳಾದ ಶ್ರೀ ಶಂಕರಿಯು ಆನಂದಭರಿತಳಾಗಿ ಸ್ವರ್ಗದಿಂದ ಬೀಳುತ್ತಿರುವ ಪುಷ್ಪಧಾರೆಗಳಿಂದಲೂ ನೃತ್ಯ ಗೀತ ಸುವಾದ್ಯಗಳಿಂದಲೂ ಸಹಿತಳಾಗಿ ತನ್ನ ಆಲಯಕ್ಕೆ ಬಂದಳು.

ಇತ್ತ ಮಹಾತೇಜಸ್ವಿಯಾದ ಪದ್ಮರಾಜನು ಪತ್ನೀಸಮೇತನಾಗಿ ಕೋಟಿ ತೀರ್ಥದಲ್ಲಿ ಸ್ನಾನಮಾಡಿ ದಾನ, ತರ್ಪಣ, ಹಿರಣ್ಯಶ್ರಾದ್ಧ, ಭೂರಿಶ್ರಾದ್ಧಗಳನ್ನು ಮಾಡಿದನು; ಬಳಿಕ ಕೋಟೀಶ್ವರನನ್ನು ನಮಸ್ಕರಿಸಿ ಪೂಜಿಸಿ ಬ್ರಾಹ್ಮಣರನ್ನೆಲ್ಲ ಗಂಧ ಪುಷ್ಪಾಕ್ಷತೆಗಳಿಂದ ಪೂಜಿಸಿ ಅನ್ನದಾನಮಾಡಿ ಅನ್ಯತೀರ್ಥಕ್ಕೆ ಹೊರಟನು.

# ೮ನೆಯ ಅಧ್ಯಾಯ.

## ಅಶ್ವತ್ಥಾಮತೀರ್ಥ ನಿರ್ಮಾಣ.

ಅನಂತರ ಪದ್ಮರಾಜನು ತನ್ನ ಸತಿಯೊಡನೆ ಅಶ್ವತ್ಥಾಮತೀರ್ಥಕ್ಕೆ ಬಂದನು. ಮಹಾಶ್ರೇಷ್ಠವೂ, ಸರ್ವಪಾಪಪ್ರಣಾಶಕವೂ ಆದ ಈ ತೀರ್ಥವು ಪರ್ವತಾಗ್ರದಲ್ಲಿರುವದು.

ಪೂರ್ವದಲ್ಲಿ ದ್ರೋಣಾಚಾರ್ಯರ ಮಗನೂ, ಜಿತೇಂದ್ರಿಯನೂ ಆದ ಅಶ್ವತ್ಥಾಮನು ತೀರ್ಥಯಾತ್ರಾನಿಮಿತ್ತದಿಂದ ಶ್ರೀ ಶಂಕರೀ ಕ್ಷೇತ್ರವಾದ ತಿಲಕವನಕ್ಕೆ ಬಂದನು. ಮಲಾಪಹಾರೀ ತೀರ್ಥಗಳಲ್ಲಿ ಸ್ನಾನಮಾಡಿ ಶ್ರೀ ದೇವಿಗೆ ನಮಸ್ಕರಿಸಿ ಆಕೆಯ ಪೂಜೆಯನ್ನು ಮಾಡಿ ಸ್ತೋತ್ರಗಳಿಂದ ಆಕೆಯನ್ನು ಸಂತೋಷಪಡಿಸಿ ಮಹಾಕೂಟಕ್ಕೆ ಬಂದನು, ಅಲ್ಲಿ ಬಿಲ್ವಪತ್ರಗಳಿಂದ ಮಹಾಕೂಟೇಶ್ವರಾದಿಗಳನ್ನು ಪೂಜಿಸಿ, ಕೂಟೇಶ್ವರನನ್ನು ಪೂಜಿಸಿದನು. ಬಳಿಕ ಅಶ್ವತ್ಥಾಮನು ಪರ್ವತದ ತುದಿಗೆ ಹೋಗಿ ಆರುತಿಂಗಳು ಆಹಾರವಿಲ್ಲದೆ ತಪಶ್ಚರ್ಯವಮಾಡಹತ್ತಿದನು, ಜಿತೇಂದ್ರಿಯನೂ, ವಾಯುವನ್ನು ತಿಂದಿರುವವನೂ ಆದ ಅಶ್ವತ್ಥಾಮನ ಉಗ್ರವಾದ ತಪಸ್ಸಿಗೆ ಮೆಚ್ಚಿ ದೇವಿಯು ಅವನಿಗೆ ಪ್ರಸನ್ನಳಾಗಿ ಅವನ ಮುಂದೆ ಬಂದು ನಿಂತಳು. ಆಗ ಅಶ್ವತ್ಥಾಮನು ದೇವಿಯನ್ನು ನೋಡಿ, "ಹೇ ಮಹಾಲಕ್ಷ್ಮೀ, ಹೇ ಮಹಾಕಾಲಿ, ಸರಸ್ವತಿ ನಿನಗೆ ನಾನು ನಮಸ್ಕಾರ ಮಾಡುತ್ತೇನೆ. ಎಲ್ಲವೂ ನಿನ್ನ ರೂಪವೇ ಇರುವದು. ಹೇ ಚಿನ್ಮಾತ್ರಳಾದ ಅಂಬಿಕೆಯೇ, ನೀನು ಮೋಕ್ಷಪ್ರದಾಯಕಳು. ಹೇ ಶಂಕರೀ, ನೀನು ನಿರಂಜನಳೂ, ಸ್ವಯಂಪ್ರಕಾಶಕಳೂ, ನಿಷ್ಕ್ರಿಯಳೂ, ನಿರುಪದ್ರವಳೂ ಇರುವಿ. ನೀನು ವೈರಾಗ್ಯಯುಕ್ತರಾದ ಭಕ್ತರ ಹೃದಯದಲ್ಲಿ ವಾಸಮಾಡುತ್ತಿರುವಿ. ನೀನು ಅವರಿಗೆ ಜ್ಞಾನವನ್ನು ಕೊಡುವಿ. ಹೇ ಜಗದೀಶ್ವರೀ, ನಿನಗೆ ನಮಸ್ಕಾರವಿರಲಿ." ಎಂದು ಸ್ತೋತ್ರಮಾಡಿ ಪರಮಾನಂದಭರಿತನಾದನು. ಹೀಗೆ ಪ್ರೇಮಾನಂದದಲ್ಲಿ ಮಗ್ನನಾದ ಅಶ್ವತ್ಥಾಮನನ್ನು ನೋಡಿ ಶಂಕರಿಯು, "ಅಶ್ವತ್ಥಾಮಾ, ನಿನ್ನ ಮನಸ್ಸಿನಲ್ಲಿದ್ದ ವರವನ್ನು ಬೇಡಿಕೋ" ಎಂದು ಹೇಳಿದಳು. ಅದನ್ನು ಕೇಳಿ ಅವನು "ಹೇ ದೇವಿ, ನನ್ನಿಂದ ನಿರ್ಮಿತ

ವಾದ ತೀರ್ಥವು ಅಶ್ವತ್ಥಾಮತೀರ್ಥವೆಂದು ಪ್ರಸಿದ್ಧವಾಗಲಿ. ಹೇ ಜಗನ್ಮಯಳೇ, ಇಲ್ಲಿ ಸ್ನಾನದಾನಾದಿಗಳನ್ನು ಮಾಡುವ ಪ್ರಾಣಿಗಳನ್ನು ಪಾವನಮಾಡು. ಹೇ ಭುವನೇಶ್ವರೀ, ನೀನು ಲಿಂಗರೂಪದಿಂದ ಇಲ್ಲಿ ವಾಸಮಾಡು'' ಎಂದು ಮಾತಾಡಲು, ದೇವಿಯು ಅವನ ಕೋರಿಕೆಯಂತೆ ವರವನ್ನು ಕೊಟ್ಟು ಅಲ್ಲಿಯೇ ಅಂತರ್ಧಾನವನ್ನು ಹೊಂದಿದಳು. ಹೀಗೆ ವರವನ್ನು ಪಡೆಕೊಂಡ ಅಶ್ವತ್ಥಾಮನು ಸಂತುಷ್ಟನಾದನು. ಅಶ್ವತ್ಥಾಮನು ಅಲ್ಲಿರುವಾಗ ಒಂದು ಮಹದಾಶ್ಚರ್ಯವು ಸಂಭವಿಸಿತು. ಅದು ಏನಂದರೆ:—

## ಬ್ರಹ್ಮರಾಕ್ಷಸನ ವಿಮುಕ್ತತೆ.

ಗೌಡದೇಶದಲ್ಲಿ ವೇದಜ್ಞರಲ್ಲಿ ಶ್ರೇಷ್ಠನಾದ ಒಬ್ಬ ಬ್ರಾಹ್ಮಣನಿದ್ದನು. ಅಹಂಕಾರದಿಂದ ಅವನ ಮೈಮೇಲೆ ಸ್ಮೃತಿಯೇ ಇದ್ದಿಲ್ಲ; ತಾನು ಶಾಸ್ತ್ರಜ್ಞನೆಂಬ ಗರ್ವವು ಅವನಲ್ಲಿ ಬಹಳವಾಗಿತ್ತು. ಆ ಅಧಮನಾದ ಬ್ರಾಹ್ಮಣನು ಅನೇಕ ಬ್ರಾಹ್ಮಣರನ್ನು ವಾದದಲ್ಲಿ ಅನ್ಯಾಯದಿಂದ ಗೆದ್ದಿದ್ದನು. ಧರ್ಮಶಾಸ್ತ್ರಗಳನ್ನು ನೋಡದೆ ಇದ್ದರೂ ಅವನು ಅನ್ಯರಿಗೆ ಧರ್ಮವನ್ನು ಹೇಳುವನು. ಅವನ ಈ ದುಷ್ಟ ಬುದ್ಧಿಯನ್ನು ನೋಡಿ ವೇದಪಾರಾಂಗತರಾದ ಮುನಿಗಳು ಕೋಪವನ್ನು ತಾಳಿ "ನೀನು ಬ್ರಾಹ್ಮಣ ದ್ವೇಷಿಯಾಗಿರುವದರಿಂದ ಬ್ರಹ್ಮರಾಕ್ಷಸನಾಗಿ ನಿರ್ಜಲ ದೇಶದಲ್ಲಿರುವ ಅರಣ್ಯದಲ್ಲಿ ವಾಸಿಸು '' ಎಂದು ಶಾಪವನ್ನು ಕೊಡಲು, ಆ ಬ್ರಾಹ್ಮಣನು ಅವರಿಗೆ ಬೇಡಿಕೊಂಡನು; ಬಳಿಕ ಕೃಪಾವಂತರಾದ ಮುನಿಗಳು ಆ ಶಾಪನಿವಾರಣಾರ್ಥವಾಗಿ ಪುನಃ ಮಾತಾಡಿದರೇನಂದರೆ-"ಹೇ ಬ್ರಾಹ್ಮಣನೇ, ನೀನು ಬ್ರಹ್ಮರಾಕ್ಷಸನಾಗಿ ಈ ಭೂಮಿಯ ಮೇಲೆ ತಿರುಗಾಡುತ್ತ ಬಾದಾಮಿಪುರವಾಸಿನಿಯಾದ ಶಂಕರೀಕ್ಷೇತ್ರಕ್ಕೆ ಹೋದಾಗ ಅಶ್ವತ್ಥಾಮತೀರ್ಥವೆಂಬ ಮಹಾತೀರ್ಥಕ್ಕೆ ಹೋಗು. ಅಲ್ಲಿ ವಾಸಮಾಡುತ್ತಿರುವ ಅಶ್ವತ್ಥಾಮನ ಕೈಯಿಂದ ಆ ತೀರ್ಥದ ನೀರು ನಿನ್ನ ತಲೆಯಮೇಲೆ ಬೀಳಲು, ನೀನು ಸದ್ಗತಿಯನ್ನು ಹೊಂದುವಿ.''

ಬಳಿಕ ಸೌರಶರ್ಮನೆಂಬ ಆ ಬ್ರಾಹ್ಮಣನು ರಾಕ್ಷಸನಾಗಿ ಭೂಮಿಯಮೇಲೆ ತಿರುಗಾಡುತ್ತ ಜಗನ್ಮಾತೆಯಾದ ಶಂಕರೀದೇವಿಯು ವಾಸಮಾಡುವ ತಿಲಕವನಕ್ಕೆ ಬಂದನು. ಆ ಸಮಯದಲ್ಲಿ ಜಿತೇಂದ್ರಿಯನೂ' ಸತ್ಯಸಂಧನೂ ಆದ ಅಶ್ವತ್ಥಾಮನು ತನ್ನ ತೀರ್ಥದಲ್ಲಿ ಸ್ನಾನಮಾಡಿ ಲಿಂಗವನ್ನು ವಂದಿಸಿ, ಶ್ರೀ ದೇವೀದರ್ಶನಾರ್ಥವಾಗಿ ಕೈಗಳಲ್ಲಿ ಅಕ್ಷತೆ, ಉದುಕಗಳನ್ನು ತೆಗೆದುಕೊಂಡು ಹೊರಟಿದ್ದನು.

ಅಷ್ಟರಲ್ಲಿ ಮಾರ್ಗಮಧ್ಯದಲ್ಲಿ ಈ ಬ್ರಹ್ಮರಾಕ್ಷಸನು ಬಂದು ಅವನ ಎದುರಿಗೆ ನಿಂತನು. ಬಹು ಪ್ರಕಾರದ ಆಕಾರಗಳನ್ನು ಧರಿಸಿ ಆ ಬ್ರಹ್ಮರಾಕ್ಷಸವು ಅಶ್ವತ್ಥಾಮನನ್ನು ನುಂಗಲಿಕ್ಕೆ ಹವಣಿಸುತ್ತ ಬಂದಿತು. ಬಳಿಕ ದ್ವಿಜವರನೂ ಮಂತ್ರಜ್ಞನೂ ಆದ ಅಶ್ವತ್ಥಾಮನು ತನ್ನ ಕೈಯೊಳಗಿನ ಕಮಂಡಲುವಿನಲ್ಲಿದ್ದ ತನ್ನ ತೀರ್ಥಜಲವನ್ನು ಆಬ್ರಹ್ಮರಾಕ್ಷಸನಮೇಲೆ ಸಿಂಪಡಿಸಿದನು. ಆ ತೀರ್ಥಜಲಸ್ಪರ್ಶದಿಂದ ಬ್ರಹ್ಮರಾಕ್ಷಸನು ತನ್ನ ರಾಕ್ಷಸ ದೇಹವನ್ನು ಬಿಟ್ಟು ದಿವ್ಯವಾದ ದೇಹವನ್ನು ಧರಿಸಿ ಉತ್ತರಕ್ಷಣದಲ್ಲಿಯೇ ವಿಮಾನದಲ್ಲಿ ಕುಳಿತು ಸ್ವರ್ಗಲೋಕಕ್ಕೆ ಹೋದನು. ಅವೊತ್ತಿನಿಂದ ಅಶ್ವತ್ಥಾಮತೀರ್ಥವು ಸರ್ವ ಪಾಪನಿವಾರಣ ಮಾಡುವ ಶ್ರೇಷ್ಠತೀರ್ಥವೆಂದು ಹೆಸರಾಯಿತು. ಈ ತೀರ್ಥದಲ್ಲಿ ಪದ್ಮರಾಜನು ಸ್ನಾನಮಾಡಿ ಅಲ್ಲಿರುವ ದೇವೀ ಲಿಂಗವನ್ನೂ ಮತ್ತು ಇತರ ಅನೇಕ ಲಿಂಗಗಳನ್ನೂ ವಿಧಿಪೂರ್ವಕವಾಗಿ ಪೂಜಿಸಿ, ಅಗಸ್ತ್ಯತೀರ್ಥಕ್ಕೆ ಹೋದನು. ಅಲ್ಲಿ ಸ್ನಾನ-ದಾನಾದಿಗಳನ್ನು ಮಾಡಿದನು. ಹೀಗೆಯೇ ಆರಾಜನು ಪ್ರತಿತೀರ್ಥದಲ್ಲಿ ಸ್ನಾನ-ದಾನಾದಿಗಳನ್ನು ಮಾಡುತ್ತ ಲಿಂಗಗಳನ್ನು ಪೂಜಿಸುತ್ತ ನಡೆದನು. ಭೂತೇಶಲಿಂಗವನ್ನು ಅವನು ಪೂಜಿಸಿ ರಂಗತೀರ್ಥಕ್ಕೆ ಹೋಗಿ ಅಲ್ಲಿ ರಂಗೇಶನ ದರ್ಶನವನ್ನು ತಕ್ಕೊಂಡು ಭಾನುತೀರ್ಥಕ್ಕೆ ಹೋದನು.

## ೯ನೆಯ ಅಧ್ಯಾಯ.

## ಭಾನುತೀರ್ಥದಲ್ಲಿಯ ಶ್ರೀ ಶಂಕರೀ ಮಹಿಮೆಯು.

ಶ್ರೋತೃಗಳೇ, ಭಾನುತೀರ್ಥದ ಉತ್ಪತ್ತಿಯನ್ನು ಹೇಳುವೆನು ಕೇಳಿರಿ; ಪೂರ್ವದಲ್ಲಿ ಭಾನುವೆಂಬ ಶಾಸ್ತ್ರವಿಶಾರದನಾದ ಒಬ್ಬ ಬ್ರಾಹ್ಮಣನು ಇದ್ದನು. ಕುರುಡನಾದ ಈ ಬ್ರಾಹ್ಮಣನನ್ನು ಅವನ ಕುಟುಂಬದವರೆಲ್ಲ ಸದಾಪ್ರೀತಿಸುತ್ತಿದ್ದರು. ಅವನಿಗೆ ಅನ್ನ ವಸ್ತ್ರಾದಿಗಳು ಸಾಕಷ್ಟು ಇದ್ದಿಲ್ಲ. ಅವನ ದಾರಿದ್ರ್ಯಕ್ಕೆ ತುಲನೆಯೇ ಇದ್ದಿಲ್ಲ. ಒಂದಾನೊಂದು ದಿನ ಅವನು ತನ್ನ ಹೆಂಡತಿಯನ್ನು ಕುರಿತು, "ಪ್ರಿಯಳೇ, ಹಿಂದಿನ ಜನ್ಮದಲ್ಲಿ ನಾವು ಬ್ರಾಹ್ಮಣರಿಗೆ ಅನ್ನ ವಸ್ತ್ರ ಕಂಬಲ, ಮನೆ,

ಧಾನ್ಯ, ಆಕಳು ಮೊದಲಾದವುಗಳನ್ನು ದಾನವಾಗಿ ಕೊಟ್ಟಿರುವದಿಲ್ಲಾದ್ದರಿಂದಲೇ ನಮಗೆ ಈ ಜನ್ಮದಲ್ಲಿ ಇಷ್ಟು ದಾರಿದ್ರ್ಯವು ಬಂದಿರುವದು. ನೀನು ಆರು ತಿಂಗಳುಗಳವರೆಗೆ ಕಷ್ಟಪಟ್ಟು ಮಕ್ಕಳನ್ನು ಸಂರಕ್ಷಿಸು. ನಾನು ಮಹೇಶ್ವರಿಯಾದ ಅನ್ನಪೂರ್ಣೆಯನ್ನು ಸಂತೋಷಪಡಿಸಿ ಪ್ರಸನ್ನ ಮಾಡಿಕೊಂಡು ಬರುವೆನು'' ಎಂದು ಮಾತಾಡಿ ತಪಸ್ಸನ್ನಾಚರಿಸುವದಕ್ಕೋಸ್ಕರ ವನಕ್ಕೆ ಹೋದನು. ದೇಶದೇಶಗಳನ್ನು ತಿರುಗುತ್ತ ಆ ಭಾನುಶರ್ಮನು ಶಂಕರೀಕ್ಷೇತ್ರಕ್ಕೆ ಬಂದನು. ಹರಿದ್ರಾತೀರ್ಥದಲ್ಲಿ ಸ್ನಾನಮಾಡಿ ಕಮಲಪತ್ರಗಳಿಂದ ದೇವಿಯನ್ನು ಪೂಜಿಸಿ ಸ್ತುತಿಸಲುಪಕ್ರಮಿಸಿದನು. “ಹೇ ಜಗನ್ಮಾತೆಯೇ, ನಿನಗೆ ಆದಿಯೂ ಇಲ್ಲ; ಅಂತವೂ ಇಲ್ಲ. ನೀನು ಅನಂತ ರೂಪಗಳನ್ನು ಧಾರಣಮಾಡುವಿ. ನೀನು ಸಮಸ್ತ ಪ್ರಾಣಿಗಳ ತಾಯಿಯಾಗಿರುತ್ತೀ. ಶಂಕರಿಯೇ, ನೀನೇ ಅನ್ನಪೂರ್ಣೆಯು, ನನಗೆ ಅನ್ನ ವಸ್ತ್ರಾದಿಗಳನ್ನು ಕೊಡು. ನೀನು ಭಕ್ತರಿಗೆ ಆನಂದದಾಯಕಳೂ, ಪೂರ್ಣಳೂ, ಎಲ್ಲರ ಕಾಮನೆಗಳನ್ನು ಪರಿಪೂರ್ಣ ಮಾಡುವವಳೂ ಇರುತ್ತೀ. ಹೇ ಮಹಾದೇವಿಯೇ, ಎಲ್ಲ ದೈತ್ಯರನ್ನು ವಿನಾಶಮಾಡುವದಕ್ಕಾಗಿ ದೇವೀರೂಪವನ್ನು ಧರಿಸಿರುವಿ; ನೀನು ಎಲ್ಲರಿಗೂ ಅಭಯದಾನವನ್ನು ಮಾಡಿರುವಿ. ಎಲ್ಲ ಪ್ರಾಣಿಗಳಲ್ಲಿಯ ಅಜ್ಞಾನವೆಂಬ ಕತ್ತಲೆಯನ್ನು ಕತ್ತರಿಸುತ್ತೀ. ನೀನು ಇಡೀ ಬ್ರಹ್ಮಾಂಡದಲ್ಲಿ ಒಳಗೂ ಹೊರಗೂ ವ್ಯಾಪಿಸಿರುವಿ. ಇಷ್ಟೇ ಅಲ್ಲ; ಪ್ರಾಣಿಗಳ ಹೃದಯವೆಂಬ ಗುಹೆಯಲ್ಲಿ ವಾಸಮಾಡುವಿ. ನಿನ್ನ ಭಕ್ತರಿಗೆ ಭೋಗ ಮೋಕ್ಷಗಳನ್ನು ಕೊಡುವದಕ್ಕಾಗಿ ಈ ತಿಲಕವನದಲ್ಲಿರುವಿ.'' ಈ ಪ್ರಕಾರ ದುಃಖಹಾರಿಣಿಯಾದ ಶ್ರೀ ಶಂಕರಿಯನ್ನು ಸ್ತುತಿಸಿ ಏಕಾಗ್ರಚಿತ್ತನಾದ ಬ್ರಾಹ್ಮಣನು ಸುಮ್ಮನೆ ನಿಂತನು. ಲೋಕಕ್ಕೆಲ್ಲ ಕಲ್ಯಾಣ ಮಾಡುವ ಶಂಕರಿಯು ಕೃಪೆಯನ್ನು ಮಾಡುವ ಹೇತುವಿನಿಂದ “ಹೇ ಬ್ರಾಹ್ಮಣನೇ, ನೀನು ಧನ್ಯನು; ನೀನು ಇಲ್ಲಿ ಆರುತಿಂಗಳುಗಳವರೆಗೆ ಇರು. ಅಂದರೆ ದುಃಖ ದಾರಿದ್ರ್ಯಗಳಿಂದ ಮುಕ್ತನಾಗುವಿ. ನೀನು ನಿತ್ಯದಲ್ಲಿ ನನ್ನ ಎದುರಿಗೆ ಇರುವ ಹರಿದ್ರಾತೀರ್ಥದಲ್ಲಿ ಸ್ನಾನಮಾಡಿ ನನ್ನನ್ನು ಭಕ್ತಿಯಿಂದ ಪೂಜಿಸು. ನನ್ನ ಗುಡಿಯ ಪಶ್ಚಿಮಕ್ಕೆ ಒಂದು ಪರ್ಣಕುಟೀರವನ್ನು ಕಟ್ಟಿಕೊಂಡು ಅಲ್ಲಿ ತಪಶ್ಚರ್ಯೆ ಮಾಡಿಕೊಂಡು ಇರು. ನಿತ್ಯದಲ್ಲಿ ಸೂರ್ಯಾರಾಧನೆಯನ್ನು ನಿರಾಲಸ್ಯದಿಂದ ಮಾಡತಕ್ಕದ್ದು. ಅನಂತರ ನಿನ್ನ ಸಂಚಿತ ಪಾಪವು ಸುಟ್ಟು ಬೂದಿಯಾಗುವದು. ಆ ಬಳಿಕ ನಿನಗೆ ಸುಖವು ದೊರೆಯುವದು. ಸೂರ್ಯನಿಗೂ ನನಗೂ ಸ್ವಲ್ಪಾದರೂ ಭೇದವಿಲ್ಲ. ನೀನು ಭೇದಬುದ್ಧಿಯಿಂದ ದೊಡ್ಡ ತಪಸ್ಸನ್ನು ಮಾಡಿದಿ,

ಆದರೂ ನೀನು ಆಪತ್ತಿನಲ್ಲಿ ಸಂರಕ್ಷಿಸಲ್ಪಟ್ಟಿರುವಿ. ನನ್ನ ಕ್ಷೇತ್ರದಲ್ಲಿ ನೀನು ಆರುತಿಂಗಳು ವಾಸಮಾಡಿದರೆ ನಿನ್ನ ದಾರಿದ್ರ್ಯನಿವಾರಣವು ಪೂರ್ಣವಾಗಿ ಆಗುವದು. ನಿನಗೆ ಶೀಘ್ರವಾಗಿಯೇ ಸಿದ್ಧಿಯು ಕೈಸೇರುವದು. ಬಳಿಕ ನೀನು ಮನೆಗೆ ಹೋಗು'' ಎಂದು ಹೇಳಿದಳು.

ದೇವಿಯ ಮಾತುಗಳನ್ನು ಕೇಳಿ, ದೇವಿಯ ಪಶ್ಚಿಮಭಾಗದಲ್ಲಿ ಆ ಬ್ರಾಹ್ಮಣನು ತನ್ನ ತಪಸ್ಸಿಗೋಸ್ಕರ ಒಂದು ತೀರ್ಥವನ್ನು ನಿರ್ಮಾಣಮಾಡಿದನು; ಮತ್ತು ಸೂರ್ಯನಲ್ಲಿ ದೃಷ್ಟಿಯನ್ನಿಟ್ಟು ತಪಸ್ಸು ಮಾಡಿದನು. ಹೀಗೆ ಆರುತಿಂಗಳು ಕಳಿಯಲು ದಿಗಂತರಗಳನ್ನು ಪ್ರಕಾಶಿಸುವ ಉಜ್ವಲನಾದ ಸೂರ್ಯನು ಪ್ರಸನ್ನನಾಗಿ ''ಹೇ ಬ್ರಾಹ್ಮಣನೇ ನಿನ್ನ ತಪಸ್ಸು ಸಿದ್ಧಿಯನ್ನು ಹೊಂದಿತು. ನಾನು ಸಂತುಷ್ಟನಾಗಿದ್ದೇನೆ. ನಿನ್ನ ದಾರಿದ್ರ್ಯವೆಂಬ ಕತ್ತಲೆಯು ನಿರಸ್ತವಾಯಿತು. ಅನ್ನಪೂರ್ಣೆಯಾದ ಶಂಕರಿಯು ನಿನಗೆ ವರವನ್ನು ಕೊಡಲಿಕ್ಕೆ ನನ್ನನ್ನು ಕಳಿಸಿರುವಳು; ನಿನಗೆ ವಾಂಛಿತ ವರವನ್ನು ಬೇಡಿಕೋ'' ಎಂದನು. ಬ್ರಾಹ್ಮಣನು ತನ್ನ ಕಣ್ಣುಗಳನ್ನು ತೆರೆದು ಸೂರ್ಯನನ್ನು ನೋಡಿ, ''ವಿಶ್ವ ಸಂರಕ್ಷಕನೇ, ನೀನು ನನಗೆ ವರವನ್ನು ಕೊಡಲು ಬಂದಿರುವಿಯಾ? ನಿನ್ನಲ್ಲಿ ಎಲ್ಲ ವನಸ್ಪತಿಗಳು ಇರುವವು. ನಿನ್ನಲ್ಲಿ ಎಲ್ಲ ಚರಾಚರಗಳು ಲೀನವಾಗಿರುವವು. ನಾನು ಅನ್ನವಸ್ತ್ರ ವಿಹೀನನಾದ್ದರಿಂದ ನನ್ನ ಹೆಂಡತಿ ಮಕ್ಕಳು ನನ್ನನ್ನು ಪೀಡಿಸುತ್ತಿರುವರು. ಆದ್ದರಿಂದ ಹೇ ಸೂರ್ಯನೇ ನನಗೆ ವಿಪುಲವಾಗಿ ಅನ್ನಾದಿಗಳನ್ನು ಕೊಡು; ನನ್ನ ಮನಸ್ಸು ನಿನ್ನಲ್ಲಿಯೇ ಲೀನವಾಗುವಂತೆ ಮಾಡು. ಅನ್ನ ವಸ್ತ್ರಗಳ ವಿಪುಲತೆಯಿಂದ ನಾನು ಪುನಃ ಮದಾಂಧನಾಗಿ ನಿಷಿದ್ಧ ಕರ್ಮಗಳಲ್ಲಿ ಪ್ರೀತಿಯಿಂದ ತೊಡಗಬಾರದು. ನಿನ್ನ ಹಾಗು ಶಂಕರೀ ರೂಪಗಳಲ್ಲಿ ಭೇದಭಾವವು ನನ್ನಲ್ಲಿ ಹುಟ್ಟದಂತೆ ನನಗೆ ಸದ್ಬುದ್ಧಿಯನ್ನು ಕೊಡು. ಹೇ ದೇವನೇ, ನಾನು ಇನ್ನೊಂದು ವರವನ್ನು ಬೇಡುವೆನು. ನಾನು ಸ್ಥಾಪಿಸಿದ ಲಿಂಗವನ್ನು ಪೂಜಿಸುವ ಮನುಜರ ಮನೋರಥಗಳೆಲ್ಲ ಪೂರ್ಣವಾಗಲಿ. ಮಾಘ ಮಾಸದಲ್ಲಿಯೂ ಮಕರ ಸಂಕ್ರಾಂತಿಯಲ್ಲಿಯೂ ಮಹಾ ಪಾತಕಿಗಳಾದ ಮನುಜರೂ ಅಲ್ಲಿ ಸ್ನಾನದಾನಾದಿಗಳನ್ನು ಮಾಡಿದರೆ ಮುಕ್ತರಾಗಬೇಕು. ಮಕರ ಸಂಕ್ರಾಂತಿಯಿಂದ ಮಾಘಶುದ್ಧ ೭ಯವರೆಗೆ ದಿನಾಲು ಇಲ್ಲಿ ಸ್ನಾನದಾನಾದಿಗಳನ್ನು ಮಾಡುವವರ ಕುಷ್ಠರೋಗಾದಿಗಳು ನಾಶವಾಗಬೇಕು. ಹೇ ಸ್ವಾಮಿಯೇ ನನ್ನ ಮೇಲೆ ಇಷ್ಟು ಅನುಗ್ರಹಮಾಡು.'' ಎಂದು ನುಡಿದನು.

ಬ್ರಾಹ್ಮಣನ ಈ ಮಾತುಗಳನ್ನು ಕೇಳಿ, ಜಗಚ್ಚಕ್ಷುವಾದ ಸೂರ್ಯನು

ಏಕಾಗ್ರ ಮನಸ್ಸಿನಿಂದ, "ಹೇ ಬ್ರಾಹ್ಮಣ ಪುತ್ರನೇ, ನೀನು ಪ್ರಾರ್ಥಿಸಿದ್ದೆಲ್ಲ ಸಿದ್ಧಿಯನ್ನು ಹೊಂದುವದು. ಚಿಂತೆ ಮಾಡಬೇಡ." ಎಂದು ವರವನ್ನು ಕೊಟ್ಟು ಅಲ್ಲಿಯೇ ಗುಪ್ತನಾದನು. ಇತ್ತ ಬ್ರಾಹ್ಮಣನು ಶಂಕರೀದೇವಿಗೆ ನಮಸ್ಕರಿಸಿ ಅನ್ನಪೂರ್ಣೇ ಶಂಕರಿ ಎಂದು ಅಭಿವಂದಿಸಿ, "ಹೇ ದೇವಿಯೇ, ನನ್ನ ಕುಲದಲ್ಲಿ ನೀನು ಕುಲದೇವತೆಯಾಗು. ನಿನ್ನ ಪ್ರಸಾದದಿಂದ ನನಗೆ ಧನಧಾನ್ಯ, ಪಶು, ಸಂತತಿ, ವಸ್ತ್ರಗಳು ಮೊದಲಾದವುಗಳನ್ನು ನಾನು ಪಡೆದೆನು" ಎಂದು ಸ್ತೋತ್ರಮಾಡಿ ಮನೆಗೆ ಬಂದನು. ಯಾಗ ಮನೆಯಲ್ಲಿ ಅನ್ನ ದಾನ ಪರಳೂ, ಚಾಮುಂಡಿಯೂ ಆದ ಶಂಕರಿಯು ಇರುವದಿಲ್ಲವೋ ಅವರ ಜನ್ಮವು ನಿರರ್ಥಕವೇ ಸರಿ. ಶಂಕರಿಯು ಸಂಸಾರಬಂಧನಕ್ಕೆ ಕಾರಣಳೂ, ಮನ ಜರನ್ನು ಸಂಸಾರದಿಂದ ಮುಕ್ತಮಾಡಲಿಕ್ಕೆ ಸಮರ್ಥಳೂ ಆದ್ದರಿಂದ ಸರ್ವಪ್ರಯತ್ನದಿಂದ ಮನೀಷಿಗಳು ಆಕೆಯನ್ನು ಪೂಜಿಸತಕ್ಕದ್ದು.

---

## ೧೧ನೆಯ ಅಧ್ಯಾಯ.

### —:ದೇವಿಯ ಅವತಾರಗಳು:—

ಶ್ರೀ ಸ್ಕಂದನು,—"ಹೇ ಋಷಿಗಳೇ, ಪಾಪ ವಿಮೋಚಕವೂ, ವಿಸ್ಮಯ ಕಾರಕವೂ ಆದ ಇನ್ನೊಂದು ಇತಿಹಾಸವನ್ನು ಕೇಳಿರಿ; ದುರ್ಗಾ, ರಕ್ತ, ಧೂಮ್ರಲೋಚನರೆಂಬ ಮಹಾದೈತ್ಯರು ಭಯಂಕರವಾದ ಹಾಗೂ ಸೌಮ್ಯ ರೂಪಗಳನ್ನು ಧರಿಸಿದ ಶಂಕರಿಯಿಂದ ಸಂಹರಿಸಲ್ಪಟ್ಟ ಬಳಿಕ ಇಂದ್ರಾದಿ ದೇವತೆಗಳೂ, ತ್ರಿದಂಡಿಗಳೂ, ಮುನಿಗಳೂ ದೇವಿಯ ಬಳಿಗೆ ಬಂದರು. ಮಹಾದೇವಿಯ ಭಯಂಕರವಾದ ಮುಖವನ್ನು ನೋಡಿ ಅವರು ಶ್ರೀದೇವಿಯ ಸನ್ನಿಧಿಯಲ್ಲಿ ವಿಜ್ಞಾಪ್ತಿ ಮಾಡಿಕೊಂಡದ್ದೇನಂದರೆ, "ಘೋರರೂಪಿಣಿಯಾದ ಮಹಾದೇವಿಯೇ, ನಿನಗೆ ನಮಸ್ಕಾರವು; ಹೇ ಮಹಾದೇವಿಯೇ, ನೀನು ಭಯವನ್ನೂ, ಜನನ ಮರಣಗಳನ್ನೂ ತಪ್ಪಿಸುವದರಲ್ಲಿ ದಕ್ಷಳು; ಹೇ ಬ್ರಹ್ಮಾಣಿಯೇ, ನೀನು ಬ್ರಹ್ಮನ ಶಕ್ತಿಯು. ವಿಷ್ಣುವಿನ ಪತ್ನಿಯಾದರೂ ನೀನೇ. ನೀನು ಶಿವನ ಪತ್ನಿಯಾದ ಪಾರ್ವತಿಯು. ಸರ್ವ

ದೇವತೆಗಳಲ್ಲಿ ಸತ್ವ (ಶಕ್ತಿ) ರೂಪದಿಂದಲೂ, ದೈತ್ಯರಲ್ಲಿ ರಜೋರೂಪದಿಂದಲೂ, ಮನುಷ್ಯ ಮೊದಲಾದ ತಿರ್ಯಕ್ ಪ್ರಾಣಿಗಳಲ್ಲಿ ತಮೋರೂಪದಿಂದಲೂ ಇರುತ್ತೀ. ಧೃತಿ, ಸ್ಮೃತಿ, ಕ್ಷಮೆ, ಧಾರಣಾಶಕ್ತಿ, ದಯೆ ಇವೆಲ್ಲ ನೀನೇ ಇರುವಿ. ಹೇ ಶಂಕರಿ, ದುರ್ಗೆ ನೀನು ಎಲ್ಲ ಜಗತ್ತುಗಳನ್ನು ಪೋಷಿಸುವಿ. ಅಕಾರದಿಂದ ಕ್ಷಕಾರ ದವರೆಗೆ ಇರುವ ಅಕ್ಷರಗಳಲ್ಲಿ ನೀನೇ ವ್ಯಾಪಿಸಿರುವಿ; ನೀನು ಗದ್ಯಪದ್ಯಾತ್ಮಕಳೂ, ಸಾಮಗಾನ ಸ್ತುತಿಪ್ರಿಯಳೂ ಇರುವಿ. ಆತ್ಮಜ್ಞಾನವಾದರೂ ನೀನೇ ಎಂದೆನ್ನು ವರು. ನಿನಗೆ ಕಲೆಗಳಿರುವದಿಲ್ಲ. ನೀನು ಶಾಂತಳೂ, ಕೈವಲ್ಯಪದವನ್ನು ಕೊಡುವ ವಳೂ ಇರುತ್ತೀ; ಯಾರಿಗೆ ನಿನ್ನ ಕೃಪಾಪ್ರಸಾದವು ಸಿಕ್ಕಿರುವದೋ ಅಂಥ ಯೋಗಿ ಗಳಾದ ನಿನ್ನ ಭಕ್ತರಿಗೆ ಪರಾಭವವು ಎಲ್ಲಿಂದಬರಬೇಕು? ಹೇ ದೇವಿ, ಎಂಥ ಕಠಿಣ ಕಾಲ ಬಂದಾಗ್ಯೂ ಕರ್ಮಗಳನ್ನು ತಪ್ಪಿಸದೆ ಇದ್ದ ನಿನ್ನ ಭಕ್ತರಿಗೆಲ್ಲ ಕಲ್ಯಾಣ ವನ್ನು ಮಾಡು.

ಈ ಪ್ರಕಾರ ತ್ರಿದಂಡಿಯು (ಸನ್ಯಾಸಿಯು) ಸ್ತೋತ್ರಮಾಡಿದ್ದನ್ನು ಕೇಳಿ ದೇವಿಯು ತನ್ನ ರೂಪವನ್ನು ಪ್ರಕಟಮಾಡಿ, "ತ್ರಿದಂಡಿಯೇ, ನೀನು ಮನಸ್ಸಿನಲ್ಲಿ ಚಿಂತಿಸಿದ ವರವನ್ನು ಬೇಡಿಕೋ'' ಎಂದಳು. ಅದನ್ನು ಕೇಳಿ ತ್ರಿದಂಡಿಯು ಆನಂ ದಪೂರ್ಣಮನಸ್ಸಿನಿಂದ, "ಹೇ ದೇವಿಯೇ, ಕೃಷ್ಣಾನದಿಯ ದಕ್ಷಿಣದಿಕ್ಕಿನಲ್ಲಿ ಸ್ಕಂದಪರ್ವತದ ವಾಯುವ್ಯದಿಕ್ಕಿನಲ್ಲಿ ಇರುವ ಬಹು ವೃಕ್ಷಗಳಿಂದ ಪೂರ್ಣವೂ ನಾನಾಜಾತಿಯ ಪುಷ್ಪ, ಫಲ, ಪಕ್ಷಿ ಮೊದಲಾದವುಗಳಿಂದ ಅತಿರಮ್ಯವೂ ಆದ ಈ ತಿಲಕವನದಲ್ಲಿ ನೀನು ವಾಸ ಮಾಡು. ಸುಭಕ್ತರಿಂದ ಧ್ಯಾನಮಾಡಲಿಕ್ಕೆ ಯೋಗ್ಯಳಾದ ಮಹಾದೇವಿಯೇ, ಪ್ರತಿಯುಗದಲ್ಲಿ ಅವತರಿಸು, ಕಲಿಕಾಲವು ಬಂದಾಗ ನಿನ್ನನ್ನು ಭಕ್ತಿಯಿಂದ ಭಜಿಸುವ ಪುರುಷರ ಹಾಗು ಸ್ತ್ರೀಯರ ಮನೋ ರಥಾದಿಗಳನ್ನು ಪೂರೈಸುವದಕ್ಕೋಸ್ಕರ ನೀನು ಇಲ್ಲಿಯೇ ವಾಸಮಾಡು. ಹೇ ಜಗ ದಂಬಿಕೆ, ಜಗತ್ತಿನಲ್ಲಿ ಅನೇಕ ತೀರ್ಥಗಳು ಇರುವವು. ಆದರೆ ತಿಲಕವನಕ್ಕೆ ಸಮಾ ನವಾದ ವನವೂ ತೀರ್ಥವೂ ಇರುವದಿಲ್ಲ. ಶರೀರದಲ್ಲಿ ಮುಖವು ಶ್ರೇಷ್ಠವಾಗಿರುವಂ ತೆಯೂ ಮುಖದಲ್ಲಿ ತಿಲಕವೇ ಹೆಚ್ಚು ಶುಭಕರವಾಗಿರುವಂತೆಯೂ ಈ ವನವು ಎಲ್ಲಕಕ್ಕೂ ಶ್ರೇಷ್ಠವಾಗಿರುವದು. ಭಯಂಕರ ಸ್ವರೂಪವನ್ನು ಧರಿಸಿದ ದೇವಿಯೇ, ನೀನು ಘೋರವಾದ ಈ ರೂಪವನ್ನು ತ್ಯಾಗಮಾಡಿ ಸೌಮ್ಯರೂಪವನ್ನು ಧರಿಸು. ನಾಲ್ಕು ವರ್ಣಗಳಲ್ಲಿಯ ಜನರಿಗೂ ನೀನು ಕುಲದೇವತೆಯಾಗಿರು. ನೀನು ಇಲ್ಲಿ ವಾಸಮಾಡುವದು ನಿಶ್ಚಯವಾಗಿದ್ದರೆ, ನಿನ್ನನ್ನು ಇದೇ ಸ್ಥಾನದಲ್ಲಿ ಉತ್ತರಾಯಣ

ದಲ್ಲಿ ಮಾಘಮಾಸದಲ್ಲಿ ಸುಮುಹೂರ್ತದಲ್ಲಿ ಸ್ಥಾಪಿಸುವೆನು'' ಎಂದು ಬೇಡಿಕೊಂಡನು. ಅದಕ್ಕೆ ಅಷ್ಟಬಾಹುಸ್ವರೂಪಿಣಿಯಾದ ದೇವಿಯು, ''ತ್ರಿದಂಡಿಯೇ, ಹಾಗೇ ಆಗಲಿ. ನಿನ್ನ ಮನೋರಥವಿದ್ದಂತೆ ನಾನು ಇಲ್ಲಿಯೇ (ತಿಲಕವನದಲ್ಲಿ) ವಾಸ ಮಾಡುವೆನು, ಎಂದು ನುಡಿದಳು. ಬಳಿಕ ತ್ರಿದಂಡಿಯು, ವೈದಿಕರು, ಮಾಂತ್ರಿಕರು, ತಾಂತ್ರಿಕರು, ನಾನಾಜಾತಿಯ ಭಕ್ತರು ಮೊದಲಾದವರನ್ನು ಕೂಡಿಕೊಂಡು ಗಂಧ ಪುಷ್ಪ-ಧೂಪ-ದೀಪ ನೈವೇದ್ಯ ಸಾಮುಗ್ರಿಗಳನ್ನು ತಕ್ಕೊಂಡು ದೇವಿಯನ್ನು ಯಥಾವಿಧಿಯಾಗಿ ಸ್ಥಾಪಿಸಿದನು. ಬಳಿಕ ಪ್ರದಕ್ಷಿಣಾ ನಮಸ್ಕಾರಗಳನ್ನು ಮಾಡಿ ದೇವಿಯ ನಾಮಗಳ ಗರ್ಜನೆ ಮಾಡಿದನು. ''ಹೇ ದೇವಿಯೇ, ಮಧುಕೈಟಭರನ್ನು ಸಂಹರಿಸಿ ನೀನು ಮಹಾಕಾಲಿ ಸ್ವರೂಪಿಣಿಯಾಗಿ ಶುಂಭ ನಿಶುಂಭದೈತ್ಯರನ್ನು ಸಂಹಾರಮಾಡಿದಿ. ಹೃಷೀಕೇಶನ ಹತ್ತು ಅವತಾರಗಳ ರೂಪಗಳಾದರೂ, ನೀನೇ. ನೀನು ೨೪ ಅಂಗುಲೀ ಪ್ರಮಾಣವುಳ್ಳವಳು. ನೀಚರಾಕ್ಷಸರ ಕುಲಗಳನ್ನು ವಿಧ್ವಂಸಮಾಡುವ ೬೪ ಯೋಗಿನಿಯರಿಂದ ಸಮೇತಳಾಗಿರುವಿ. ಹೇ ದೇವಿಯೇ ನೀನು ಅನೇಕ ಅವತಾರಗಳನ್ನು ಧರಿಸಿ ಮುನೀಶ್ವರರನ್ನು ರಕ್ಷಿಸಿದಿ. ನೀನು ಮುನಿಗಳಿಗೆ ''ನಿಮಗೆ ದಾನವರಿಂದ ಭಯವು ಉತ್ಪನ್ನವಾಗಲು, ನನ್ನನ್ನು ಸ್ಮರಿಸಿರಿ. ನಾನು ತಕ್ಕ ಅವತಾರತಾಳಿ ಅವರನ್ನು ಸಂಹರಿಸುವೆನು. ವೈವಸ್ವತಮನ್ವಂತರವು ಪ್ರಾಪ್ತವಾಗಲು ೨೮ನೇ ಕಲಿಯುಗದಲ್ಲಿ ಶುಂಭ ನಿಶುಂಭರೆಂಬ ಮಹಾಘೋರರಾದ ದೈತ್ಯರುಹುಟ್ಟುವರು. ನಾನು ನಂದನೆಂಬ ಗೋಪನಮನೆಯಲ್ಲಿ ಯಶೋದೆಯ ಹೊಟ್ಟೆಯಲ್ಲಿ ಹುಟ್ಟಿ ಅವರನ್ನು ನಾಶಮಾಡಿ ಕಂಸಾದಿಗಳನ್ನು ಸಹ ಕ್ರಮವಾಗಿ ಸಂಹರಿಸುವೆನು. ಬಳಿಕ ನಾನು ಭಯಂಕರ ರೂಪವನ್ನು ತಾಳಿ ವೈಪ್ರ, ಚಿತ್ತ ಮೊದಲಾದ ದೈತ್ಯರನ್ನು ಕೊಲ್ಲುವೆನು. ಅವರನ್ನು ತಿನ್ನುವದರಿಂದ,ನಾನು ದೈತ್ಯಭಕ್ಷಕಿ ಎಂಬ ಹೆಸರಿನಿಂದ ಪ್ರಖ್ಯಾತಳಾಗುವೆನು. ಮುಂದೆ ಬರಬರುತ್ತ ಅನೇಕ ವರ್ಷಗಳವರೆಗೆ ಅನಾವೃಷ್ಟಿಯಾಗಿ ಕುಡಿಯಲಿಕ್ಕೆ ನೀರು ಸಹ ಇಲ್ಲದಂತಾಗುವದು. ಆಗ ಋಷಿಗಳು ನನ್ನನ್ನು ಸ್ತೋತ್ರಮಾಡಿ ಭೂಲೋಕವನ್ನು ಈ ಅನಾವೃಷ್ಟಿ ಸಂಕಟದಿಂದ ಮುಕ್ತಮಾಡಲಿಕ್ಕೆ ಪ್ರಾರ್ಥಿಸುವರು. ಆಗ ನಾನು ಭೂಮಿಯ ಮೇಲೆ ಅಯೋನಿಜಳಾಗಿ ಹುಟ್ಟಿ ಬರುವೆನು; ಮತ್ತು ಸಹಸ್ರ ಕಣ್ಣುಗಳಿಂದ ಆ ಋಷಿಗಳನ್ನೆಲ್ಲ ನೋಡುತ್ತಿರುವೆನು. ಆಗ ನನಗೆ ಶತಾಕ್ಷಿಯೆಂಬ ಹೆಸರು ಬರುವದು. ಅನಂತರ ನಾನು ಪ್ರಾಣಧಾರಕವಾದ ಪಲ್ಲೆಕಾಯಿಗಳನ್ನು ಹುಟ್ಟಿಸಿ ಅವುಗಳಿಂದ ದೇವತೆಗಳನ್ನೂ ಪ್ರಜೆಗಳನ್ನೂ ಸಲಹುವೆನು. ಆಗ ನನಗೆ ಶ್ರೇಷ್ಠವಾದ

'ಶಾಕಂಭರೀ' ಎಂಬ ಹೆಸರು ಬರುವದು. ಬಳಿಕ ಅದೇ ತಿಲಕವನದಲ್ಲಿ ದುರ್ಗಾ ಸುರನೆಂಬ ದೈತ್ಯನನ್ನು ಕೊಲ್ಲುವೆನು. ಆಗ ನನ್ನನ್ನು 'ದುರ್ಗಾದೇವಿ' ಎಂಬ ಹೆಸರಿನಿಂದ ಕರೆಯುವರು. ರಾಕ್ಷಸರ ಪೀಡೆಯು ಆಗಲು ಮುನಿಗಳೆಲ್ಲ ನನ್ನನ್ನು ಸ್ತೋತ್ರಪೂಜನಗಳಿಂದ ಸಂತೋಷಪಡಿಸುವರು. ನಾನು ಸುಕರ್ಮಗಳನ್ನು ನಾಶಮಾ ಡುವ ರಾಕ್ಷಸರನ್ನೆಲ್ಲಕೊಂದು ಋಷಿಗಳ ಕಾಮನೆಗಳನ್ನು ಪೂರ್ಣಮಾಡುವೆನು. ಆಗ ನನಗೆ ಭೀಮಾದೇವಿಯೆಂದು ಕರೆಯುವರು. ಅರುಣನೆಂಬ ಮಹಾದೈತ್ಯನು ಲೋಕಕ್ಕೆ ಬಾಧೆಯನ್ನು ಕೊಡುವಾಗ ನಾನು ಭ್ರಮರ ರೂಪವನ್ನು ತಾಳಿ ಮೂರು ಲೋಕಗಳ ಹಿತಾರ್ಥವಾಗಿ, ದುಃಖಪ್ರದನಾದ ಆಸುರನನ್ನು ಯುದ್ಧದಲ್ಲಿ ಸಂಹರಿ ಸುವೆನು. ಆಗ ಮುನಿಗಳು ನನ್ನನ್ನು ಭ್ರಮರೀದೇವಿಯೆಂದು ಕರೆದು ಸ್ತೋತ್ರ ಮಾಡಿ ಸಂತೋಷಪಡಿಸುವರು ಮುಂದೆ ಸೇತುನಾಮನೆಂಬುವನು ಸ್ತ್ರೀಯರನ್ನು ಹರಣಮಾಡುವದರಲ್ಲಿ ಲೋಲುಪನಾಗುವನು ಆಗ ಬ್ರಹ್ಮದೇವನು ನನ್ನನ್ನು ಸ್ತುತಿಸುವನು. ಅವನ ಸ್ತುತಿಯಿಂದ ಸಂತುಷ್ಟಳಾದ ನಾನು ಪಂಚಭ್ರಮರಗಳ ರೂಪಗಳನ್ನು ಧರಿಸಿ ಆ ಸೇತುನಾಮ ರಾಜನ ಸಂಹಾರವನ್ನು ಭೀಮಾತೀರದಲ್ಲಿ ಮಾಡುವೆನು. ಆಗ ನಾನು ಭೂಲೋಕದಲ್ಲಿ 'ಚಂಡಲಾಹಿಂಗುಲಾದೇವಿ' ಎಂಬ ಹೆಸರಿನಿಂದ ಪ್ರಖ್ಯಾತಳಾಗುವೆನು. ಮುಂದೆ ಕೋಲಾಸುರನು ಲೋಕಕಂಟಕ ನಾಗಿ ಹುಟ್ಟಿಬರಲು, ಮಹಾಲಕ್ಷ್ಮೀ ಸ್ವರೂಪನ್ನು ತಾಳಿ ಆ ಕೋಲಾಸುರನನ್ನು ಕೊಲ್ಲುವೆನು. ಹೀಗೆ ನಮಗೆ ದಾನವರಿಂದ ಮಹತ್ ಭಯವು ಒದಗಿದಾಗೆಲ್ಲ ನಾನು ಆ ಶತ್ರುಗಳನ್ನೆಲ್ಲ ಸಂಹರಿಸುವದಕ್ಕಾಗಿ ಅವತರಿಸುವೆನು.'' ಎಂದು ಹೇಳಿ ದೆಯಲ್ಲವೇ?

ಈ ಪ್ರಕಾರ ಮಹಾದೇವಿಯನ್ನು ತ್ರಿದಂಡಿಯು ಸ್ತುತಿಸಲು, ಭಕ್ತರ ಪಾಲ ನಾರ್ಥವಾಗಿಯೂ ದುಷ್ಟರ ವಿನಾಶಕ್ಕಾಗಿಯೂ ಶಂಕರೀದೇವಿಯು ತರುಣ ಸ್ತ್ರೀ ರೂಪದಿಂದ ಷೋಡಶಕಲೆಗಳಿಂದ ಪರಿಪೂರ್ಣಳಾಗಿ ಸುಕುಮಾರ ದೇಹವನ್ನು ಧಾರಣಮಾಡಿ (ತಿಲಕವನದಲ್ಲಿ) ವಾಸಮಾಡಿದಳು. ಮಹಾದೇವಿಯು ವಾಸ್ತ ವಿಕವಾಗಿ ನಾದರೂಪಿಣಿಯೂ, ನಿಷ್ಕಲಂಕಳೂ, ನಿರ್ಗುಣಳೂ, ಶಾಂತಳೂ, ಉನ್ಮ ನೀ (ಈಶ್ವರ ಸ್ವರೂಪದಲ್ಲಿ ಐಕ್ಯವಾಗುವ ಸ್ಥಿತಿ) ಅವಸ್ಥೆಯಲ್ಲಿರುವವಳೂ, ನಾದ ಬಿಂದು ಕಲಾತೀತಳೂ, ಜಗತ್ತಿನಲ್ಲಿ ವ್ಯಾಪಕವಾದ ಚೈತನ್ಯಳೂ ಆಗಿದ್ದಾಗ್ಯೂ ಆ ಶಾಂಭವಿಯು ತನ್ನ ನಿರ್ಗುಣ ಸ್ವರೂಪವನ್ನು ತ್ಯಜಿಸಿ ಭಕ್ತರ ಧ್ಯಾನ ಸಿದ್ಧ್ಯ ರ್ಥವಾಗಿ ಸಗುಣರೂಪವನ್ನು ಧರಿಸಿ ತಿಲಕವನದಲ್ಲಿ ಈವೊತ್ತಿಗೂ ಭಕ್ತರ ಇಷ್ಟಾ

ರ್ಗಗಳನ್ನು ಪರಿಪೂರ್ಣ ಮಾಡುತ್ತ ಜಗತ್ತಿಗೆ ಮಂಗಳವನ್ನು ಕೊಡುತ್ತ 'ಶಂಕರೀ' ಶಾಕಂಭರೀ' 'ದುರ್ಗಾ' ಎಂಬ ಹೆಸರುಗಳಿಂದ ವಾಸಮಾಡಿರುವಳು.

---

## ೧೧ನೆಯ ಅಧ್ಯಾಯ.

### ರಾಜರಿಗೆ ಶ್ರೀಶಂಕರಿಯ ದರ್ಶನ.

ಪಾಂಡ್ಯ, ಚೋಳ, ಕಲಿಂಗ, ಪಾಂಚಾಲ, ದ್ರಾವಿಡ, ಮಾಗಧ, ಕೊಂಕಣ, ಕೇವರ ಮೊದಲಾದ ದೇಶಗಳ ಅರಸರು ತೀರ್ಥಾಟನಪರರಾಗಿ ಮಾಲಿನೀ ತೀರಕ್ಕೆ ಬಂದರು. ಆ ರಾಜರೆಲ್ಲ ಆ ತೀರ್ಥದಲ್ಲಿ ಸ್ನಾನಮಾಡಿ ಬ್ರಾಹ್ಮಣರ ಅನುಜ್ಞೆಯಿಂದ ತೀರ್ಥವಿಧಿಗಳನ್ನೂ ದಾನಗಳನ್ನೂ ಮಾಡಿದರು. ಬಳಿಕ ಅವರೆಲ್ಲರು ಭೋಜನಮಾಡಿ ಮೃದುವಾದ ಹಾಸಿಗೆಗಳ ಮೇಲೆ ಮಲಗಿಕೊಂಡರು. ರಾತ್ರಿಯು ಮುಗಿಯುತ್ತ ಬರಲು ಬೆಳಗಿನಜಾವದಲ್ಲಿ ಹೃಷೀಕೇಶಿನಿಯಾದ ಶಂಕರೀ ದೇವಿಯು ಆ ರಾಜರ ಸ್ವಪ್ನದಲ್ಲಿ ಪ್ರತ್ಯಕ್ಷವಾಗಿಬಂದು ಅವರನ್ನು ಕುರಿತು, "ಎಲೈ ರಾಜರೇ, ಧರ್ಮಶೀಲರಾದ ನೀವು ಮಾಲಿನೀ ತೀರದಲ್ಲಿ ಆಶ್ರಯಮಾಡಿಕೊಂಡು ಇರುವದನ್ನು ನೋಡಿ ನನಗೆ ಪರಮಾನಂದವಾಗಿದೆ. ಸದ್ಗುಣಿಗಳಾದ ರಾಜರೇ, ರಮ್ಯವಾದ ತಿಲಕವನದಲ್ಲಿ ನಾನು ವಾಸಮಾಡಿರುವೆನು. ಬ್ರಾಹ್ಮಣರೇ ಮೊದಲಾದ ೪ ವರ್ಣದವರು, ವರಪ್ರದಳಾದ ನನ್ನನ್ನು ಭಜಿಸುವರು. ದುರ್ಗಾಸುರನನ್ನು ಕೊಂದ ನಾನು ಸಗುಣರೂಪದಿಂದ ಅಲ್ಲಿಯೇ ವಾಸಮಾಡುವೆನು. ವಸ್ತುತಃ ನಾನು ನಿರ್ಗುಣಳು. ಆದರೆ ನನ್ನ ಭಕ್ತರು ನನ್ನನ್ನು ಯಾವ ಪ್ರಕಾರ ಭಜಿಸುವರೋ ಅದೇ ಪ್ರಕಾರ ನಾನು ಅವರಿಗೆ ಒಲಿಯುವೆನು; ಮತ್ತು ಅವರ ಭಾವನೆಯಂತೆ ಅವರ ಕಾಮನೆಗಳನ್ನಾದರೂ ಪೂರೈಸುವೆನು. ನೀವೆಲ್ಲರು ಪುಣ್ಯಪ್ರದವಾದ ನನ್ನ ಕ್ಷೇತ್ರಕ್ಕೆ ಬಂದು ನನ್ನ ತೀರ್ಥಗಳಲ್ಲಿ ಸ್ನಾನಮಾಡಿ ನನ್ನ ದರ್ಶನ ತಕೊಂಡು ನನಗೆ ನಮಸ್ಕರಿಸಿದರೆ ನಿಮಗೆ ಶೀಘ್ರವಾಗಿಯೇ ಮುಕ್ತಿಯು ದೊರೆಯುವದು. ನನ್ನನ್ನು ಪೂಜಿಸದೆ, ಹಾಗು ನನ್ನನ್ನು ತಿಳಿಯದೆ ಇರುವವರು ಪತಿತರೆಂದು ತಿಳಿಯಬೇಕು.

ಆದ್ದರಿಂದ ಹೇ ರಾಜರೇ, ನೀವೆಲ್ಲರೂ ಶೀಘ್ರವಾಗಿ ನನ್ನ ಕ್ಷೇತ್ರಕ್ಕೆ ಬರಬೇಕು.'' ಎಂದು ಮಾತನಾಡಿ ಗುಪ್ತಳಾದಳು. ಪ್ರಾತಃಕಾಲದಲ್ಲಿ ರಾಜರೆಲ್ಲರು ಎದ್ದು ಮಾಲಿನೀ ತೀರದಲ್ಲಿ ಸ್ನಾನಮಾಡಿ ದೇವತೆಗಳನ್ನು ತೃಪ್ತಿಗೊಳಿಸಿ, ಬ್ರಾಹ್ಮಣರಿಗೆ ದಾನಗಳನ್ನು ಕೊಟ್ಟು, ಅವರು ಕುಳಿತುಕೊಂಡರು. ಆಗ ಅವರು ತಮತಮ್ಮೊಳಗೆ ರಾತ್ರಿಯ ಕೊನೆಯಭಾಗದಲ್ಲಿ ಬಿದ್ದ ಸ್ವಪ್ನದ ವೃತ್ತಾಂತವನ್ನು ನೆನಿಸಿ, ತಿಲಕವನಕ್ಕೆ ಹೋಗೋಣ'' ಎಂದು ನಿಶ್ಚಯಿಸಿದರು. ಬಳಿಕ ಆ ಭಾವಿಕರಾದ ರಾಜರು ತಮ್ಮ ಸೈನ್ಯವನ್ನು ತಕ್ಕೊಂಡು ತಿಲಕವನಕ್ಕೆ ಬಂದು, ಅಲ್ಲಿ ಶ್ರೀ ಶಂಕರಿಯ ದರ್ಶನವನ್ನು ತಕ್ಕೊಂಡು ಹರಿದ್ರಾತೀರ್ಥದಲ್ಲಿ ಸ್ನಾನಮಾಡಿ ದೇವಿಯನ್ನು ಪೂಜಿಸಿ, ನಮಸ್ಕರಿಸಿ ಸ್ತುತಿಸಿದರು. ದೇವಿಯ ಪೂಜೆಸ್ತೋತ್ರಗಳಲ್ಲಿ ಮಗ್ನರಾದ ಹಾಗು ಆನಂದಿತರಾದ ರಾಜರು ದೇವಿಯನ್ನು ಕುರಿತು, ''ಹೇ ಮಹಾದೇವಿಯೇ, ನಮಗೆ ಅಧೋಗತಿಯು ಆಗಬಾರದು. ಅಧರ್ಮಹಾದಿಯನ್ನು ಹಿಡಿಯುವ ರಾಜರಿಗೂ, ಮನುಜರಿಗೂ ನರಕವಾಸವು ನಿಶ್ಚಯವಾಗಿ ಆಗುವದು. ಕರುಣಾಸಾಗರಳಾದ ಶಂಕರೀ ದೇವಿಯೇ, ನಮಗೆ ಭವಸಾಗರದಾಟುವ ಉಪಾಯವನ್ನು ಹೇಳು'' ಎಂದು ಪ್ರಾರ್ಥಿಸಿದರು.

ರಾಜರ ಮಾತನ್ನು ಕೇಳಿ ದೇವಿಯು ಅವರನ್ನು ಕುರಿತು ಹೇ ಭೂಪತಿಗಳೇ, ನೀವು ಬ್ರಹ್ಮಜ್ಞಾನವಿಶಾರದನಾದ ತ್ರಿದಂಡಿ (ಸನ್ಯಾಸಿ) ಯ ಹತ್ತರ ಹೋಗಿರಿ. ಅವನು ಯಾವಾಗಲೂ ನನ್ನ ಮಂತ್ರವನ್ನು ಜಪಿಸುತ್ತ ಇರುವನು. ನೀವು ಸುಶೀಲದಿಂದ ಅವನನ್ನು ಸಂತೋಷಗೊಳಿಸಿರಿ; ಅಂದರೆ ನಿಮ್ಮ ಕಾರ್ಯವು ಸಾಧ್ಯವಾಗುವದು.'' ಎಂದು ಹೇಳಿದಳು.

## ಬ್ರಹ್ಮೋಪದೇಶ,

ಆಗ ರಾಜರು ಅದನ್ನು ಕೇಳಿ ತ್ರಿದಂಡಿಯು ಇದ್ದಸ್ಥಳಕ್ಕೆ ಹೋಗಿ ದೇವಿಯ ಪರಮ ಭಕ್ತನಾದ ಆ ಮಹಾತ್ಮನಿಗೆ ನಮಸ್ಕರಿಸಿ, ಕೈಜೋಡಿಸಿಕೊಂಡು ನಿಂತು ''ಹೇ ಮಹಾತ್ಮನೇ, ನಾವು ಭವತಾಪದಿಂದ ತಪ್ತರಾಗಿರುವೆವು. ನಿನ್ನ ಪಾದಕಮಲಗಳಿಗೆ ಶರಣು ಹೋಗುವದಕ್ಕಾಗಿ ದೇವಿಯು ನಮ್ಮನ್ನು ಕಳಿಸಿರುತ್ತಾಳೆ. ಕ್ಷಾತ್ರಧರ್ಮವನ್ನು ಕೈಕೊಂಡಿರುವ ನಮಗೆ ಯಾವ ಗತಿಯಾಗುವದು? ಎಂದು ಪ್ರಶ್ನೆಮಾಡಿದರು. ಕೊನೆಗೆ ನಿರ್ವಿಕಲ್ಪ ಸಮಾಧಿಯಲ್ಲಿ ಮಗ್ನನಾದ ತ್ರಿದಂಡಿಯು ಸಮಾಧಿಯನ್ನು ಇಳಿಸಿ, ಆ ರಾಜವೃಂದವನ್ನು ಕುರಿತು ''ರಾಜರೇ,

ಇದೇ ಮಾದರಿಯ ಪ್ರಶ್ನೆಯನ್ನು ಹಿಂದಕ್ಕೊಮ್ಮೆ ವೇದಜ್ಞರೂ, ಸತ್ಯಶೌಚಾಚಾರ ತತ್ಪರರೂ ಆದ ಮುನಿಗಳು ಸ್ಕಂದನಿಗೆ—"ಶಂಕರೀಕ್ಷೇತ್ರವು ಪರಮ ಶ್ರೇಷ್ಠವೂ, ಬ್ರಹ್ಮಜ್ಞಾನವೂ, ಶುಭಕರವೂ ಆದದ್ದೆಂದು ಕೇಳಿರುವೆವು. ನಿರ್ಗುಣವೂ, ನಿಷ್ಕ್ರಿಯವೂ ಆದ ಬ್ರಹ್ಮನಲ್ಲಿ ಈ ದೃಶ್ಯಸೃಷ್ಟಿಯು ಹ್ಯಾಗೆ ಹುಟ್ಟಿತೆಂಬ ಸಂದೇಹವು ನಮಗೆ ಬಾಧಿಸುತ್ತದೆ. ಮಾಯೆಯೆಂದರೇನು? ಗುಣತ್ರಯಗಳ ನಿರ್ಣಯವೇನು? ಸಹನಶೀಲರೂ, ಕಾರುಣ್ಯಸಮುದ್ರರೂ, ಒಳ್ಳೇ ಹೃದಯವುಳ್ಳವರೂ, ಎಲ್ಲ ಪ್ರಾಣಿಗಳಮೇಲೆ ಪ್ರೇಮ ಮಾಡುವವರೂ ಆದ ಸತ್ಪುರುಷರು ನಮ್ಮ ಸಂದೇಹಗಳನ್ನು ಬಿಡಿಸಿ ತತ್ವನಿರ್ಣಯವನ್ನು ನಾವು ಕೇಳದಿದ್ದರೂ ಹೇಳುವರು" ಆದ್ದರಿಂದ ಸ್ಕಂದನೇ ನಮಗೆ ಎಲ್ಲ ಸಂಗತಿಗಳನ್ನು ಕಥನಮಾಡು. ಅದಕ್ಕೆ ಸ್ಕಂದನು—"ಹೇ ಮುನಿಗಳೇ, ನೀವು ನನಗೆ ಕೇಳಿದ ಪ್ರಶ್ನೆಯನ್ನು ದೇವಿಯಾದ ಪಾರ್ವತಿಯು ಶಿವನಿಗೆ ಕೇಳಿದಳು. ದೇವಿಯು, "ಈ ಭೂಮಿಯ ಮೇಲಿನ ಜನರು ಇಂದ್ರಿಯಗಳನ್ನು ತೃಪ್ತಿಗೊಳಿಸುವದಕ್ಕಾಗಿ ಅನೇಕ ಅಸದ್ವಿಷಯಗಳನ್ನು ಸೇವಿಸುವರು. ಅದರಿಂದ ಅವರು ನಿರ್ವೀರ್ಯರಾಗುತ್ತಾರೆ. ಅದರಿಂದ ಅಂಧಂತಮಸ್ಸೆಂಬ ನರಕವನ್ನು ಹೊಂದುತ್ತಾರೆ; ಆ ನರಕವು ದಾಟಲಿಕ್ಕೆ ಅಸಾಧ್ಯವಾದದ್ದು. ಅದನ್ನು ದಾಟಲಿಕ್ಕೆ ಯಾವ ಯಾವ ಉಪಾಯವನ್ನು ಮಾಡಬೇಕು? ಈ ನೀಚ ದೇಹದ ಯೋಗದಿಂದ ಭವವನ್ನು ದಾಟುವದು ಹ್ಯಾಗೆ? ಹೇ ವಿಭೋ, ಅಜ್ಞಾನವೆಂಬ ಕತ್ತಲೆಯಿಂದ ಅಂಧರಾದವರಿಗೆ ನೀನು ಸೂರ್ಯನಾಗಿ ಉದಯಿಸಿರುವಿ. ಆದ್ದರಿಂದ ನನ್ನ ಸಂಮೋಹವನ್ನು ದೂರಮಾಡು" ಎಂದು ಕೇಳಿದಳು. ದೇವಿಯಮಾತನ್ನು ಕೇಳಿ ಮಹಾದೇವನಾದ ಶಿವನು, "ಮೋಕ್ಷಕ್ಕೂ, ಬಂಧನಕ್ಕೂ ಮನಸ್ಸೇ ಕಾರಣವಾಗಿರುವದು. ಮನೆಮಾರು ಹೆಂಡಿರು ಮಕ್ಕಳಲ್ಲಿ ನಾವು ಆಸಕ್ತಿಯನ್ನಿಟ್ಟರೆ ನಾವು ಬಂಧನದಲ್ಲಿ ಸಿಗುವೆವು. ಶಿವನ ಪಾರ್ಶ್ವದಲ್ಲಿ ಅದೇ ಮನಸ್ಸು ಲೀನವಾದರೆ ನಮಗೆ ಮುಕ್ತಿಯು ಕರತಲಾಮಲಕವಾಗುವದು. ಕಾಮಕ್ರೋಧಾದಿಗಳಿಂದ ರಹಿತವಾಗಿ ಶುದ್ಧ ಮನಸ್ಕನಾಗಿ ಆತ್ಮಾನುಸಂಧಾನದಲ್ಲಿ ಸೇರುವ ಸ್ಥಿತಿಗೆ ಸಮಾಧಿಯನ್ನುತ್ತಾರೆ. ಆಗ ಆತ್ಮನು ನಿರ್ಗುಣನೂ ನಿರಂಜನನೂ, ಪ್ರಕೃತಿಗೆ ಪರನೂ, ಸ್ವಯಂಪ್ರಕಾಶನೂ, ಅಖಂಡನೂ ಇರುವನೆಂದು ಅನುಭವವು ಬರುವದು. ಜ್ಞಾನವೈರಾಗ್ಯ ಯುಕ್ತವಾದ ಭಕ್ತಿಯಿಂದ ಕೂಡಿದ ಮನಸ್ಸು ಪರಮಾತ್ಮನಲ್ಲಿ ಲೀನವಾಗಲು ಮನುಷ್ಯನಿಗೆ ವಿಷಯಗಳಲ್ಲಿ ಉದಾಸೀನ ಬುದ್ಧಿಯು ಹುಟ್ಟಿ ಮಾಯೆಯಲ್ಲಿ ಯಾವ ಪ್ರಕಾಶವೂ ಇಲ್ಲೆಂದು ಅವನಿಗೆ ಪ್ರತೀ

ತಿಯಾಗುವದು. ಸತ್ವರಜ ತಮೋಗುಣಗಳ ಸಂಗವೇ ಆತ್ಮನಿಗೆ ಪಾಶವೆಂದು ದೊಡ್ಡವರು ಹೇಳುವರು. ತ್ರಿಗುಣಗಳ ಸಂಗದಿಂದ ರಹಿತನಾದವನೇ ಸಾಧು ಪುರುಷನು. ಅವನಿಗೇ ಮೋಕ್ಷದ ಬಾಗಿಲು ತೆರೆಯಲ್ಪಡುವದು. ಈ ಶಾಂತ ಧರ್ಮದಿಂದಲೂ, ಗುರುವಿನ ಕೃಪೆಯಿಂದಲೂ, ಭಗವದ್‌ಭಕ್ತಿಯಿಂದಲೂ ಅಜ್ಞಾನವು ಮೆಲ್ಲಮೆಲ್ಲನೆ ನಾಶವಾಗುವದು. ಇಂದ್ರಿಯಗಳು ತಮ್ಮ ವಿಷಯವನ್ನು ಬಿಟ್ಟಕೂಡಲೆ ಉಪರತಿಯು ಉತ್ಪನ್ನವಾಗುವದು. ಈ ಉಪರತಿಯಿಂದ ಮನುಷ್ಯನು ಪರಶಿವನನ್ನು ನೋಡಲು, ಎಲ್ಲ ದುಃಖಗಳೂ ನಾಶವಾಗಿ ಎಲ್ಲ ಜಗತ್ತು ಸ್ವಪ್ನದಲ್ಲಿ ನೋಡಿದ ಸೃಷ್ಟಿಯಹಾಗೆ ಕಾಣುವದು. ಎಲ್ಲ ಪ್ರಾಣಿಗಳ ಹೃದಯಕಮಲದಲ್ಲಿ ವಾಸಮಾಡಿಕೊಂಡಿರುವವನೂ, ಸರ್ವವ್ಯಾಪಕನೂ ನಿರ್ಗುಣನೂ ಆದ ಈಶ್ವರನನ್ನು ನೀನು ಯಾವಾಗಲೂ ಭಜಿಸು. ಇದಕ್ಕೆ ಮಹಾತ್ಮರು ಯೋಗವೆಂದೆನ್ನುತ್ತಾರೆ. ಜ್ಞಾನಕ್ಕಿಂತ ಹೆಚ್ಚಿನದು ಯಾವದೂ ಇಲ್ಲ, ಜನ್ಮ ಮರಣಗಳನ್ನು ನಾಶಮಾಡುವದೇ ಜ್ಞಾನ; ಜ್ಞಾನಸಂಪಾದನದಿಂದ ಅರಸರು ಕೃತಕೃತ್ಯರಾದರು.'' ಎಂದು ಉಪದೇಶ ಮಾಡಿದನು.

ಈ ಸದ್ಬೋಧವನ್ನು ಕೇಳಿ ರಾಜರು ಕೃತಕೃತ್ಯರಾದರು. ಅವರು ಶ್ರೀ ಶಂಕರಿಯನ್ನು ಪೂಜಿಸಿ ನಮಸ್ಕರಿಸಿ ಅನೇಕ ಸ್ತೋತ್ರಗಳನ್ನು ಮಾಡಿದರು. ಬ್ರಹ್ಮಜ್ಞಾನಪ್ರದವೂ, ಭುಕ್ತಿ ಮುಕ್ತಿಪ್ರದವೂ ಆದ ಕ್ಷೇತ್ರವೆಂದರೆ ಈ ಭೂಮಂಡಲದಲ್ಲಿ, ತತ್ರಾಪಿ ಈ ಕಲಿಯುಗದಲ್ಲಿ ಶಂಕರೀಕ್ಷೇತ್ರವೇ ಎಂದು ಅವರು ತಿಳಿದರು. ರಾಜರೆಲ್ಲರೂ ಪುನಃ ತ್ರಿದಂಡಿಯನ್ನು ಪೂಜಿಸಿ ನಮಸ್ಕರಿಸಿ, ಹೇ ಗುರುಗಳೇ, ನಿಮ್ಮಿಂದ ನಮಗೆ ಬ್ರಹ್ಮಜ್ಞಾನವು ದೊರಕಿತು. ಬ್ರಹ್ಮಜ್ಞಾನವನ್ನು ಉಪದೇಶಿಸುವವನೇ ನಮ್ಮ ಗುರುವು; ಅವನೇ ನಮ್ಮ ತಂದೆಯು—

ಗುರುರ್ಬ್ರಹ್ಮಾ ಗುರುರ್ವಿಷ್ಣು ರ್ಗುರುರ್ದೇವೋ ಮಹೇಶ್ವರಃ|
ಗುರುಸ್ಸಾಕ್ಷಾತ್ ಪರಂಬ್ರಹ್ಮ ತಸ್ಮೈ ಶ್ರೀ ಗುರವೇನಮಃ||

ಎಂದಿರುವದರಿಂದ ನಿಮ್ಮ ವಾಕ್ಯವೇ ನಮಗೆ ವೇದವಾಕ್ಯವಾಗಿರುವದು. ನಿಮ್ಮ ಮುಖದಿಂದ ಶ್ರೀ ಶಂಕರೀ ಕ್ಷೇತ್ರಮಹಿಮೆಯನ್ನು ತಿಳಿದು ನಾವು ಧನ್ಯರಾದೆವು.

ಸಂಪೂರ್ಣ.